ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 5 ಭಾನುವಾರ 2022

ಸಂಪುಟ: 43 | ಸಂಚಿಕೆ: 50 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪಠ್ಯಪುಸ್ತಕದಲ್ಲಿ ಬದಲಾವಣೆ ಮಾಡಿದಲ್ಲಿ

ಹೊಸ ಸಂಪುಟ!



ಚಿತ್ರದುರ್ಗ, ಜೂ.4–ಪಠ್ಯಪುಸ್ತಕ ಪರಿಷ್ಕರಣೆಗೆ ಹೊಸ ಸಮಿತಿ ರಚಿಸುವ ಪ್ರಶ್ನೆಯೇ ಇಲ್ಲ. ಈಗಿರುವ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಕೆಲಸ ಮುಗಿದಿರುವುದರಿಂದ ವಿಸರ್ಜನೆ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಮತ್ತು ಹೊಸದುರ್ಗ ತಾಲೂಕುಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಗೆ ಆಗಮಿಸಿದ್ದ ಅವರು ಸುದ್ದಿಗಾರರ ಜೊತೆ ಮಾತನಾಡಿದರು. ಶಾಲಾ ಪಠ್ಯಪುಸ್ತಕ ಬಗ್ಗೆ ಹಲವು ಸ್ವಾಮೀಜಿಗಳು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಅವರ ಜೊತೆ ಚರ್ಚೆ ಮಾಡುತ್ತೇವೆ. ನಮ್ಮದು ಬಸವಪಥ ಸರ್ಕಾರ, ಬಸವಣ್ಣನ ಬಗ್ಗೆ ಬಹಳಷ್ಟು ಉತ್ತಮವಾದ ವಚನಗಳು ಅನೇಕ ಇವೆ. 2015ರಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಪಠ್ಯಪುಸ್ತಕ ಪರಿಷ್ಕರಣೆ ಮಾಡಿರುವ ಬರಗೂರು ರಾಮಚಂದ್ರಪ್ಪ ಸಮಿತಿ ಮತ್ತು ಈಗ ಇರುವ ಸಮಿತಿಗೆ ಕೇವಲ ಒಂದು ವಾಕ್ಯ ವ್ಯತ್ಯಾಸವಿದೆ. ಒಟ್ಟಾರೆ ಅದನ್ನು ಸಮಗ್ರವಾಗಿ ಬದಲಾವಣೆ ಮಾಡಿ ಬಸವಣ್ಣನ ನಿಜವಾದ ಸ್ವರೂಪ ಮತ್ತು ನಿಜವಾದ ಪರಿಚಯವಾಗಬೇಕೆಂದು ಎಲ್ಲರ ಇಚ್ಛೆಯಾಗಿದೆ, ಅದಕ್ಕಾಗಿ ಎಲ್ಲರ ಸಲಹೆಯನ್ನೂ ಪರಿಗಣಿಸಲಾಗುವುದು ಎಂದರು. ಹೆಡಗೇವಾರ್ ಪಠ್ಯ ಇರುತ್ತದೆ, ಅದರಲ್ಲಿ ತಪ್ಪೇನಿದೆ, ಈ ವಿಚಾರದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ಮೊದಲೇ ಹೇಳಿದ್ದೆವು. ಈಗ ಎಲ್ಲಿ ಬದಲಾವಣೆ ಮಾಡುತ್ತೇವೆಯೋ ಅಲ್ಲಿ ಹೊಸ ಸಂಪುಟ ನೀಡುತ್ತೇವೆ, ಕೂಡಲೇ ಮಾಡುವ ಕೆಲಸ ಸರ್ಕಾರ ಮಾಡುತ್ತದೆ ಎಂದು ತಿಳಿಸಿದರು.

ನಾಡದ್ರೋಹಿ ಅಧ್ಯಕ್ಷನ ಸಮಿತಿ ಪರಿಷ್ಕರಿಸಿರುವ ಪಠ್ಯ ರದ್ದು ಮಾಡಿ



ಬೆಂಗಳೂರು, ಜೂ.4–ನಾಡದ್ರೋಹಿ ಅಧ್ಯಕ್ಷನ ಸಮಿತಿ ಪರಿಷ್ಕರಿಸಿರುವ ಪಠ್ಯ ರದ್ದುಮಾಡಬೇಕು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಪಠ್ಯಪುಸ್ತಕ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿ ಸರಣಿ ಟ್ವೀಟ್ ಮಾಡಿರುವ ಅವರು, ರೋಹಿತ್ ಚಕ್ರತೀರ್ಥ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಜತೆಗೆ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಿಎಂ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಕನ್ನಡ ನುಡಿ, ಸಾಹಿತ್ಯ ಮತ್ತು ಸಾಹಿತಿಗಳನ್ನು ಗೇಲಿ ಮಾಡುತ್ತಾ ಬಂದಿರುವ, ಸಾಮಾಜಿಕ ಜಾಲತಾಣಗಳಲ್ಲಿ ವಿಕೃತಿಯ ಅಭಿಪ್ರಾಯಗಳನ್ನು ಹಂಚಿಕೊಂಡು ಸಾಮಾಜಿಕ ಆರೋಗ್ಯವನ್ನು ಹಾಳುಗೆಡಹುತ್ತಾ ಬಂದಿರುವ ರೋಹಿತ್ ಚಕ್ರತೀರ್ಥ ಎಂಬ ಕಿಡಿಗೇಡಿಯ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು? ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ನಾಡಗೀತೆ ಮತ್ತು ರಾಷ್ಟ್ರಕವಿ ಕುವೆಂಪು ▶ 8ನೇ ಪುಟಕ್ಕೆ

ಮೈಸೂರು ಅರಮನೆ ಆವರಣದಲ್ಲಿ ಇಂದು ಮೊದಲ ಹಂತದ ಯೋಗ ತಾಲೀಮು

- ಗಣಪತಿ ಸಚ್ಚಿದಾನಂದ ಶ್ರೀಗಳಿಂದ ಚಾಲನೆ
- 20 ಸಾವಿರ ಮಂದಿ ಯೋಗ ಪ್ರದರ್ಶನ ನಿರೀಕ್ಷೆ

ಮೈಸೂರು, ಜೂ.4(ಜಿಎ)– ಮೈಸೂರು ಅರಮನೆ ಅಂಗಳದಲ್ಲಿ ನಾಳೆ(ಜೂ.5) ಮೊದಲ ಪೂರ್ವಭಾವಿ ಯೋಗ ತಾಲೀಮು



ನಡೆಯಲಿದೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ (ಜೂ.21)ಯಂದು ಮೈಸೂರಿನ ಅರಮನೆ ಆವರಣದಲ್ಲಿ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಸಾಮೂಹಿಕ ಯೋಗ ಪ್ರದರ್ಶನ ನಡೆಯಲಿದ್ದು, ಅದರ ಪೂರ್ವಭಾವಿಯಾಗಿ ಭಾನುವಾರ ಬೆಳಗ್ಗೆ 6 ಗಂಟೆಗೆ ಆಯೋಜಿಸಲಾಗಿರುವ ಮೊದಲ ಯೋಗ ತಾಲೀಮಿಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಚಾಲನೆ ನೀಡಲಿದ್ದಾರೆ.

ಅರಮನೆ ಮಂಡಳಿ ಕಚೇರಿ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಎಸ್.ಎ. ರಾಮದಾಸ್, ಯೋಗ ತಾಲೀಮು ಆಯೋಜನೆ ಬಗ್ಗೆ 'ಮೈಸೂರು ಮಿತ್ರ'ನಿಗೆ ವಿವರಿಸಿದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು ಮೈಸೂರಿನ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಪಾಲ್ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳುತ್ತಿದೆ. ಯೋಗ ಪ್ರದರ್ಶನವನ್ನು ವ್ಯವಸ್ಥಿತವಾಗಿ ಆಯೋಜಿಸುವ ನಿಟ್ಟಿನಲ್ಲಿ 2–3 ಬಾರಿ ತಾಲೀಮು ನಡೆಸಲು ▶ 8ನೇ ಪುಟಕ್ಕೆ

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಪುಷ್ಪಾರ್ಚನೆ



ಮೈಸೂರಿನ ಕೆಆರ್ ವೃತ್ತದಲ್ಲಿ ನಾಲ್ವಡಿ ಪ್ರತಿಮೆಗೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಶಾಸಕರಾದ ತನ್ವೀರ್ ಸೇಠ್, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಇನ್ನಿತರರಿದ್ದರು.

ರಾಜ್ಯದಲ್ಲಿ ಮತ್ತೊಂದು ರಗಳೆ: ಚಡ್ಡಿಗೆ ಬೆಂಕಿ

ಬೆಂಗಳೂರು, ಜೂ.4–ರಾಜ್ಯದಲ್ಲಿ ಹಿಜಾಬ್ ಆಯಿತು, ಧಾರ್ಮಿಕ ಸ್ಥಳದಲ್ಲಿ ವ್ಯಾಪಾರ ವಿವಾದವಾಯ್ತು ಹಲಾಲ್ ಕಟ್ ಆಯ್ತು, ಆಜಾನ್ ಆಯ್ತು, ಇದೀಗ ಚಡ್ಡಿ ಬೀದಿಗೆ ಬಂದಿದೆ. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಚಡ್ಡಿಗೆ ಬೆಂಕಿ ಹಚ್ಚುವ ಸಮರ ತಾರಕಕ್ಕೇರಿದೆ.

ಇತ್ತೀಚೆಗೆ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮನೆ ಮುಂದೆ ಪಠ್ಯಪುಸ್ತಕ ಪರಿಷ್ಕರಣೆ ವಿರೋಧಿಸಿ ಪ್ರತಿಭಟನೆ ನಡೆಸಿದ ಎನ್‌ಎಸ್‌ಯುಐ ಕಾರ್ಯಕರ್ತರು ಸಾಂಕೇತಿಕವಾಗಿ ಆರ್‌ಎಸ್‌ಎಸ್‌ನ ಒಂದು ಪ್ರಮುಖ ವಸ್ತ್ರವಾದ ಚಡ್ಡಿಯನ್ನು ಸುಟ್ಟಿದ್ದರು. ಈ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆಯೂ ನಡೆದಿತ್ತು. ಪೊಲೀಸರು ಎನ್‌ಎಸ್‌ಯುಐನ 22 ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿ, ಬಂಧಿಸಿದ್ದರು. ▶ 8ನೇ ಪುಟಕ್ಕೆ



ಭಾರತಕ್ಕೂ ಕಾಲಿಟ್ಟಿತಾ ಮಂಕಿಪಾಕ್ಸ್!

- ಶಂಕಿತರ ಮಾದರಿ ಪರೀಕ್ಷೆಗೆ ರವಾನೆ
- ದೇಶದ ಜನತೆಯಲ್ಲಿ ಮತ್ತೊಮ್ಮೆ ಆತಂಕ

ನವದೆಹಲಿ, ಜೂ.4–ವಿದೇಶಗಳಲ್ಲಿ ಕಾಣಿಸಿಕೊಂಡಿರುವ ಮಂಕಿಪಾಕ್ಸ್ ಭಾರತಕ್ಕೂ ಕಾಲಿಟ್ಟಂತಿದೆ. ಉತ್ತರಪ್ರದೇಶದ ಗಾಜಿಯಾಬಾದ್‌ನಲ್ಲಿ ಎರಡು ಶಂಕಿತ ಮಂಕಿಪಾಕ್ಸ್ ಮಾದರಿಗಳನ್ನು ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ಎಎನ್‌ಐ ಸುದ್ದಿಸಂಸ್ಥೆ ಇಂದು ವರದಿ ಮಾಡಿದ್ದು, ದೇಶದ ಜನತೆಯಲ್ಲಿ ಆತಂಕ ಹುಟ್ಟಿಸಿದೆ.

ದೇಶದಲ್ಲಿ ಈವರೆಗೂ ಯಾವುದೇ ಮಂಕಿಪಾಕ್ಸ್ ಪ್ರಕರಣ ಕಂಡುಬಂದಿಲ್ಲವಾದ್ದರಿಂದ ಅನಗತ್ಯ ಭಯಪಡಬೇಕಾದ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.



ಮಗುವೊಂದನ್ನು ಪರೀಕ್ಷಿಸಿದ ಗಾಜಿಯಾಬಾದ್‌ನ ಇಬ್ಬರು ವೈದ್ಯರು, ಮಾದರಿಗಳನ್ನು ಪುಣೆಯಲ್ಲಿರುವ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ. ಕಿವಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದ ಮಗುವಿನಲ್ಲಿ ಮಂಕಿಪಾಕ್ಸ್ ರೀತಿಯ ಲಕ್ಷಣಗಳು ಕಂಡುಬಂದಿವೆ. ಅದು ಮಂಕಿಪಾಕ್ಸ್ ಇರಬಹುದೇ ಎಂಬುದು ಖಚಿತವಾಗಿಲ್ಲ.

ದೈಹಿಕ ಸಂಪರ್ಕ ನಿಲ್ಲಿಸಿ

ಲಂಡನ್: ಮಂಕಿಪಾಕ್ಸ್ ಹರಡದಂತೆ ನಿಯಂತ್ರಿಸಲು ಸೋಂಕಿನ ಲಕ್ಷಣವಿರುವವರೊಂದಿಗೆ ಸೆಕ್ಸ್ ಹೊಂದುವುದನ್ನು ತಡೆಗಟ್ಟಬೇಕು ಎಂದು ಇಂಗ್ಲೆಂಡ್‌ನಾದ್ಯಂತ ಆರೋಗ್ಯ ಪ್ರಾಧಿಕಾರಗಳು ಹೊಸ ಮಾರ್ಗಸೂಚಿ ಹೊರಡಿಸಿವೆ. ಇಂಗ್ಲೆಂಡ್‌ನಲ್ಲಿ ಈ ವಾರದಲ್ಲಿ 71 ಪ್ರಕರಣಗಳು ಪತ್ತೆಯಾಗುವುದರೊಂದಿಗೆ ಒಟ್ಟಾರೆ ಪ್ರಕರಣಗಳ ಸಂಖ್ಯೆ 179ಕ್ಕೆ ಏರಿಕೆಯಾಗಿರುವುದರಿಂದ ಸ್ಕಾಟ್‌ಲ್ಯಾಂಡ್, ಉತ್ತರ ಐರ್ಲೆಂಡ್ ಮತ್ತು ವೇಲ್ಸ್‌ಗಳ ಆರೋಗ್ಯ ಪ್ರಾಧಿಕಾರಗಳೊಂದಿಗೆ ಯುಕೆ ಆರೋಗ್ಯ ಸುರಕ್ಷಾ ಏಜೆನ್ಸಿ ಈ ಹೊಸ ಆದೇಶ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಮಂಕಿಪಾಕ್ಸ್ ಸೋಂಕಿತರು ಇತರರೊಂದಿಗೆ ನಿಕಟ ಸಂಪರ್ಕ ಹೊಂದುವುದನ್ನು ಸಹ ನಿಲ್ಲಿಸುವಂತೆ ಸಲಹೆ ನೀಡಲಾಗಿದೆ.

ಬಿಜೆಪಿಗೀ 'ಅಡ್ಡ' ಭೀತಿ: ಉಸ್ತುವಾರಿ ಹಠಾತ್ ಬೆಂಗಳೂರಿಗೆ ದೌಡು

ಬೆಂಗಳೂರು, ಜೂ.4 (ಕೆಎಂಶಿ)– ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಗೂ ಅಡ್ಡ ಮತದಾನದ ಭೀತಿ ಎದುರಾಗಿದೆ. ಪಕ್ಷದ ಕೆಲವು ನಾಯಕರಲ್ಲಿ ಇರುವ ಭಿನ್ನಾಭಿಪ್ರಾಯ ರಾಜ್ಯಸಭಾ ಚುನಾವಣೆಯಲ್ಲಿ ಸ್ಫೋಟಗೊಳ್ಳಬಹುದೆಂಬ ಮಾಹಿತಿ ಆಧಾರದ ಮೇಲೆ ವರಿಷ್ಠರು ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಅವರನ್ನು ಹಠಾತ್ ನಗರಕ್ಕೆ ಕಳುಹಿಸಿದ್ದಾರೆ.



ಅರುಣ್‌ಸಿಂಗ್

ಅವರು ತಡರಾತ್ರಿ ಧಾವಿಸಿ, ನಾಳೆ ಇಡೀ ದಿನ ಪಕ್ಷದ ಕಚೇರಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ಮುಖಂಡರೊಟ್ಟಿಗೆ ಸಮಾಲೋಚನೆ ನಡೆಸಿ, ವರಿಷ್ಠರ ಸಂದೇಶ ತಲುಪಿಸಲಿದ್ದಾರೆ. ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ವಿಜಯೇಂದ್ರ ಅವರಿಗೆ ಅವಕಾಶ ದೊರೆಯದಿರುವುದರಿಂದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಅವರ ಬೆಂಬಲಿಗರು ಸಿಟ್ಟಿಗೆದ್ದಿದ್ದಾರೆ. ಇದೇ ಕಾರಣಕ್ಕೆ ಯಡಿಯೂರಪ್ಪ ಶಿಕ್ಷಕರು ಮತ್ತು ಪದವೀಧರ ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ತಾವು ಸಕ್ರಿಯವಾಗಿಲ್ಲ. ಅವರು ಚುನಾವಣಾ ಕಣಕ್ಕಿಳಿಯದಿರುವುದು ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷದ ಅಭ್ಯರ್ಥಿಗಳ ಚಿಂತೆಗೀಡು ಮಾಡಿದೆ. ▶ 8ನೇ ಪುಟಕ್ಕೆ

ವಿಜಯೇಂದ್ರರಿಗೆ ಪರಿಷತ್ ಪ್ರವೇಶ ಸಿಗದ ಹಿನ್ನೆಲೆಯಲ್ಲಿ ಅಸಮಾಧಾನದ ಹೊಗೆ

ಮೋದಿ ಸಾಧನೆ ಅಸಾಮಾನ್ಯ: ಭಾರತ ವಿಶ್ವಮಾನ್ಯ

- ಅಂತಾರಾಷ್ಟ್ರೀಯ ಮಟ್ಟದಲ್ಲೂ ದೇಶದ ಗೌರವ ಹೆಚ್ಚಳ
- ರಾಜ್ಯಕ್ಕೆ 1,23,776 ಲಕ್ಷ ಕೋಟಿ ಅನುದಾನ ಕೊಡುಗೆ
- ರಾಜ್ಯದ ಪಾಲಿಗೆ ಕಾಮಧೇನು
- 5 ಕೋಟಿ ಜನರಿಗೆ ಮನೆ ನೀಡುವ ಗುರಿ
- ಬಡವರಿಗೆ ಜನೌಷಧಿ ಕೇಂದ್ರ ಸ್ಥಾಪನೆ

ಮೈಸೂರು, ಜೂ. 4(ಎಂಟಿವೈ)–ನರೇಂದ್ರ ಮೋದಿಯವರು ಪ್ರಧಾನಿಯಾಗಿ 8 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ ಇತರರು ಜಂಟಿ ಸುದ್ದಿಗೋಷ್ಠಿ ನಡೆಸಿ, ಮೋದಿಯವರ 8 ವರ್ಷದ ಸಾಧನೆ ಅನಾವರಣಗೊಳಿಸಿದರು.

ಮೊದಲ ಅವಧಿಯಲ್ಲಿ ಮೋದಿ ಪ್ರಧಾನಿಯಾಗಿ ನಡೆಸಿದ ಆಡಳಿತ, ನೀಡಿದ ಯೋಜನೆಗಳನ್ನು ಮೆಚ್ಚಿ ದೇಶದ ಜನತೆ 2ನೇ ಬಾರಿಗೆ ಭಾರೀ ಬಹುಮತದಿಂದ ಗೆಲ್ಲಿಸಿ, ಅವರು ಪ್ರಧಾನಿಯಾಗಿ ಮುಂದುವರೆಯಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿದರು. ಇದುವರೆಗೂ ಯಾವ ಪ್ರಧಾನಿಗಳು ಪ್ರದರ್ಶಿಸದಂತಹ ಗಟ್ಟಿತನವನ್ನು ಮೋದಿ ಪ್ರದರ್ಶಿಸಿದ್ದಾರೆ. ಇದರಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಗೌರವ ಹೆಚ್ಚಾಗಿದೆ. ಮೋದಿ ಆಡಳಿತದಲ್ಲಿ ವಿದೇಶಾಂಗ ವ್ಯವಹಾರಗಳಲ್ಲಿ ಭಾರತ ತನ್ನ ಛಾಪು ಮೂಡಿಸುತ್ತಿದ್ದು, ರಷ್ಯಾ–ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಯಾವುದೇ ಒತ್ತಡಕ್ಕೆ ಒಳಗಾಗದೇ ಭಾರತ ತಟಸ್ಥ ನಿಲುವು ತಾಳುವ ಮೂಲಕ ದಿಟ್ಟತನ ಪ್ರದರ್ಶಿಸಿದೆ. ಮತ್ತೊಂದೆಡೆ ರಷ್ಯಾದಿಂದ ಕಡಿಮೆ ಬೆಲೆಗೆ ಇಂಧನ ತಂದು ದೇಶದ ಜನರಿಗೆ ಪೆಟ್ರೋಲ್‌ಗೆ ಲೀ.ಗೆ 10 ರೂ., ಡೀಸೆಲ್ ಲೀಟರ್‌ಗೆ 8 ರೂ ಕಡಿಮೆ ಮಾಡಿದ್ದಾರೆ ಎಂದರು. ಕೇಂದ್ರದಲ್ಲಿ ಮೋದಿ ಅಧಿಕಾರಕ್ಕೆ ಬಂದ ದಿನದಿಂದ ಎನ್‌ಆರ್‌ಇಜಿ ಅಡಿ ▶ 6ನೇ ಪುಟಕ್ಕೆ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಇತರರು ಜಂಟಿ ಸುದ್ದಿಗೋಷ್ಠಿ ನಡೆಸಿದರು.

ಮೋದಿಯವರದ್ದೂ ನಾಲ್ವಡಿ ವಿಷನ್!

ಮೈಸೂರು: ಪ್ರಧಾನಿ ನರೇಂದ್ರಮೋದಿಯವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮ್ಯಾನ್ ಆಫ್ ವಿಷನ್‌ನಂತೆ ಕೆಲಸ ಮಾಡುತ್ತಿದ್ದಾರೆ ಎಂದು ಶಾಸಕ ಎಸ್.ಎ.ರಾಮದಾಸ್ ಬಣ್ಣಿಸಿದರು. ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ▶ 6ನೇ ಪುಟಕ್ಕೆ

ಶ್ರೀರಂಗಪಟ್ಟಣ ಮೂಲ ಮಂದಿರ ಚಲೋಗೆ ತಡೆ

- ಕಿರಂಗೂರಿನಿಂದ ಆರಂಭವಾದ ಜಾಥಾಗೆ ಅಲ್ಲೇ ನಿರ್ಬಂಧ
- ಬ್ಯಾರಿಕೇಡ್ ಭೇದಿಸಿ ನುಗ್ಗಲು ಯತ್ನಿಸಿದ ಯುವಕ
- ಮೈಸೂರು-ಬೆಂಗಳೂರು ರಸ್ತೆ ಸಂಚಾರ ಅಸ್ತವ್ಯಸ್ತ
- ಸಾರ್ವಜನಿಕರ ಚಲನವಲನದ ಮೇಲೆ ಹದ್ದಿನಕಣ್ಣು



ಶ್ರೀರಂಗಪಟ್ಟಣದಲ್ಲಿ ಮೂಲ ಮಂದಿರ ಚಲೋ ಜಾಥಾಗೆ ತಡೆ.

> ಈ ಮಧ್ಯೆ ಇಬ್ಬರು ಯುವಕರು ಜಾಮಿಯಾ ಮಸೀದಿ ಬಳಿ ಕುಳಿತು ಹನುಮ ಜಪ ಮಾಡುತ್ತಿರುವಂತಿರುವ ವೀಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಇದರ ಅಸಲಿಯತ್ತಿನ ಬಗ್ಗೆ ಶಂಕೆ ವ್ಯಕ್ತವಾಗಿದೆ. ಇದಂತೂ ಈಗಿನದ್ದಲ್ಲ ಎಂದು ಪೊಲೀಸರೇ ಸ್ಪಷ್ಟಪಡಿಸಿದ್ದಾರೆ. ಅಷ್ಟಕ್ಕೂ ಪೊಲೀಸರ ಸರ್ಪಗಾವಲು ಭೇದಿಸಿ ಒಳ ಪ್ರವೇಶಿಸಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸಿದೆ.



ಎಸ್ಪಿ ಎನ್.ಯತೀಶ್ ಸ್ಥಳದಲ್ಲೇ ಮೊಕ್ಕಾಂ.

ಶ್ರೀರಂಗಪಟ್ಟಣ, ಜೂ.4(ವಿನಯ್ ಕಾರೇಕುರ)– ವಿಶ್ವ ಹಿಂದೂ ಪರಿಷತ್, ಭಜರಂಗದಳ ಸೇರಿದಂತೆ ಹಿಂದೂಪರ ಕಾರ್ಯಕರ್ತರು ಕರೆ ನೀಡಿದ್ದ 'ಮೂಲ ಮಂದಿರ ಚಲೋ' ಜಾಥಾ ಪಟ್ಟಣ ಪ್ರವೇಶಿಸುವುದನ್ನು ತಡೆಯುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಜಾಮಿಯಾ ಮಸೀದಿಯಲ್ಲಿ ಹನುಮಂತನ ಪೂಜೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಪಟ್ಟಣದಲ್ಲಿ ಮೂಲ ಮಂದಿರ ಚಲೋ ಜಾಥಾಕ್ಕೆ ಶನಿವಾರ ಕರೆ ನೀಡಲಾಗಿತ್ತು. ಇದಕ್ಕೆ ಅವಕಾಶ ನೀಡದ ಪೊಲೀಸರು ಮಸೀದಿ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು.

500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಸರ್ಪಗಾವಲಿದ್ದರು. ಬೆಳಗ್ಗೆ 11 ಗಂಟೆ ವೇಳೆಗೆ ತಾಲೂಕಿನ ಕಿರಂಗೂರು ವೃತ್ತದಿಂದ ಘೋಷಣೆ ಕೂಗುತ್ತಾ ಜಾಥಾ ಹೊರಟ ಬಜರಂಗದಳ, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ಸೇನೆ ಕಾರ್ಯಕರ್ತರನ್ನು ಪೊಲೀಸರು ಅಲ್ಲೇ ▶ 8ನೇ ಪುಟಕ್ಕೆ

ಸಂಚಾರ ನಿಯಮ ಉಲ್ಲಂಘನೆ ವಿಶೇಷ ಕಾರ್ಯಾಚರಣೆ

ಹತ್ತೇ ದಿನದಲ್ಲಿ 6,329 ಪ್ರಕರಣದಲ್ಲಿ 28.67 ಲಕ್ಷ ರೂ. ದಂಡ ಸಂಗ್ರಹ

ಮೈಸೂರು, ಜೂ.4(ಆರ್‌ಕೆ)– ಸಂಚಾರ ನಿಯಮ ಉಲ್ಲಂಘಿಸುವ ವಾಹನ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ಆರಂಭಿಸಿರುವ ಮೈಸೂರಿನ ಸಂಚಾರ ಠಾಣೆಗಳ ಪೊಲೀಸರು ಕೇವಲ 10 ದಿನದಲ್ಲಿ 6,329 ಪ್ರಕರಣ ದಾಖಲಿಸಿ ಒಟ್ಟು 28,67, 400 ರೂ. ದಂಡ ಸಂಗ್ರಹಿಸಿದ್ದಾರೆ. ದ್ವಿಚಕ್ರ ವಾಹನದಲ್ಲಿ ಮೂವರು



ಸವಾರಿ ಮಾಡುವುದು, ಹೆಲ್ಮೆಟ್ ಧರಿಸದೇ ಚಾಲನೆ, ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಕೆ, ಸೀಟ್ ಬೆಲ್ಟ್ ಧರಿಸದಿರುವುದು, ಸಿಗ್ನಲ್ ಜಂಪ್, ಅತೀ ವೇಗ ಮತ್ತು ಅಜಾಗರೂಕ ಚಾಲನೆ, ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆಯಂತಹ ಸಂಚಾರ ನಿಯಮ ಉಲ್ಲಂಘನೆ ಮಾಡುವುದು ಹೆಚ್ಚಾಗಿ ಕಂಡು ಬಂದ ಕಾರಣ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ನಿರ್ದೇಶನದಂತೆ ಮೇ 25ರಿಂದ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ಆರಂಭಿಸಿದ್ದರು.

ಮೇ 25ರಿಂದ ಜೂ.3ರ ವರೆಗೆ ಕಳೆದ 10 ದಿನಗಳಲ್ಲಿ 6,329 ಪ್ರಕರಣಗಳನ್ನು ದಾಖಲಿಸಲಾಗಿದ್ದು, ಒಟ್ಟು 28,67, 400 ರೂ. ದಂಡ ವಸೂಲು ಮಾಡಲಾಗಿದೆ. ಕೆ.ಆರ್.ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ 2,283 ಪ್ರಕರಣ ದಾಖಲಿಸಿ 8,64,200 ರೂ. ದಂಡ ವಿಧಿಸಿದ್ದರೆ, ಎನ್.ಆರ್. ಸಂಚಾರ ಠಾಣೆಯಲ್ಲಿ 1,501 ಪ್ರಕರಣದಲ್ಲಿ 7,44,400 ರೂ. ಹಾಗೂ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು 1,077 ಪ್ರಕರಣ ದಾಖಲಿಸಿ ಒಟ್ಟು 5,08,900 ರೂ. ದಂಡ ವಸೂಲಿ ಮಾಡಿದ್ದಾರೆ. ಅದೇ ರೀತಿ ವಿವಿಪುರಂ ಸಂಚಾರ ಠಾಣೆ ಪೊಲೀಸರು 786 ಪ್ರಕರಣ ದಾಖಲಿಸಿದ್ದು, 3,79,600 ರೂ., ದೇವರಾಜ ಸಂಚಾರ ಠಾಣೆ ಪೊಲೀಸರು 682 ಪ್ರಕರಣದಲ್ಲಿ 3,70,300 ರೂ.ಗಳನ್ನು ದಂಡದ ರೂಪದಲ್ಲಿ ಸಂಗ್ರಹಿಸಿದ್ದಾರೆ.

ರಸ್ತೆ ಸುರಕ್ಷತೆ, ನಿಯಮ ಪಾಲನೆ, ವಾಹನ ಚಾಲನೆಯಲ್ಲಿ ಶಿಸ್ತು ಮೂಡಿಸುವ ಮೂಲಕ ಅಪಘಾತಗಳನ್ನು ತಡೆಗಟ್ಟಿ ಸಾವು–ನೋವುಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಸಂಚಾರ ಪೊಲೀಸರು ಈ ಕಾರ್ಯಾಚರಣೆ ನಡೆಸುತ್ತಿದ್ದು, ವಾಹನ ಸವಾರರು ನಿಯಮ ಪಾಲಿಸಬೇಕೆಂದು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಸಲಹೆ ನೀಡಿದ್ದಾರೆ.

ಪ್ರಧಾನಿ ಮೋದಿ ಪಾಲ್ಗೊಳ್ಳುವ ಯೋಗ ಕಾರ್ಯಕ್ರಮಕ್ಕೆ ಪರಿಸ್ಥಿತಿ ಆಧರಿಸಿ ಆದ್ಯತೆ ಮೇರೆಗೆ ಸುರಕ್ಷಿತ ಸ್ಥಳಗಳ ಆಯ್ಕೆ

ಪ್ಲಾನ್ 'ಎ': ಮೈಸೂರು ಅರಮನೆ, ಪ್ಲಾನ್ 'ಬಿ': ಚಾಮುಂಡಿ ವಿಹಾರ ಒಳಾಂಗಣ ಪ್ಲಾನ್ 'ಸಿ': ಅರಮನೆ ದರ್ಬಾರ್ ಹಾಲ್-ಮೈಸೂರು ಜಿಲ್ಲಾಡಳಿತದಿಂದ ಚಿಂತನೆ

ಮೈಸೂರು, ಜೂ.4(ಆರ್‌ಕೆ)– ಜೂ.21ರಂದು ಮೈಸೂರಿನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಮುಖ್ಯ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುತ್ತಿರುವುದರಿಂದ ಒಂದು ವೇಳೆ ಅಂದು ಮಳೆ ಬಂದರೆ ಈಗ ನಿಗದಿಯಾಗಿರುವ ಮೈಸೂರು ಅರಮನೆ ಮೈದಾನಕ್ಕೆ ಬದಲಾಗಿ ಇನ್ನೂ ಎರಡು ಸ್ಥಳಗಳನ್ನು ಜಿಲ್ಲಾಡಳಿತವು ಪರ್ಯಾಯವಾಗಿ ಗುರುತಿಸಿದೆ.

ಜೂ.21ರಂದು ಮಳೆ ಸುರಿದು,ಅರಮನೆ ಆವರಣ ಒದ್ದೆಯಾದರೆ ಯೋಗ ಪ್ರದರ್ಶನಕ್ಕೆ ತೊಂದರೆಯಾಗಬಹುದೆಂಬ ಕಾರಣಕ್ಕೆ ಕೇಂದ್ರ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳ ಸೂಚನೆಯಂತೆ ಜಿಲ್ಲಾಡಳಿತವು ಎರಡು ಪರ್ಯಾಯ ಸುರಕ್ಷಿತ ಸ್ಥಳಗಳಲ್ಲಿ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಚಿಂತನೆ ನಡೆಸಿದೆ.

Plan A: ಮಳೆ ಬಾರದೇ ಇದ್ದಲ್ಲಿ ಈಗಾಗಲೇ ನಿಗದಿಯಾಗಿರುವಂತೆ ಮೈಸೂರು ಅರಮನೆ ಆವರಣದಲ್ಲಿ 15 ಸಾವಿರ ಮಂದಿ ಯೋಗ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಪ್ರಧಾನಿ, ಮುಖ್ಯಮಂತ್ರಿ, ಸಚಿವರು ಹಾಗೂ ಗಣ್ಯಾತಿಗಣ್ಯರಿಗೆ ಭವ್ಯ ವೇದಿಕೆ, ಪಾರ್ಕಿಂಗ್, ಪ್ರವೇಶ ಮತ್ತು ನಿರ್ಗಮನ ದ್ವಾರ ಭದ್ರತಾ ವ್ಯವಸ್ಥೆ ಸೇರಿದಂತೆ ಸಕಲ ಸೌಲಭ್ಯಗಳನ್ನು ಕೇಂದ್ರ ಸರ್ಕಾರದ ನಿರ್ದೇಶನದಂತೆ ಒದಗಿಸುವ ಕಾರ್ಯ ಭರದಿಂದ ಸಾಗಿದೆ.

ಜೂ.20ರ ಸಂಜೆ ಮತ್ತು 21ರ ಮುಂಜಾನೆ ಮಳೆ ಬಾರದಿದ್ದಲ್ಲಿ ಅರಮನೆ ಆವರಣವನ್ನು ಯೋಗ ಪ್ರದರ್ಶನಕ್ಕೆ ಅಂತಿಮಗೊಳಿಸಲಾಗಿದೆ. ಈಗಾಗಲೇ ಕೇಂದ್ರ ಆಯುಷ್ ಇಲಾಖೆ, ಭದ್ರತಾ ವಿಭಾಗದ ಮುಖ್ಯಸ್ಥರು ಭೇಟಿ ನೀಡಿ, ಪರಿಶೀಲನೆ ಕೂಡ ನಡೆಸಿದ್ದಾರೆ.



ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಸ್ಥಳ ಪರಿಶೀಲನೆ ನಡೆಸಿದರು. ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಸುರೇಶ್ ಇನ್ನಿತರರು ಚಿತ್ರದಲ್ಲಿದ್ದಾರೆ.

Plan B: ಒಂದು ವೇಳೆ ಜೂ.20ರ ಸಂಜೆ ಮಳೆ ಬಂದರೆ ಪರ್ಯಾಯವಾಗಿ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಒಳಾಂಗಣ ಕ್ರೀಡಾಂಗಣವನ್ನು ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಗುರ್ತಿಸಲಾಗಿದೆ. ಸುಮಾರು 500 ಮಂದಿ ಸಾಮರ್ಥ್ಯದ ಕ್ರೀಡಾಂಗಣದಲ್ಲಿ ಪ್ರಧಾನಮಂತ್ರಿಗಳು ಆಗಮಿಸುವುದರಿಂದ 350 ಮಂದಿ ಯೋಗ ಪ್ರದರ್ಶನ ಮಾಡಲು ಅವಕಾಶ ಕಲ್ಪಿಸಬಹುದಾಗಿದ್ದು, ಮಳೆ ಬಂದರೂ ಮೇಲ್ಛಾವಣಿ ಇರುವುದರಿಂದ ಸುರಕ್ಷಿತ ಸ್ಥಳ ಎಂದು ಅಭಿಪ್ರಾಯಿಸಲಾಗಿದೆ. ಈ ಪರ್ಯಾಯ ಸ್ಥಳದಲ್ಲಿ ವೇದಿಕೆ, ಯೋಗ ಮ್ಯಾಟ್, ಪಾದರಕ್ಷೆ ಬಿಡುವ ಸ್ಥಳ, ಕುಡಿಯುವ ನೀರು, ಶೌಚಾಲಯ, ಬೆಳಕು ಮುಂತಾದ ಸೌಲಭ್ಯ ಕಲ್ಪಿಸಲು ಜಿಲ್ಲಾಡಳಿತ ಮತ್ತು ಕ್ರೀಡಾ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಸ್ಥಳ ಪರಿಶೀಲನೆ ನಡೆಸಲಿದ್ದಾರೆ.

Plan C: ಪ್ರಧಾನಮಂತ್ರಿಗಳಿಗೆ ಭಾರೀ ಭದ್ರತಾ ವ್ಯವಸ್ಥೆ ಅಗತ್ಯವಿರುವುದರಿಂದ ಅರಮನೆ ದರ್ಬಾರ್ ಹಾಲ್‌ನಲ್ಲೇ ಯೋಗ ಪ್ರದರ್ಶನಕ್ಕೆ ವ್ಯವಸ್ಥೆ ಕಲ್ಪಿಸಬಹುದೆಂಬ ಚಿಂತನೆ ಕೂಡ ನಡೆಸಲಾಗಿದ್ದು, ಮಳೆ ಬಂದರೆ ಪ್ರಧಾನಿಗಳನ್ನು ಬೇರೆ ಸ್ಥಳಕ್ಕೆ ಕರೆದೊಯ್ಯುವ ಬದಲು ಅರಮನೆ ದರ್ಬಾರ್ ಹಾಲ್‌ನಲ್ಲೇ ಆಯೋಜಿಸುವುದು ಸೂಕ್ತ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳು, ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಈ ಬಗ್ಗೆ ಚರ್ಚಿಸಿ ಅವರಲ್ಲಿ ಪರ್ಯಾಯವಾಗಿ ದರ್ಬಾರ್ ಹಾಲ್‌ಗೆ ಸ್ಥಳಾಂತರಿಸಲು ಸಮ್ಮತಿಗಾಗಿ ರಾಜ ಮನೆತನದವರನ್ನು ಕೋರಿಕೊಳ್ಳಲು ನಿರ್ಧರಿಸಲಾಗಿದೆ. ಹಾಗೂ ಈ ಸ್ಥಳವನ್ನು Plan C ಎಂದು ಪರಿಗಣಿಸಲಾಗಿದೆ.

ಒಟ್ಟಾರೆ ವರುಣನ ಕೃಪೆಯಿಂದ ಯಾವ ಸ್ಥಳದಲ್ಲಿ ಯೋಗ ಪ್ರದರ್ಶನ ನಡೆಯುತ್ತದೆ ಎಂಬುದನ್ನು ನಿರ್ಧರಿಸಲಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಅರಮನೆ ಆವರಣ ಅಂತಿಮ ಸ್ಥಳವಾಗಲಿದೆ. ತಪ್ಪಿದಲ್ಲಿ 'ಪ್ಲಾನ್ ಬಿ', ಅಥವಾ 'ಪ್ಲಾನ್ ಸಿ' ಯೋಜನೆಯಂತೆ ಈ ಬಾರಿ ಮೈಸೂರಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಒಂದು ನಿಲ್ದಾಣ ಒಂದು ಉತ್ಪನ್ನ ಯಶಸ್ವಿ

- ಯೋಜನೆ 67 ನಿಲ್ದಾಣಕ್ಕೆ ವಿಸ್ತರಿಸಲು ನಿರ್ಧಾರ
- ಇದಕ್ಕಾಗಿ ಅರ್ಜಿ ಆಹ್ವಾನ
- ಕೆಳಸ್ತರದ ವ್ಯಾಪಾರಿಗಳಿಗೆ ಆದಾಯ ಹೆಚ್ಚಳ ಅವಕಾಶ

ಮೈಸೂರು, ಜೂ.4(ಎಸ್‌ಬಿಡಿ)– ಮೈಸೂರು ರೈಲ್ವೆ ನಿಲ್ದಾಣದಲ್ಲಿ ಯಶಸ್ವಿಯಾದ 'ಒಂದು ನಿಲ್ದಾಣ ಒಂದು ಉತ್ಪನ್ನ' ಯೋಜನೆಯನ್ನು 67 ನಿಲ್ದಾಣಗಳಿಗೆ ವಿಸ್ತರಿಸಲು ತೀರ್ಮಾನಿಸಲಾಗಿದ್ದು, ಇದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸ್ಥಳೀಯ ಉತ್ಪನ್ನಗಳನ್ನು ಜನಪ್ರಿಯಗೊಳಿಸುವ ಮೂಲಕ ಕೆಳಸ್ತರದ ವ್ಯಾಪಾರಿಗಳಿಗೆ ಹೆಚ್ಚಿನ ಆದಾಯದ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ 'ವೋಕಲ್ ಫಾರ್ ಲೋಕಲ್' ಕಾರ್ಯಕ್ರಮದಡಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ವತಿಯಿಂದ ಮೈಸೂರು ರೈಲ್ವೆ ನಿಲ್ದಾಣದಲ್ಲಿ 'ಒಂದು ನಿಲ್ದಾಣ ಒಂದು ಉತ್ಪನ್ನ' ಯೋಜನೆ ಅನುಷ್ಠಾನಗೊಳಿಸಿತ್ತು. ಇದಕ್ಕೆ ಸಾರ್ವಜನಿಕರಿಂದ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾದ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ಚಾಮರಾಜನಗರ, ಹಾಸನ, ಮಂಗಳೂರು, ಮಡಿಕೇರಿ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳ ವ್ಯಾಪ್ತಿಯ ಒಟ್ಟು 67 ರೈಲ್ವೆ ನಿಲ್ದಾಣಗಳಿಗೆ ಈ ಯೋಜನೆ ವಿಸ್ತರಣೆಗೆ ಮುಂದಾಗಿದೆ.



ಸ್ಥಳೀಯ ವಿಶೇಷ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಒದಗಿಸುವ ಮೂಲಕ ಉತ್ತೇಜನ ನೀಡುವ ಉದ್ದೇಶವಿದ್ದು, ಕರಕುಶಲ ವಸ್ತುಗಳು, ಕಲಾಕೃತಿಗಳು, ಜವಳಿ ಮತ್ತು ಕೈಮಗ್ಗಗಳ ನೇಯ್ದ ಬಟ್ಟೆ, ಸಾಂಪ್ರದಾಯಿಕ ಉಡುಪುಗಳು, ಸ್ಥಳೀಯ ಕೃಷಿ ಉತ್ಪನ್ನಗಳು, ಸಂಸ್ಕರಿಸಿದ ಹಾಗೂ ಅರೆ–ಸಂಸ್ಕರಿಸಿದ ಆಹಾರ, ಮಸಾಲೆಗಳು, ಅರಣ್ಯ ಉತ್ಪನ್ನಗಳು, ಶ್ರೀಗಂಧದ ಉತ್ಪನ್ನಗಳು, ಕಾಫಿ, ಏಲಕ್ಕಿ ಇನ್ನಿತರ ವಸ್ತುಗಳನ್ನು ಸ್ಥಳೀಯ ವಿಶೇಷತೆಗೆ ಅನುಗುಣವಾಗಿ ಗುರುತಿಸಲಾಗಿದೆ.

ಪ್ರತಿಯೊಂದು ನಿಲ್ದಾಣಕ್ಕೆ ಗುರುತಿಸಲಾದ ಉತ್ಪನ್ನಗಳ ಪಟ್ಟಿ http://www. swr.ind ian railways.gov.in/ನಲ್ಲಿ ಲಭ್ಯವಿದ್ದು, ಶೀಘ್ರದಲ್ಲೇ ಅರ್ಜಿ ಆಹ್ವಾನಿಸಿ ದಿನಾಂಕ ಸೂಚಿಸಲಾಗುವುದು. ಆಸಕ್ತರು ರೈಲ್ವೆಯ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಡಾ.ಮಂಜುನಾಥ್ ಕನಮಡಿ ಅವರನ್ನು ಭೇಟಿ ಮಾಡಬಹುದು. ಮಾಹಿತಿಗೆ ಮೊ.ಸಂ.888 4303801, 7977509065.

ಅರ್ಜಿ ಆಹ್ವಾನ: ತಮ್ಮ ಉತ್ಪನ್ನಗಳನ್ನು ವಿಭಾಗದಾದ್ಯಂತ ರೈಲ್ವೆ ನಿಲ್ದಾಣಗಳಲ್ಲಿ ಮಾರಾಟ ಮಾಡಲು ಏಜೆನ್ಸಿಗಳು, ಕುಶಲಕರ್ಮಿಗಳು, ನೇಕಾರರು, ಕರಕುಶಲಕರ್ಮಿಗಳು, ಸ್ವ–ಸಹಾಯ ಗುಂಪುಗಳು, ಬುಡಕಟ್ಟು ಸಹಕಾರ ಸಂಘಗಳು, ಸಮಾಜದ ಕಟ್ಟಕಡೆಯ ಹಾಗೂ ದುರ್ಬಲ ವರ್ಗಗಳಿಂದ ಅರ್ಜಿ ಆಹ್ವಾನಿಸಲು ಉದ್ದೇಶಿಸಿದೆ. ಮಾರಾಟ ಅವಧಿ 15 ದಿನಗಳಾಗಿದ್ದು, ಅರ್ಜಿ ಸಲ್ಲಿಕೆಗೆ 1 ಸಾವಿರ ರೂ. ಶುಲ್ಕ ಪಾವತಿಸಬೇಕಾಗುತ್ತದೆ. ನಿರ್ದಿಷ್ಟ ನಿಲ್ದಾಣಕ್ಕೆ ಒಂದಕ್ಕಿಂತ ಹೆಚ್ಚು ಅರ್ಜಿ ಸಲ್ಲಿಕೆಯಾದರೆ ಆದ್ಯತಾ ಪಟ್ಟಿ ಆಧಾರದಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಲಾಗುತ್ತದೆ. ಸೂಕ್ತ ಸ್ಥಳದಲ್ಲಿ ತಾತ್ಕಾಲಿಕ ಕ್ರಿಯಾತ್ಮಕ ಅಂಗಡಿ ವ್ಯವಸ್ಥೆ ಮಾಡುವುದರ ಜೊತೆಗೆ ಉತ್ಪನ್ನಗಳನ್ನು ನಿಲ್ದಾಣ ಮತ್ತು ಪ್ಲಾಟ್ ಫಾರ್ಮ್‌ಗಳಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ತಿಳಿಸಿದ್ದಾರೆ.

ಇಂದಿನಿಂದ ಪ್ರತಿ ಭಾನುವಾರ 'ಅಯೋಧ್ಯ ಕಾಂಡ' ಪ್ರದರ್ಶನ

ಮೈಸೂರು, ಜೂ.4–ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕವು ಜೂ.5ರ ಭಾನುವಾರ ಸಂಜೆ 7 ಗಂಟೆಗೆ ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತಿ ಸಭಾಂಗಣದಲ್ಲಿ ಪ್ರದರ್ಶನಗೊಳ್ಳಲಿದೆ. ನಾಟಕವು ಇಲ್ಲಿಂದ ಮುಂದೆ ಪ್ರತಿ ಭಾನುವಾರ ಸಂಜೆ 7ಕ್ಕೆ ಪ್ರದರ್ಶನಗೊಳ್ಳಲಿದೆ. ಈ ನಾಟಕವನ್ನು ಹಿರಿಯ ರಂಗನಿರ್ದೇಶಕ ಪ್ರಸನ್ನ ರಚಿಸಿ, ನಿರ್ದೇಶಿಸಿದ್ದು, ಅನುಶೆಟ್ಟಿ ಸಂಗೀತ ಸಂಯೋಜಿಸಿದ್ದಾರೆ. ವಸ್ತ್ರಾಲಂಕಾರ ನಂದಿನಿ. ಕೆ.ಆರ್ ಹಾಗೂ ಪ್ರಸಾದನ ಬಿ.ಎಮ್. ರಾಮಚಂದ್ರ ನಿರ್ವಹಿಸಲಿದ್ದಾರೆ. ಮುಖ್ಯ ಪಾತ್ರದಲ್ಲಿ ರಂಗಾಯಣದ ಹಿರಿಯ ನಟರಾದ ಪ್ರಶಾಂತ್ ಹಿರೇಮಠ್, ರಾಷ್ಟ್ರೀಯ ನಾಟಕ ಶಾಲೆಯ ಪದವೀಧರೆ ಪದ್ಮಶ್ರೀ.ಸಿ.ಆರ್, ಮುನ್ನ, ರಾಜಲಕ್ಷ್ಮೀ ಹಾಗೂ ವಿಶ್ವಾಸ್ ಅಭಿನಯಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಬಿ.ರಾಜೇಶ್ 9590259095 ಸಂಪರ್ಕಿಸಬಹುದು.



ಕಾಗಿನೆಲೆ ಗುರುಪೀಠದ ಕೆ.ಆರ್.ನಗರ ಶಾಖಾಮಠದ ಪೀಠಾಧ್ಯಕ್ಷರಾದ ಶ್ರೀ ಶಿವಾನಂದಪುರಿ ಸ್ವಾಮೀಜಿ 61ನೇ ಹುಟ್ಟುಹಬ್ಬದ ಹಿನ್ನೆಲೆ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಮೈಸೂರಲ್ಲಿ ಶುಭಾಶಂಯ ಕೋರಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ, ಪಠ್ಯ ಸಾಮಗ್ರಿಗಳ ವಿತರಣೆ



ಮೈಸೂರು,ಜೂ 4(ಜಿಎ)– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೃಷಿ, ಬ್ಯಾಂಕಿಂಗ್, ಶಿಕ್ಷಣ, ಕೈಗಾರಿಕಾ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ ಎಂದು ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ತಿಳಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್‌ರ 138ನೇ ಜಯಂತಿ ಅಂಗವಾಗಿ ಕೃಷ್ಣರಾಜ ಯುವ ಬಳಗ ವತಿಯಿಂದ ಅಕ್ಕನ ಬಳಗ ಶಾಲೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಹಾಗೂ ಪಠ್ಯ ಸಾಮಗ್ರಿಗಳನ್ನು ವಿತರಿಸಿ, ಮಾತನಾಡಿದರು.

ದಾನ ಧರ್ಮ ಮಾಡುವುದರಿಂದ ಇರುವ ಸಂಪತ್ತು ಕಡಿಮೆಯಾಗುವುದಿಲ್ಲ ಬದಲಿಗೆ ಸಂಪತ್ತು ಹೆಚ್ಚಾಗುತ್ತದೆ. ಅದರ ಜತೆಗೆ ಆಯುಷ್ಯ ಕೂಡ ವೃದ್ಧಿಸುತ್ತದೆ. ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ನಿರ್ಗತಿಕರಿಗೆ, ಬಡವರಿಗೆ ಸಹಾಯ ಮಾಡಿ ಬಡವರ ಕಂಬನಿ ಒರೆಸುವ ಧರ್ಮದ ಕೆಲಸ ಮಾಡಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ನಗರಕ್ಕೆ ನೀಡಿರುವ ಕೊಡುಗೆಗಳನ್ನು ಎಂದೆಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಜಿ.ಆರ್.ಅರಸ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸಪ್ಪ, ಬಿಜೆಪಿ ಮಾಧ್ಯಮ ವಕ್ತಾರ ಕೇಬಲ್ ಮಹೇಶ್, ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್, ಅಕ್ಕನ ಬಳಗ ಸಂಸ್ಥೆ ಅಧ್ಯಕ್ಷೆ ಗೀತಾ ಗುರುಸ್ವಾಮಿ, ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ಲೀಲಾ ಸತೀಶ್ಚಂದ್ರ, ನೀಲಾಂಬಿಕಾ, ಉದ್ಯಮಿ ರಾಜೇಶ್, ಶಾಲೆ ಮುಖ್ಯ ಶಿಕ್ಷಕಿ ಸುಗುಣವತಿ, ರಾಕೇಶ್ ಕುಂಚಿಟಿಗ, ದುರ್ಗಾಪ್ರಸಾದ್ ಇನ್ನಿತರರಿದ್ದರು.

ಇಂದು ಎಲೆಕ್ಟ್ರಿಕಲ್ ವಾಹನಗಳ ಜಾಥಾ

ಮೈಸೂರು, ಜೂ.4– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಾಳೆ(ಜೂ.5) ಬೆಳಿಗ್ಗೆ 7.30ಕ್ಕೆ ಅರಸ್ ಕಾರ್ ವತಿಯಿಂದ ಮೈಸೂರಿನ ಅರಮನೆ ಎದುರಿರುವ ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನದಿಂದ ಎಲೆಕ್ಟ್ರಿಕಲ್ ವಾಹನಗಳ ಜಾಥಾ ಏರ್ಪಡಿಸಲಾಗಿದೆ. ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಏರ್ಪಡಿಸಿರುವ ಈ ಜಾಥಾವನ್ನು ಅರಸ್ ಕಾರ್ ಸಂಸ್ಥಾಪಕ ನಿರ್ದೇಶಕ ಕಾಂತರಾಜ್ ಅರಸ್ ಉದ್ಘಾಟಿಸಲಿದ್ದು, ಜಾಥಾವು ದೇವರಾಜ ಅರಸು ರಸ್ತೆ ಮತ್ತು ನೂರಡಿ ರಸ್ತೆಯಲ್ಲಿ ಸಾಗಲಿದೆ.

ರಾಜಮ್ಮ ನಿಧನ



ಮೈಸೂರು, ಜೂ.4–ಮೈಸೂರಿನ ಕುವೆಂಪುನಗರದ ನವಿಲು ರಸ್ತೆ ನಿವಾಸಿ ರಾಜಮ್ಮ (96) ಶನಿವಾರ ಸಂಜೆ ನಿಧನರಾದರು. ಮೃತರು ಕೆಎಸ್‌ಆರ್‌ಟಿಸಿ ನಿವೃತ್ತ ನೌಕರ ಶ್ರೀನಿವಾಸ್, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.06.2022 ಭಾನುವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ಷಷ್ಠೀ, ನಕ್ಷತ್ರ : ಆಶ್ಲೇಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 80ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ಸುಬ್ರಹ್ಮಣ್ಯ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಶ್ರೀ ನಾಗಲಿಂಗೇಶ್ವರಸ್ವಾಮಿ ದೇವಸ್ಥಾನ :** ಗಣಪತಿ, ನಾಗರ ಪ್ರತಿಷ್ಠಾಪನೆ, ಬೆಳಗ್ಗೆ ಪುಣ್ಯಾಹ, ಸಂಜೆ ಕಲಶ ಸ್ಥಾಪನೆ, ಆಶ್ಲೇಷ ಬಲಿಪೂಜೆ, ಸ್ಥಳ: ದೇವಸ್ಥಾನ, ತೊಣಚಿಕೊಪ್ಪಲು.

■ **ಮೈಸೂರು ಸೈನ್ಸ್ ಫೌಂಡೇಶನ್– ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ಸಂಗ್ರಹಾಲಯ:** ಪರಿಸರ ದಿನಾಚರಣೆ, 6ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಚಿತ್ರ ರಚನೆ ಸ್ಪರ್ಧೆ ಮತ್ತು 9ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರಬಂಧ ರಚನೆ ಸ್ಪರ್ಧೆ, ಸ್ಥಳ: ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯ, ಸಿದ್ಧಾರ್ಥನಗರ, ಬೆಳಗ್ಗೆ 9ಕ್ಕೆ.

■ **ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್, ಅನಿಕೇತನ ಸೇವಾ ಟ್ರಸ್ಟ್ :** ವಿಶ್ವ ಪರಿಸರ ದಿನದ ಅಂಗವಾಗಿ ಫ್ರೂಟ್ ಪಾರ್ಕ್‌ಗೆ ಚಾಲನೆ, ಗಿಡ ನೆಡುವುದಕ್ಕೆ ಚಾಲನೆ : ಅಂತಾರಾಷ್ಟ್ರೀಯ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್, ಅಧ್ಯಕ್ಷತೆ : ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು: ಜಿಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಶ್ರೀಹರಿ, ಗ್ರೇಸ್ ವಿದ್ಯಾಸಂಸ್ಥೆ ಸಂಸ್ಥಾಪಕ ಫಾ. ತಿಮೋಥಿ ಜಾನ್ ಎಸ್., ಸ್ಥಳ: ಸ್ಯಾನಿಟೋರಿಯಂ ಹಿಂಭಾಗ, ಕಾಂಟೂರ್ ರಸ್ತೆ, ಮಹದೇಶ್ವರ ಬಡಾವಣೆ, ಬೆಳಗ್ಗೆ 9ಕ್ಕೆ.

■ **ಸುರಭಿ ಗಾನ ಕಲಾಮಂದಿರದ ಚಾರಿಟಬಲ್ ಟ್ರಸ್ಟ್:** 'ವರ್ಣವೈಭವ', ವಿಶೇಷ ಆಹ್ವಾನಿತರು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ಕೆ. ವಾಸುದೇವಾಚಾರ್ಯ ಕಲಾಭವನ, ಜೆಎಲ್‌ಬಿ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಸೆಂಟರ್, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್:** ಪರಿಸರ ಮಾಸಾಚರಣೆ, ಸಸಿ ನೆಡುವ ಕಾರ್ಯಕ್ರಮ, ಸ್ಥಳ: ಮೈಸೂರಿನ ಸುತ್ತಮುತ್ತಲಿನ ಪ್ರದೇಶ.

■ **ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ, ಪರಮಹಂಸ ಯೋಗ ಮಹಾವಿದ್ಯಾಲಯ, ಮೈಸೂರು ಯೋಗ ಒಕ್ಕೂಟ, ಮೈಸೂರು ಯೋಗ ಅಸೋಸಿಯೇಷನ್, ಮೈಸೂರು ಮಹಿಳಾ ಪತಂಜಲಿ ಯೋಗ ಸಮಿತಿ:** ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ, ಅಧ್ಯಕ್ಷತೆ: ಯೋಗ ಪ್ರವೀಣ ಶಿವಪ್ರಕಾಶ್ ಗುರೂಜಿ, ಉದ್ಘಾಟನೆ: ಲೆಕ್ಕ ಪರಿಶೋಧಕ ಎ.ಯು.ಪ್ರಕಾಶ್, ಪ್ರಶಸ್ತಿ ಭಾಜನರು: ಬಿಲ್ಡರ್ಸ್ ಮತ್ತು ಡೆವಲಪರ್ಸ್ ಹೆಚ್.ಎನ್.ರವಿಕುಮಾರ್, ಮುಖ್ಯ ಅತಿಥಿಗಳು: ಯೋಗಾಚಾರ್ಯ ಡಾ. ಬಿ.ಪಿ. ಮೂರ್ತಿ, ರಾಮಚಂದ್ರೇಗೌಡ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿವಿ ಸ್ಕೂಲ್ ಆಫ್ ಇಂಜಿನಿಯರಿಂಗ್ :** ವಿಶ್ವ ಪರಿಸರ ದಿನ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತಕುಮಾರ್, ಉಪಸ್ಥಿತರು : ವಿಶೇಷಾಧಿಕಾರಿ ಡಾ.ಹೆಚ್.ಕೆ. ಚೇತನ್, ಎಂಯುಎಸ್‌ಇ ನಿರ್ದೇಶಕ ಪ್ರೊ. ಟಿ. ಅನಂತಪದ್ಮನಾಭ, ಸ್ಥಳ:ಎಂಯುಎಸ್‌ಇ ಆವರಣ, ಬೆಳಗ್ಗೆ 10ಕ್ಕೆ.

■ **ರಂಗಾಯಣ:** ಬೆಳಗ್ಗೆ 10.30ಕ್ಕೆ ರಂಗ ಹೊನ್ನಾರು–3, ಪರಿಸರ ದಿನ, ಮುಖ್ಯ ಅತಿಥಿಗಳು: ಪರಿಸರ ತಜ್ಞರಾದ ಜೂಲಿ ಕಾರ್ಯಪ್ಪ, ಅಧ್ಯಕ್ಷತೆ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ರಂಗಾಯಣ ಕಲಾವಿದರಿಂದ ಪರಿಸರ ಗೀತಗಾಯನ, ಬಹುರೂಪಗಳ ತಾಯಿ 'ಬಹುರೂಪಿ' ಸಾಕ್ಷ್ಯಚಿತ್ರ ಬಿಡುಗಡೆ, ಸಂಜೆ 6.30ಕ್ಕೆ ಭಾರತೀಯ ರಂಗವಿದ್ಯಾಲಯ ಕಲಾವಿದರಿಂದ ಮಹಾಕವಿ ಕಾಳಿದಾಸ ವಿರಚಿತ 'ವಿದಿಶಾ ಪ್ರಹಸನ' ನಾಟಕ, ವಿನ್ಯಾಸ, ನಿರ್ದೇಶನ: ಓಂಕಾರ್ ಕಿಬೆ, ಸ್ಥಳ: ರಂಗಾಯಣ ಆವರಣ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ:** ಪರಿಸರ ದಿನಾಚರಣೆ, ಗಿಡ ನೆಡುವ ಕಾರ್ಯಕ್ರಮ, ಉದ್ಘಾಟನೆ: ಸಂಘದ ಅಧ್ಯಕ್ಷ ಕಾಳಿಂಗು, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಸಿ.ಜಿ.ಮೂರ್ತಿ, ಎಂ.ಚಂದ್ರಶೇಖರ್, ಮಾನಸ, ಸ್ಥಳ: ಜಿಲ್ಲಾ ಕಸಾಪ ಭವನ ಆವರಣ, ಬೆಳಗ್ಗೆ 10.30ಕ್ಕೆ.

■ **ಸಂಕಥನ, ಮಂಡ್ಯ:** ಆನಂದ್ ಗೋಪಾಲ್ ಅವರ ಆಟಗಾಯಿ ಕಥಾ ಸಂಕಲನ ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಕಥೆಗಾರ ಕೇಶವ ಮಳಗಿ, ಪುಸ್ತಕ ಕುರಿತು : ಬರಹಗಾರ ಚ.ಹ. ರಘುನಾಥ, ಅತಿಥಿಗಳು : ಲೇಖಕ ಶೈಲಜಾ ನಾಗರಘಟ್ಟ, ಕಥೆಗಾರ ಆನಂದ್ ಗೋಪಾಲ್, ಸ್ಥಳ: ಆರ್‌ಟಿಎನ್ ದೇವೇಗೌಡ ಹಾಲ್ (ರೋಟರಿ ಸಭಾಂಗಣ), ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾ, ಮೈಸೂರು ಘಟಕ :** ಘಟಕದ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಸಾಹಿತಿ ಜಯಂತ್ ಕಾಯ್ಕಿಣಿ, ಜಯರಾಮ್, ಲೋಕಾಯುಕ್ತ ಎಸ್ಪಿ ಸಿ. ಮಲ್ಲಿಕ್, ಸ್ಥಳ: ಲಯನ್ಸ್ ವಿದ್ಯಾನಿಕೇತನ ಶಾಲೆ ಸಭಾಂಗಣ, ಗೋಕುಲಂ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿವಿ ಪರಿಸರ ವಿಜ್ಞಾನ ಅಧ್ಯಯನ ವಿಭಾಗ :** ವಿಶ್ವ ಪರಿಸರ ದಿನ ಆಚರಣೆ, ಮುಖ್ಯ ಅತಿಥಿಗಳು: ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಪಿ.ರವಿ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತಕುಮಾರ್, ಸ್ಥಳ: ಲೆಕ್ಚರ್ ಹಾಲ್–1, ಪರಿಸರ ವಿಜ್ಞಾನ ವಿಭಾಗ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ ಪ್ರೊ.ಬಿ.ಕೆ. ಭಲಗೇರಿ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ– ಡಾ. ಎ.ಎಸ್.ಚಂದ್ರಶೇಖರ್, 6.35 "ಬದುಕು ಬದಲಿಸಿದ ಶೋಧ", ಲೇಖನ ಮತ್ತು ಪ್ರಸ್ತುತಿ– ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸದಾಶಿವ ಪಾಟೀಲ್, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕೈಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ. ವಿಜಯನಾರಸಿಂಹ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ, 9.40 ನಮ್ಮ ಆರೋಗ್ಯ– 'ಮೌಲ್ಯ ಶಿಕ್ಷಣ' ಕುರಿತು ಡಾ.ರವೀಶ್ ಅವರೊಂದಿಗೆ ಮಾತುಕತೆ, 10.05 ಪರಿಸರ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ ಪ್ರಸ್ತುತಿ– ಎಂ.ಎಸ್.ಅನುಪಮಾ, 10.30 ಮಕ್ಕಳ ಮಂಟಪ 'ನನ್ನ ಪ್ರೀತಿಯ ಪರಿಸರ' ಮಕ್ಕಳ ಅಭಿಪ್ರಾಯ ಸಂಗ್ರಹ ಕಾರ್ಯಕ್ರಮ ಪ್ರಸ್ತುತಿ–ಎಸ್.ಎಸ್.ಭಾರತಿ, 11.15 ಯೋಗದತ್ತ ಜಗತ್ತು, ವಿಶೇಷ ಸರಣಿ ಯೋಗಶಿಕ್ಷಕಿ ಪ್ರಭಾ ಸತೀಶ್ ಅವರೊಂದಿಗೆ ಸಂದರ್ಶನ: ದಿವಾಕರ ಹೆಗಡೆ. **ಮಧ್ಯಾಹ್ನ:** 12.35 ದೇವರನಾಮ–ರಾಜ್‌ಕುಮಾರ್ ಭಾರತಿ, ಲಕ್ಷ್ಮಿ, 12.45 ಜನಪದ ಸಂಗೀತ–ಮದ್ದೂರಮ್ಮ ಮತ್ತು ತಂಡ, 1.20 ಯೋಗ ದಿನದ ಅಂಗವಾಗಿ 'ಯೋಗ ಸುಯೋಗ' ಬಾನುಲಿ ಸರಣಿ, 2.35 ಚಲನಚಿತ್ರ ಧ್ವನಿವಾಹಿನಿ, 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ 'ವಿದ್ಯುನ್ಮತಿ ಕಲ್ಯಾಣ, ಪ್ರಸ್ತುತಿ–ಹೇರಂಜೆ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಬಳಗದವರು, 9.05 ಚಿಣ್ಣರ ಸುದ್ದಿ ಲೋಕ–ಪ್ರಚಲಿತ ವಿದ್ಯಮಾನಗಳ ವಾರ್ತಾ ಸಂಚಿಕೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ವಿದ್ವಾನ್ ಎ.ಅನಂತಪಧನಾಭನ್ –ವೀಣಾವಾದನ, 11.00 ಸವಿನೆನಪು

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ:** ಪರಿಸರ ದಿನಾಚರಣೆ, ಸೈಕಲ್ ಜಾಥಾ, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜ ಭೂತೆ, ಅತಿಥಿಗಳು: ಪರಿಸರ ಸಂರಕ್ಷಣಾವಾದಿ ಪ್ರೊ. ರವಿಕುಮಾರ್, ಪ್ರೊ.ವಿ.ಕೆ.ಜೋಸ್, ಸರಸ್ವತಿ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಪ್ರತಿಷ್ಠಾಪನಾ 'ವಜ್ರ ಮಹೋತ್ಸವ', ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀ ರಾಜೇಂದ್ರತೀರ್ಥ ಪೂರ್ವಾದಿ ಮಠ–ಮುನಿತ್ರಯ ಮಠ ಶ್ರೀ ವ್ಯಾಸರಾಜ ಮಠಾಧೀಶರಾದ ಶ್ರೀ 1008 ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿ. ಶ್ರೀಗಳವರಿಗೆ ಪಾದಪೂಜೆ, ಶ್ರೀಗಳಿಂದ ರಾಯರ ಬೃಂದಾವನಕ್ಕೆ ವಿಶೇಷ ಪಂಚಾಮೃತ ಅಭಿಷೇಕ, ಸಂಸ್ಥಾನ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ, ಸಂಜೆ 6.30ಕ್ಕೆ ದರ್ಬಾರ್, ರಾಜಾಶೀರ್ವಾದ ಮತ್ತು ಫಲ ಮಂತ್ರಾಕ್ಷತೆ, ಸ್ಥಳ: ಸನ್ನಿಧಾನ, ಕೃಷ್ಣಮೂರ್ತಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಶ್ರೀದತ್ತ ವೆಂಕಟೇಶ್ವರ ಕ್ಷೇತ್ರದ 23ನೇ ಬ್ರಹ್ಮೋತ್ಸವ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್:** ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವ, ಉದ್ಘಾಟನೆ: ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜ ಅರಸು, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಒಡೆಯರ್ ಕುರಿತು ಭಾಷಣ : ಪ್ರೊ. ಎ.ಆರ್. ಮಲ್ಲರಾಜೇ ಅರಸು, ಮುಖ್ಯ ಅತಿಥಿಗಳು : ಸಾಹಿತಿ ಡಾ. ಜಯಪ್ಪ ಹೊನ್ನಾಳಿ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ, ಸಂಜೆ 5ಕ್ಕೆ.

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ:** ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮ, ಉಪಸ್ಥಿತರು: ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಬಿಜೆಪಿ ಮುಖಂಡ ಯು.ಎಸ್.ಶೇಖರ್, ಪಾಲಿಕೆ ಸದಸ್ಯ ಶಿವಕುಮಾರ್, ಸ್ಥಳ: ಸುಮಸೋಪಾನ ಉದ್ಯಾನವನ, ಸಂಜೆ 5ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಚಿಂತನ ಚಿತ್ತಾರ:** ಪ್ರೊ.ಬಸವರಾಜ ನಾಯ್ಕರ ಅಮರಶಿಲ್ಪಿ ಜಕ್ಕಣ ಮತ್ತು ದೇಶಾಭಿಮಾನಿ ರಾಯಣ್ಣ ಕಾದಂಬರಿ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ: ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಕೃತಿ ಕುರಿತು ಮಾತನಾಡುವವರು : ಉಪನ್ಯಾಸ ಎಚ್.ಎಸ್. ರೇಣುಕಾರಾಧ್ಯ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಚಿಂತನ ಚಿತ್ತಾರ ಪ್ರಕಾಶಕ ನಿಂಗರಾಜು ಚಿತ್ತಣ್ಣನವರ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ವೈದ್ಯರು ಮತ್ತು ಅವರ ಕುಟುಂಬ :** ಗೀತ್ ಗಾತಾ ಚಲ್–20, ವೈದ್ಯರ ಸಂಗೀತ ಸಂಜೆ, ಪ್ರಾಯೋಜಕರು: ಡಾ.ಎಂ.ಜಗನ್ನಾಥ್ ಶೆಣೈ ಮತ್ತು ಕುಟುಂಬ, ಸ್ಥಳ: ಕರಾಮುವಿ ಸಭಾಂಗಣ, ಸಂಜೆ 5ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಗುರುಭಕ್ತಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಾಗ ವೈಭವ ಚಾರಿಟಬಲ್ ಟ್ರಸ್ಟ್:** ಡಾ.ಜಯತೀರ್ಥ ಮೇವುಂಡಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಡಾ.ರವೀಂದ್ರ ಕಟೋಟಿ (ಹಾರ್ಮೋನಿಯಂ), ಪಂಡಿತ್ ಗುರುಮೂರ್ತಿ ವೈದ್ಯ (ತಬಲ), ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಗಾನಭಾರತೀ:** ವಾಲ್ಮೀಕಿ ರಾಮಾಯಣ ಆಧಾರಿತ ನಾಟಕ 'ಅಯೋಧ್ಯ ಕಾಂಡ' ನಾಟಕ ಪ್ರದರ್ಶನ, ನಿರ್ದೇಶನ: ಹಿರಿಯ ರಂಗನಿರ್ದೇಶಕ ಪ್ರಸನ್ನ, ಸಂಗೀತ: ಅನುಶೆಟ್ಟಿ, ವಸ್ತ್ರಾಲಂಕಾರ: ನಂದಿನಿ ಕೆ.ಆರ್., ಪ್ರಸಾದನ ಬಿ.ಎಂ. ರಾಮಚಂದ್ರ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 7ಕ್ಕೆ.

■ **ಪ್ರಯೋಗ ಮೈಸೂರು :** ಪ್ರಯೋಗ ಮೈಸೂರು ಕಲಾವಿದರಿಂದ 'ರಾಜ್ ದಿ ಇನ್ಸ್‌ಪಿರೇಷನ್' ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ವಿದ್ಯಮಾನಗಳ ಅರಿಯದೇ ತೂಕದ ಸಾಹಿತ್ಯ ಅಸಾಧ್ಯ

● ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಅಭಿಮತ ● ಆ ಅರಿವು ಇಲ್ಲದವರು ಬರೀ ಚಳವಳಿ ಮಾಡಿಕೊಂಡಿರಬೇಕಷ್ಟೇ! ● ಸಾಹಿತಿ ವೆಂಕೋಬರಾವ್ ಅವರ ಅಭಿನಂದನಾ ಗ್ರಂಥ ಬಿಡುಗಡೆ



ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಶನಿವಾರ ಪ್ರೊ.ನಂ.ವೆಂಕೋಬರಾವ್ ಅವರ 'ಶ್ರೀಕಾಂತ' ಅಭಿನಂದನಾ ಗ್ರಂಥವನ್ನು ಖ್ಯಾತ ಕಾದಂಬರಿಕಾರ ಪ್ರೊ.ಎಸ್.ಎಲ್.ಭೈರಪ್ಪ ಬಿಡುಗಡೆ ಮಾಡಿದರು. ಸಂಸದ ವಿ.ಶ್ರೀನಿವಾಸ ಪ್ರಸಾದ್, ಮಾಜಿ ಸಚಿವ ಪಿಜಿಆರ್ ಸಿಂಧ್ಯಾ, ಬಹುಭಾಷಾ ವಿದ್ವಾಂಸ ಡಾ.ಪ್ರಧಾನ ಗುರುದತ್ತ, ಆರ್‌ಎಸ್‌ಎಸ್ ಹಿರಿಯ ಸ್ವಯಂಸೇವಕ ಮ.ವೆಂಕಟರಾಮು ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಜೂ.4(ಎಸ್‌ಬಿಡಿ)– ದೇಶದ ಎಲ್ಲಾ ಘಟನಾವಳಿಗಳ ಬಗ್ಗೆಯೂ ಸಾಹಿತಿಗಳು ಅಧ್ಯಯನದ ಮೂಲಕ ತಿಳಿದುಕೊಳ್ಳದಿದ್ದರೆ ಅವರು ತೂಕವಾದ ಸಾಹಿತ್ಯ ರಚಿಸಲು ಸಾಧ್ಯವಿಲ್ಲ, ಕೇವಲ ಚಳವಳಿಯಲ್ಲಿ ಇರಬೇಕಾಗುತ್ತದೆ ಎಂದು ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಹೋರಾಟಗಾರ, ವಿಶ್ರಾಂತ ಪ್ರಾಧ್ಯಾಪಕ, ಸಮಾಜ ಸೇವಕ, ಸಾಹಿತಿ ಪ್ರೊ.ನಂ.ವೆಂಕೋಬರಾವ್ ಅವರನ್ನು ಕುರಿತಾದ ಲೇಖನಗಳು, ಅವರ ಸಾಹಿತ್ಯ ವಿಮರ್ಶೆಯನ್ನು ಒಳಗೊಂಡ 'ಶ್ರೀಕಾಂತ ಬದುಕು-ಬರಹ-ಅಭಿನಂದನೆ' ಅಭಿನಂದನಾ ಗ್ರಂಥವನ್ನು ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಶನಿವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕಮ್ಯುನಿಸ್ಟರಿಗಾಗಿಯೇ ಸ್ಥಾಪನೆ ಮಾಡಿದ ಜವಹಾರಲಾಲ್ ನೆಹರು ಯೂನಿವರ್ಸಿಟಿ(ಜೆಎನ್‌ಯು)ಯ ನಾಲ್ವರು ಇತಿಹಾಸಕಾರರಿಂದ ಅಯೋಧ್ಯೆ ವ್ಯಾಜ್ಯ 20 ವರ್ಷ ಮುಂದುವರೆಯಿತು. ಈ ವಿಚಾರದ ಬಗ್ಗೆ ಬಹಳ ಹಿಂದೆಯೇ ಸ್ಪಷ್ಟವಾಗಿದ್ದರೂ ಬೇರೆ ಆಯಾಮಗಳಲ್ಲಿ ನ್ಯಾಯಾಲಯದಲ್ಲಿ ವಾದಿಸಿ, ಕಾಲ ದೂಡಿದರು. ಈ ಹಿಂದೆ ಕಾಶ್ಮೀರ ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳ ತಲಾದಾಯ 330 ರೂ. ಮೀರಿರಲಿಲ್ಲ. ಆದರೆ ತೆರಿಗೆಯನ್ನೇ ಪಾವತಿಸದ ಕಾಶ್ಮೀರಿಗರಿಗೆ ತಲಾದಾಯ 2,290 ರೂ. ಇತ್ತು. ಒಂದು ಸಮುದಾಯದ ಓಟಿಗಾಗಿ ರಾಜೀವ್‌ಗಾಂಧಿ, ವಿ.ಪಿ.ಸಿಂಗ್, ಚಂದ್ರಶೇಖರ್, ಪಿ.ವಿ.ನರಸಿಂಹರಾವ್, ಹೆಚ್.ಡಿ.ದೇವೇಗೌಡ, ಐ.ಕೆ.ಗುಜ್ರಾಲ್ ಇವರೆಲ್ಲರೂ ಹಾಗೆಯೇ ಮಾಡಿದ್ದರು ಎಂದರು.

ರಾಜಕೀಯ ಹೊರತು ಬೇರೆ ವಿಚಾರಗಳ ಬಗ್ಗೆ ಗಮನಹರಿಸದ ಪರಿಣಾಮ ಸಾಕಷ್ಟು ಸಮಸ್ಯೆಗಳಾಗಿವೆ. ಕಾಶ್ಮೀರದಿಂದ ಹಿಂದೂಗಳನ್ನು ಓಡಿಸಿದ್ದಾರೆ. ಅಲ್ಲಿ ವಿದ್ಯುತ್ ಹಾಗೂ ನೀರನ್ನು ಸಂಪೂರ್ಣವಾಗಿ ಉಚಿತವಾಗಿ ನೀಡಲಾಗುತ್ತಿತ್ತು. 370ನೇ ವಿಧಿ ರದ್ದುಪಡಿಸಿದ ನಂತರ ವಿದ್ಯುತ್ ಹಾಗೂ ನೀರು ಪೂರೈಕೆಗೆ ಅಳವಡಿಸಿದ್ದ ಮೀಟರ್‌ಗಳನ್ನೂ ಅಲ್ಲಿನ ಮಹಿಳೆಯರು ಕಿತ್ತೊಗೆದಿದ್ದಾರೆ. ಹಿಂದಿನ ವ್ಯವಸ್ಥೆ ಅವರಿಗೆ ಅಭ್ಯಾಸವಾಗಿಬಿಟ್ಟಿದೆ. ಪೌರ ಕಾರ್ಮಿಕ ವೃತ್ತಿ ಮಾಡುವವರನ್ನೂ ಅಲ್ಲಿಂದ ಓಡಿಸುವ ಪ್ರಯತ್ನ ನಡೆದಿದೆ. ಈ ವಿಚಾರಗಳ ಬಗ್ಗೆ ಸಾಹಿತಿಗಳೇಕೆ ಪ್ರಶ್ನೆ ಎತ್ತುವುದಿಲ್ಲ? ಇದು ದೇಶದ ವಿಚಾರ, ಯಾರಾದರೂ ಅಧ್ಯಯನ ಮಾಡಿ, ಚರ್ಚೆ ನಡೆಸಿದ್ದಾರಾ? ಹಾಗಾದರೆ ಸಾಹಿತ್ಯ ಕ್ಷೇತ್ರದವರು ಏನು ಮಾಡುತ್ತಿದ್ದೇವೆ? ಎಂದು ಪ್ರಶ್ನಿಸಿದರು.

ಆಸಕ್ತಿ ಇರಲಿಲ್ಲ: ಕಾಶ್ಮೀರದ ಗವರ್ನರ್ ಆಗಿದ್ದ ಜಗಮೋಹನ್ ಅವರು ತಮ್ಮ 'ಮೈ ಫ್ರೋಜನ್ ಟರ್ಬ್ಯುಲೆನ್ಸ್ ಇನ್ ಕಾಶ್ಮೀರ್' ಪುಸ್ತಕದಲ್ಲಿ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಯುನೆಸ್ಕೋ ವತಿಯಿಂದ ಪಾಕಿಸ್ತಾನದಲ್ಲಿ ಏರ್ಪಡಿಸಿದ್ದ ಸಮಾವೇಶದಲ್ಲಿ ಭಾಗಿಯಾಗಿದ್ದ ಜಗಮೋಹನ್ ಅವರನ್ನು ಪಾಕಿಸ್ತಾನ ಸೇನಾ ಮುಖ್ಯಸ್ಥನಾಗಿದ್ದ ಜಿಯಾ ಉಲ್ ಹಕ್ ಅತ್ಯಂತ ಗೌರವದಿಂದ ಕಂಡು, ಹಳೆಯ ನಗರಗಳ ಅಭಿವೃದ್ಧಿ ಬಗ್ಗೆ ತಿಳಿಸಿರುವ ತಮ್ಮ ಪುಸ್ತಕವನ್ನು ಓದಿದ್ದೇನೆ, ಸಮಾವೇಶದ ಬಳಿಕ ಭೇಟಿಗೆ ಮನವಿ ಮಾಡಿದ್ದ. ಅಲ್ಲದೆ ಕರಾಚಿ ಹಾಗೂ ಲಾಹೋರ್ ನಗರಗಳ ಅಭಿವೃದ್ಧಿಗೆ ಮಾರ್ಗದರ್ಶನವನ್ನೂ ಪಡೆದಿದ್ದ. ಆದರೆ ನಮ್ಮ ದೇಶದ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಬಳಿ ತೆರಳಿ ಕಾಶ್ಮೀರದ ಅಭಿವೃದ್ಧಿ ವಿಚಾರವಾಗಿ ಮಾತನಾಡುವಾಗ ಅವರು ಬೇರೆಡೆ ಗಮನಹರಿಸಿ, ನಿರಾಸಕ್ತಿ ತೋರಿದ್ದಾಗಿ ಜಗಮೋಹನ್ ಅವರೇ ಬರೆದಿದ್ದಾರೆ ಎಂದರು.

ಗೊಂದಲಕ್ಕೆ ಉತ್ತರ: ಶಿಕ್ಷಣದಲ್ಲಿ ಸೃಷ್ಟಿಯಾಗಿರುವ ಗದ್ದಲಗಳಿಗೆ ನಮ್ಮ ಕಣ್ಮುಂದೆಯೇ ಉತ್ತರವಿದೆ. ರಾಷ್ಟ್ರೀಯ ಸ್ವಯಂಸೇವಾ ಸಂಘ(ಆರ್‌ಎಸ್‌ಎಸ್)ದ ಸಂಸ್ಥಾಪಕ ಹೆಡಗೇವಾರ್ ಭಾಷಣವನ್ನು ಪಠ್ಯದಲ್ಲಿ ಅಳವಡಿಸಿರುವುದಕ್ಕೆ ಗದ್ದಲ ಆಗುತ್ತಿದೆ. ಅದನ್ನು ಪಠ್ಯದಲ್ಲಿ ಉಳಿಸಿಕೊಳ್ಳುವುದು ಅಥವಾ ತೆಗೆಯುವುದು ಬೇರೆಯ ವಿಚಾರ. ಆದರೆ ಯಾವುದೇ ಅಧಿಕಾರವನ್ನು ಬಯಸದ ನಿಜವಾದ ಸೇವಕರನ್ನು ಅವರು ಸೃಷ್ಟಿಸಿದ್ದಾರೆ. ಪ್ರೊ.ನಂ.ವೆಂಕೋಬರಾವ್ ಅವರಂತಹ ವ್ಯಕ್ತಿಗಳು ಉದಾಹರಣೆಯಾಗಿ ನಮ್ಮೆದುರಿಗಿದ್ದಾರೆ. ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಮೊದಲ ಬಾರಿ ಸಂಸತ್ ಪ್ರವೇಶಿಸುವಾಗ ಮೆಟ್ಟಿಲು ಮೇಲೆ ಶಿರವನ್ನಿಟ್ಟು ನಮಸ್ಕರಿಸುವ ಮೂಲಕ ದೇಶದ ಸಂಸ್ಕೃತಿ ವೈಭವೀಕರಿಸಿದರು. ರಾಜಕೀಯದಲ್ಲಿ ಉನ್ನತ ಮಟ್ಟಕ್ಕೇರುವ ಮೊದಲು ದೆಹಲಿ-ಅಹಮದಾಬಾದ್ ರೈಲಿನಲ್ಲಿ ಪಾಸ್ ಇದ್ದರೂ ಆಸನ ನಿಗದಿಯಾಗದೆ, ನಿಂತಿದ್ದ ಇಬ್ಬರು ಐಆರ್‌ಎಸ್ ತರಬೇತಿನಿರತ ಮಹಿಳಾ ಅಧಿಕಾರಿಗಳಿಗೆ ಸೀಟ್ ಬಿಟ್ಟುಕೊಟ್ಟು ತಾವು ಕೆಳಗಡೆ ಮಲಗಿದ್ದರು. ಪ್ರಧಾನಿಯಾದ ಬಳಿಕ ಆ ಅಧಿಕಾರಿಗಳೇ ಘಟನೆಯನ್ನು ಸಂದರ್ಶನದಲ್ಲಿ ಸ್ಮರಿಸಿಕೊಂಡಿದ್ದಾರೆ. ಎಲ್ಲರಲ್ಲೂ ಇಂತಹ ವ್ಯಕ್ತಿತ್ವ ರೂಪಿಸಬೇಕೆಂಬುದು ಹೆಡಗೇವಾರ್ ಅವರ ಉದ್ದೇಶವಾಗಿತ್ತು ಎಂದು ತಿಳಿಸಿದರು.

ಪ್ರೊ.ವೆಂಕೋಬರಾವ್ ಅಭಿನಂದನಾ ಗ್ರಂಥವನ್ನು ಓದಿದ್ದೇನೆ. ಈ ಪುಸ್ತಕದಲ್ಲಿ ಒಂದು ವಿಶೇಷವಿದೆ. ಇಂತಹ ಪುಸ್ತಕದಲ್ಲಿ ಸಹಜವಾಗಿ ಆ ವ್ಯಕ್ತಿಯ ಬಗ್ಗೆ ಬಣ್ಣನೆ, ಹೊಗಳಿಕೆ ಇರುತ್ತದೆಯೇ ಹೊರತು ವಿಷಯವಿರುವುದಿಲ್ಲ. ಆದರೆ ಈ ಪುಸ್ತಕದಲ್ಲಿ ಬರೆದಿರುವ ಪ್ರತಿಯೊಬ್ಬರೂ ವೆಂಕೋಬರಾವ್ ಅವರನ್ನು ಚೆನ್ನಾಗಿ ಬಲ್ಲವರಾಗಿದ್ದು, ಹಲವು ವಿಚಾರಗಳನ್ನು ದಾಖಲಿಸಿದ್ದಾರೆ. ಇದನ್ನು ಬಿಡುಗಡೆ ಮಾಡಿದ್ದಕ್ಕೆ ನನಗೆ ಸಂತೋಷವಾಗಿದೆ ಎಂದರು.

ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಮಾತನಾಡಿ, ವೆಂಕೋಬರಾವ್ ಅವರು 1970ರಿಂದ ಪರಿಚಯ. ಇವರು ನನ್ನ ಜೀವನದಲ್ಲಿ ಪ್ರಭಾವ ಬೀರಿದ್ದಾರೆ. ನನಗೆ ಮಾತ್ರವಲ್ಲ ಹಾಲಿ ಸಚಿವರು, ಮಾಜಿ ಸಚಿವರು ಸೇರಿದಂತೆ ಹಲವರಿಗೆ ಗುರುಗಳಾಗಿದ್ದಾರೆ ಎಂದು ಸ್ಮರಿಸಿಕೊಂಡರು. ಪ್ರೊ.ವೆಂಕೋಬರಾವ್ ಅವರ ಗುರುಗಳಾದ ಅಭಿನಂದನಾ ಗ್ರಂಥದ ಸಂಪಾದಕ ಡಾ.ಪ್ರಧಾನ ಗುರುದತ್ತ ಅವರು ಮಾತನಾಡಿ ಪ್ರಮನಂಜಪ್ಪ ವೆಂಕೋಬರಾವ್ 'ಶ್ರೀಕಾಂತ' ನಾಮಾಂಕಿತದಲ್ಲಿ ಬರವಣಿಗೆ ಆರಂಭಿಸಿದ್ದು, ಸಾಹಿತ್ಯ, ಸಮಾಜ ಸೇವೆಯನ್ನು ಬಣ್ಣಿಸಿದರು.

ಸಂಸದ ವಿ.ಶ್ರೀನಿವಾಸ ಪ್ರಸಾದ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರ್‌ಎಸ್‌ಎಸ್ ಹಿರಿಯ ಸ್ವಯಂಸೇವಕರಾದ ಮ.ವೆಂಕಟರಾಮು, ಹಿರಿಯ ಸಾಹಿತಿ, ಸಮಾಜ ಸೇವಕ ಪ್ರೊನಂ.ವೆಂಕೋಬರಾವ್, ಅಭಿನಂದನಾ ಸಮಿತಿ ಸದಸ್ಯ ರವೀಂದ್ರ ಜೋಶಿ, 'ಮೈಸೂರು ಮಿತ್ರ' ಅಂಕಣಕಾರ ಡಾ.ವಿ.ರಂಗನಾಥ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ತಪ್ಪು ಪ್ರಶ್ನಿಸುವ ಮನೋಭಾವ ಯುವಕರಲ್ಲಿರಬೇಕು

ಮೈಸೂರು ಜಿಪಂ ಉಪ ಕಾರ್ಯದರ್ಶಿ ಡಾ. ಪ್ರೇಮ ಕುಮಾರ್ ಅಭಿಮತ



ಮೈಸೂರು,ಜೂ 4(ಜಿಎ)– ಸಮಾಜದಲ್ಲಿ ತಪ್ಪು ಕಂಡಾಗ ಪ್ರಶ್ನಿಸುವ ಮನೋಭಾವನೆಯನ್ನು ಯುವ ಸಮೂಹ ಬೆಳೆಸಿಕೊಂಡರೆ ಮಾತ್ರ ದೇಶದ ಭವಿಷ್ಯ ಉಜ್ವಲವಾಗಲು ಸಾಧ್ಯ ಎಂದು ಮೈಸೂರು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಾ.ಪ್ರೇಮಕುಮಾರ್ ಹೇಳಿದರು.

ಮೈಸೂರು ಗ್ರೂಪ್ ಎನ್‌ಸಿಸಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಎನ್‌ಸಿಸಿ ಹಳೆಯ ವಿದ್ಯಾರ್ಥಿಗಳ ಸಂಘ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಜಂಟಿ ಸಮನ್ವಯದಲ್ಲಿ ಮೇ 4 ರಿಂದ ಜೂ.4 ರವರೆಗೆ ನಡೆದ ದೈಹಿಕ ಸಾಮರ್ಥ್ಯ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಅನೇಕ ಕುತೂಹಲಗಳು ಮೂಡುವ ವಯಸ್ಸು ಎಂದರೆ ಅದು 15ರಿಂದ 21 ವಯೋಮಾನ. ಈ ವಯೋಮಾನದಿಂದ 5 ವರ್ಷಗಳ ಕಾಲ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಶೈಕ್ಷಣಿಕದಲ್ಲಿ ನೀವೂ ಸಕ್ರಿಯರಾಗಿದ್ದರೆ ಸಾಧನೆ ಮಾಡಲು ಸಹಕಾರಿಯಾಗುತ್ತದೆ. ಈ ಸಮಯದಲ್ಲಿ ದೇಹದಲ್ಲೂ ಸಾಕಷ್ಟು ಬದಲಾವಣೆ ಆಗಲಿದೆ. ಮಾಡಬೇಡಿ ಎಂದಿದ್ದನ್ನೇ ಮಾಡುವ ವಯಸ್ಸೇ ಇದಾಗಿದೆ. ಹೀಗಾಗಿ ಈ ವಯಸ್ಸಿನಲ್ಲಿ ಒಳ್ಳೆಯ ತೀರ್ಮಾನ ಮಾಡಿ ಎಂದು ಸಲಹೆ ನೀಡಿದರು.

ನಿಮ್ಮ ಈ ಐದು ವರ್ಷದ ಕಠಿಣ ಪರಿಶ್ರಮ ನಿಮ್ಮ 50 ವರ್ಷ ಅದ್ದೂರಿಯಾಗಿರಲು ಕಾರಣವಾಗುತ್ತದೆ. ನಿಮ್ಮ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಗುರಿ ಮುಟ್ಟುವವರೆಗೂ ಯಾವುದೇ ಅನಗತ್ಯ ವಿಚಾರಗಳ ಬಗ್ಗೆ ಗಮನಹರಿಸಬೇಡಿ. ಈ ಅವಧಿಯಲ್ಲಿ ನಮ್ಮ ಹಿಂದಿನ ಸಂಸ್ಕಾರವನ್ನು ನಾವು ನೋಡಿ ಅರ್ಥ ಮಾಡಿಕೊಳ್ಳಬೇಕಿದೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತಿಳಿದು ಕೊಳ್ಳಬೇಕಿದೆ. ದೇಶದ ರಾಜಕೀಯ, ಸಂಸ್ಕೃತಿ ಯನ್ನು ಓದಿ ತಿಳಿದುಕೊಳ್ಳುವುದನ್ನು ಬೆಳೆಸಿಕೊಳ್ಳಿ, ರಾಜಕಾರಣಕ್ಕೆ ಬಾರದಿದ್ದರೂ ಪರವಾಗಿಲ್ಲ. ರಾಜಕೀಯ ಇತಿಹಾಸ, ಪ್ರಜಾಪ್ರಭುತ್ವದ ಮೂಲಭೂತ ಸೌಲಭ್ಯ ಹಾಗೂ ಕರ್ತವ್ಯಗಳನ್ನು ಅರಿತುಕೊಂಡರೆ ನಾವು ಸಹ ಸರಿಯಾದ ದಾರಿಯಲ್ಲಿ ಸಾಗಿ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ನಂತರ ಮೈಸೂರು ಎನ್‌ಸಿಸಿ ಗ್ರೂಪ್ ಕಮಾಂಡರ್ ಆರ್.ಆರ್. ಮೆನನ್ ಮಾತನಾಡಿ, ಮುಂದಿನ ವರ್ಷಗಳಲ್ಲಿ ರಕ್ಷಣಾ ಇಲಾಖೆಯಲಿಯೂ ಸಾಕಷ್ಟು ಉದ್ಯೋಗಗಳು ಸೃಷ್ಟಿಯಾಗಲಿದ್ದು, ಹೆಚ್ಚಿನ ಕೌಶಲ್ಯಗಳನ್ನು ಬೆಳೆಸಿಕೊಳ್ಳಿ ಎಂದರು.

ಮುಂದಿನ ದಿನಗಳಲ್ಲಿ ನೌಕಾಪಡೆ, ಸೇನಾ ಪಡೆಗಳಲ್ಲಿ ಸಾಕಷ್ಟು ಉದ್ಯೋಗಗಳು ಸೃಷ್ಟಿಯಾಗಲಿವೆ. ಹೀಗಾಗಿ ಇಂದಿನಿಂದಲೇ ದೈಹಿಕ ಹಾಗೂ ಮಾನಸಿಕ ಕೌಶಲ್ಯಗಳನ್ನು ಬೆಳೆಸಿಕೊಳ್ಳುವ ಅತ್ಯವಶ್ಯಕತೆಯಿದೆ. ನೀವೆಲ್ಲರೂ ಶಿಬಿರದಲ್ಲಿ ಕಲಿತು ಉದ್ಯೋಗ ಪಡೆದು ದೇಶ ಸೇವೆಗೆ ಹೋದಾಗ ಮಾತ್ರವೇ ಈ ಶಿಬಿರ ಸಾರ್ಥಕತೆ ಆಗಲಿದೆ ಎಂದು ತಿಳಿಸಿದರು.

ಇದೇ ವೇಳೆ ಒಂದು ತಿಂಗಳ ತರಬೇತಿಯಲ್ಲಿ ಭಾಗವಹಿಸಿದ 70 ಕೆಡೆಟ್‌ಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಡಾ.ಕೆ.ಸುರೇಶ್, ಗ್ರೂಪ್ ಎಒ ವಿ. ಶ್ರೀನಿವಾಸ್, ಕಮಾಂಡಿಂಗ್ ಆಫೀಸರ್ ಕರ್ನಲ್ ಪರಾಗ್, ಎನ್‌ಸಿಸಿ ಸದಸ್ಯ ಮಂಜುನಾಥ್, ಆದಿತ್ಯ ಆಸ್ತ್ರೆಯ ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಇಂದಿನಿಂದ ಬಿತ್ತೋತ್ಸವ ಅಭಿಯಾನ

● ಗಿಡನೆಟ್ಟು ಚಾಲನೆ ನೀಡಿದ ಹೆಚ್‌ಓಎಫ್‌ಎಫ್ ಆರ್.ಕೆ.ಸಿಂಗ್
● ಮೂಡಲಹುಂಡಿ, ವರಕೋಡು ಮೀಸಲು ಅರಣ್ಯದಲ್ಲಿ ಬೀಜ ಬಿತ್ತನೆ



ಮೈಸೂರಿನ ಅರಣ್ಯ ಭವನದ ಆವರಣದಲ್ಲಿ ಶನಿವಾರ ಹೆಚ್‌ಓಎಫ್‌ಎಫ್ ಆರ್.ಕೆ.ಸಿಂಗ್ ಅವರು ಗಿಡ ನೆಟ್ಟು ಪರಿಸರ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಚಿತ್ರದಲ್ಲಿ ಎಪಿಸಿಸಿಎಫ್‌ಗಳಾದ ಜಗತ್‌ರಾಮ್. ಬಿ.ಪಿ.ರವಿ, ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಕೆ.ಕಮಲಾ ಕರಿಕಾಳನ್, ಡಾ.ವಿ.ಕರಿಕಾಳನ್, ದೀಪ್ ಜೆ.ಕಂಟ್ರಾಕ್ಟರ್, ರುದ್ರನ್, ಸೀಮಾ, ಪ್ರಸನ್ನ, ರವೀಂದ್ರನ್, ಶ್ರೀಧರ್, ಎಸಿಎಫ್‌ಗಳಾದ ರಂಗಸ್ವಾಮಿ, ಶಿವರಾಮ್, ಆರ್‌ಎಫ್‌ಓಗಳಾದ ಪ್ರಶಾಂತ್, ಕೆ.ಸುರೇಂದ್ರ ಹಾಗೂ ಇನ್ನಿತರರನ್ನು ಕಾಣಬಹುದು.

ಮೈಸೂರು, ಜೂ.4(ಎಂಟಿವೈ)– ವಿಶ್ವ ಪರಿಸರ ದಿನದ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆ ನಾಳೆ(ಜೂ.5)ಯಿಂದ ಜೂ.12ವರೆಗೆ 'ಬಿತ್ತೋತ್ಸವ' ಅಭಿಯಾನ ಕೈಗೊಂಡಿದ್ದು, ಜಿಲ್ಲೆಯ ವಿವಿಧೆಡೆಯಿರುವ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಭವಿಷ್ಯದ ಹಿತದೃಷ್ಟಿಯಿಂದ ಪರಿಸರಕ್ಕೆ ಪೂರಕವಾದ ಮರಗಳ ಬೆಳೆಸಲು ಬೀಜ ಬಿತ್ತನೆ ಮಾಡಲು ಅರಣ್ಯ ಇಲಾಖೆ ಮುಂದಾಗಿದೆ.

ವಿಶ್ವ ಪರಿಸರ ದಿನದ ಹಿನ್ನೆಲೆಯಲ್ಲಿ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಶನಿವಾರ ಹೆಚ್‌ಓಎಫ್‌ಎಫ್ ಆರ್.ಕೆ.ಸಿಂಗ್ ಅವರು ಮೈಸೂರು, ಮಂಡ್ಯ ವಿಭಾಗದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಈ ಬಾರಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ನಿಗದಿತ ಪ್ರಮಾಣದಲ್ಲಿ ಗಿಡ ನೆಡುವಂತೆ ಸೂಚಿಸಿದರಲ್ಲದೆ, ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಬಿತ್ತೋತ್ಸವ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸುವಂತೆ ಸೂಚಿಸಿದರು. ಬಳಿಕ ಅರಣ್ಯ ಭವನದ ಆವರಣದಲ್ಲಿ ಹಲಸಿನ ಗಿಡ ನೆಟ್ಟು, ನೀರೆರೆಯುವ ಮೂಲಕ 2022ನೇ ಸಾಲಿನ ವಿಶ್ವ ಪರಿಸರ ದಿನದ ಚಟುವಟಿಕೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಎಪಿಸಿಸಿಎಫ್‌ಗಳಾದ ಜಗತ್‌ರಾಮ್, ಬಿ.ಪಿ.ರವಿ, ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಕೆ.ಕಮಲಾ ಕರಿಕಾಳನ್, ಡಾ.ವಿ.ಕರಿಕಾಳನ್, ದೀಪ್ ಜೆ.ಕಂಟ್ರಾಕ್ಟರ್, ರುದ್ರನ್, ಸೀಮಾ, ಪ್ರಸನ್ನ, ರವೀಂದ್ರನ್, ಶ್ರೀಧರ್, ಎಸಿಎಫ್‌ಗಳಾದ ರಂಗಸ್ವಾಮಿ, ಶಿವರಾಮ್, ಆರ್‌ಎಫ್‌ಓಗಳಾದ ಪ್ರಶಾಂತ್, ಕೆ.ಸುರೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಿತ್ತೋತ್ಸವ ಅಭಿಯಾನ: ಮೈಸೂರು ಜಿಲ್ಲೆಯಲ್ಲಿ ಮುಂಬರುವ ದಿನದಲ್ಲಿ ಪರಿಸರ ಸಮತೋಲನ ಕಾಪಾಡುವುದಕ್ಕಾಗಿ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಗಿಡ-ಮರ ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ. ಅದಕ್ಕಾಗಿ ಜೂ.4ರಿಂದ 12ವರೆಗೆ 'ಬಿತ್ತೋತ್ಸವ' ಅಭಿಯಾನ ನಡೆಸುವ ಮೂಲಕ ಸಾಮಾಜಿಕ ಅರಣ್ಯ ಪ್ರದೇಶವನ್ನು ಸಂಮೃದ್ಧವಾಗಿ ಬೆಳೆಸಲು ಉದ್ದೇಶಿಸಲಾಗಿದೆ ಎಂದು ಡಿಸಿಎಫ್ ಕೆ.ಕಮಲಾ ಕರಿಕಾಳನ್ ತಿಳಿಸಿದ್ದಾರೆ.

ಮೈಸೂರು ತಾಲೂಕಿನ ಮೂಡಲಹುಂಡಿ ಹಾಗೂ ವರಕೋಡು ಗ್ರಾಮಕ್ಕೆ ಹೊಂದಿಕೊಂಡಂತಿರುವ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ನಾಳೆ(ಜೂ.5) ಬೆಳಗ್ಗೆ ಬೀಜ ಬಿತ್ತನೆ ಕಾರ್ಯ ನಡೆಸಲಾಗುತ್ತಿದೆ. ಹೆಬ್ಬೇವು, ಬಿದಿರು, ಕಕ್ಕೆ ಸೇರಿದಂತೆ ವಿವಿಧ ಜಾತಿಯ ಮರಗಳ 5 ಕೆಜಿ ಬೀಜ ಬಿತ್ತನೆ ಮಾಡಲಾಗುತ್ತಿದೆ. ಮಡಳ್ಳಿಯಲ್ಲಿರುವ ನವೋದಯ ಶಾಲೆ ಸುತ್ತಮುತ್ತಲಿನ ಪ್ರದೇಶದಲ್ಲಿ 5 ಕೆಜಿ ಬಿತ್ತನೆ ಬೀಜ ನೆಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ನಂಜನಗೂಡು, ತಿ.ನರಸೀಪುರ, ಸರಗೂರು, ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯಲ್ಲೂ ಬೀಜ ಬಿತ್ತನೆ ಮಾಡಲಾಗುತ್ತದೆ ಎಂದು ವಿವರಿಸಿದರು.

ಮನೆ ನಿರ್ಮಾಣದ 1.5 ಕೋಟಿ ಬಾಕಿ ನೀಡದೆ ವಂಚನೆ: ವೈದ್ಯರ ವಿರುದ್ಧ ಇಂಜಿನಿಯರ್ ದೂರು

ಮೈಸೂರು, ಜೂ.4– ಕಟ್ಟಡ ನಿರ್ಮಾಣದ ಬಾಬ್ತು 1.5 ಕೋಟಿ ಕೊಡದೇ ವಂಚನೆ ಮಾಡಿದ್ದಾರೆ ಎಂದು ಮೈಸೂರಿನ ವೈದ್ಯರೊಬ್ಬರ ವಿರುದ್ಧ ಹಾಸನದ ಇಂಜಿನಿಯರ್ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಮೈಸೂರಿನ ಸರಸ್ವತಿಪುರಂನಲ್ಲಿ ವಾಸವಿರುವ ವೈದ್ಯ ಡಾ.ವಿಜಯ್ ಕುಮಾರ್ ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಹಾಸನದ ಇಂಜಿನಿಯರ್ ಬಿ.ಎನ್.ದಿನೇಶ್ ಕುಮಾರ್ ಅವರ ಸಂಬಂಧಿಕರೇ ಆಗಿದ್ದಾರೆ. 2016 ಮಾ.18 ರಂದು ತಮ್ಮನ್ನು ಭೇಟಿ ಮಾಡಿದ ಡಾ.ವಿಜಯ್ ಕುಮಾರ್ ನ್ಯೂಕಾಂತರಾಜೇ ಅರಸ್ ರಸ್ತೆಯಲ್ಲಿರುವ ನಿವೇಶನದಲ್ಲಿ ಕಟ್ಟಡ ಕಟ್ಟಿ ಕೊಡುವಂತೆ ಕೇಳಿದ್ದರು. ಅವರಿಗೆ ಕಟ್ಟಡ ನಿರ್ಮಾಣ ಕುರಿತಂತೆ ಕೊಟೇಷನ್ ನೀಡಿ ಕಟ್ಟಡದ ಕೆಲಸ ಸಂಪೂರ್ಣವಾಗಿ ಮುಗಿಸಿಕೊಡಲಾಗಿದೆ. ಕಾಮಗಾರಿ ನಡೆಯುತ್ತಿದ್ದಾಗ ಕಾಲ ಕಾಲಕ್ಕೆ ಹಣ ಸಂದಾಯ ಮಾಡುತ್ತಿದ್ದ ವಿಜಯ್ ಕುಮಾರ್ ಕಾಮಗಾರಿ ಮುಗಿದ ನಂತರ ಕೊನೆ ಹಂತದ ಹಣ 1,55,16,200 ರೂ.ಗಳನ್ನು ನೀಡದೇ ವಂಚನೆ ಮಾಡಿದ್ದಾರೆ ಹಣ ಕೇಳಿದರೆ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾರೆ ಎಂದು ಇಂಜಿನಿಯರ್ ದಿನೇಶ್ ಕುಮಾರ್ ಸಲ್ಲಿಸಿದ ದೂರನ್ನು ಭಾರತೀಯ ದಂಡ ಸಂಹಿತೆ 504, 406, 420ರಡಿ ಪ್ರಕರಣ ದಾಖಲಿಸಿಕೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಇಂದು ರಂಗಾಯಣದಲ್ಲಿ 'ರಂಗ ಹೊನ್ನಾರು-3' ಆಚರಣೆ

ಮೈಸೂರು, ಜೂ.4(ಎಂಕೆ)– ಮೈಸೂರು ರಂಗಾಯದಲ್ಲಿ ನಾಳೆ(ಜೂ.5) ಬೆಳಗ್ಗೆ 10.30ಕ್ಕೆ 'ವಿಶ್ವ ಪರಿಸರ ದಿನಾಚರಣೆ' ಅಂಗವಾಗಿ 'ರಂಗ ಹೊನ್ನಾರು-3' ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಪರಿಸರ ತಜ್ಞೆ ಜೂಲಿ ಕಾರ್ಯಪ್ಪ, ಪರಿಸರ ಸೇವಕ ಕೆ.ಆರ್.ಗುರುಕಾರ್ ಭಾಗವಹಿಸಲಿದ್ದಾರೆ. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅಧ್ಯಕ್ಷತೆ ವಹಿಸಲಿದ್ದು, ಕಲಾವಿದರಾದ ಸಂತೋಷ್ ಕುಮಾರ್ ಕುಸನೂರು, ಸರೋಜಾ ಹೆಗಡೆ ಹಾಗೂ ಆಲೂರು ದೊಡ್ಡನಿಂಗಪ್ಪ ಅವರನ್ನು ಸನ್ಮಾನಿಸಲಾಗುವುದು.

ನಕ್ಕರೆ ಅದೇ ಸ್ವರ್ಗ

ಪತ್ನಿ : "ರೀ, ಉಪವಾಸ ಮಾಡುವುದರಿಂದ ಏನೇನು ಲಾಭ ಉಂಟಾಗುತ್ತೆ?"

ಮಂಕ : "ಬೇರೆ ಏನು ಲಾಭ ಆಗುತ್ತೋ ಗೊತ್ತಿಲ್ಲ. ಆ ಒಂದು ದಿನವಾದರೂ ನಾನು ಅಡುಗೆ ಮಾಡೋದು ತಪ್ಪುತ್ತೆ!'

ಮೈಸೂರು ಮಿತ್ರ

ಭಾನುವಾರ, 5 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಆನಂದದಾಯಕ ಮಾತುಗಳು ಚಂದ್ರಕಿರಣದಂತೆ ಮನಸ್ಸಿನತ್ತ ಪ್ರವಹಿಸುತ್ತವೆ –ಅವ್ವೈಯಾರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೀಸ್ದಾರ್ದ ಮುಕ್ಕಂಗೆ ಬಿಸಿ ಹಿಟ್ಟಿಲ್ಲ, ಕುಟ್ಟಾರ್ದ ಮುಕ್ಕಂಗೆ ಕೂಳಿಲ್ಲ

ನಿಮ್ಮ ಪತ್ರಗಳು

ಗ್ರಾಹಕರಿಗೆ ಸ್ಪಂದಿಸದ ಎಸ್‌ಬಿಐ

ಮಾನ್ಯರೆ,

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಬ್ಯಾಂಕ್‌ನಿಂದ ನಮಗೆ ತುಂಬಾ ತೊಂದರೆಯಾಗುತ್ತಿದೆ. ಯೊನೊ ಆ್ಯಪ್ ಡೌನ್‌ಲೋಡ್ ಎಂದು ಹೇಳುತ್ತಾರೆ. ಯಾವುದೋ ಪಾಸ್‌ವರ್ಡ್ ಕೊಟ್ಟಿರುತ್ತಾರೆ. 90 ದಿನಗಳಾದ ಮೇಲೆ ಅದು ಕೆಲಸ ಮಾಡುವುದಿಲ್ಲ. ಕೇಳಿದರೆ ಸಿಸ್ಟಮ್ ಸರಿಯಿಲ್ಲ. ಸರ್ವರ್ ಡೌನ್ ಎನ್ನುತ್ತಾರೆ. ಪಾಸ್‌ಬುಕ್ ಕೊಡಿ ಎಂದು ಕೇಳಿದರೆ ಸರ್ವಿಸ್ ಫಾರಂಗೆ ಸೈನ್, ನೇಮ್, ಅಡ್ರೆಸ್, ಮೊಬೈಲ್ ನಂಬರ್ ಎಲ್ಲವನ್ನೂ ಕೊಡಿ ಎಂದು ಕೇಳುತ್ತಾರೆಯೇ ಹೊರತು ಚಾರ್ಜ್ ಕಟ್ ಆಗುತ್ತದೆ ಎಂದು ಹೇಳುವುದಿಲ್ಲ. ಸರ್ವರ್ ಡೌನ್ ಆಗಿರುವುದರಿಂದ ಲಿಂಕ್ ಬರುತ್ತಿಲ್ಲ ಎಂದೆಲ್ಲಾ ಹೇಳುತ್ತಾರೆ. ಕೆಲಸವೂ ಬಿಟ್ಟು, ದುಡ್ಡನ್ನೂ ಕಳೆದುಕೊಳ್ಳಬೇಕಾಗಿದೆ.

ಏನೋ ಒಂದು ನೆಪ ಹೇಳಿ ಗ್ರಾಹಕರನ್ನು ಸಾಗಿ ಹಾಕುತ್ತಾರೆ. ವಿದ್ಯಾವಂತರಿಗೇ ಹೀಗಾದರೆ ಅವಿದ್ಯಾವಂತರ ಕಥೆ ಏನು? ನಮಗೇ ಗೊತ್ತಿಲ್ಲದೇ ಹಲವಾರು ಬಾರಿ ಪೆಟ್ರೋಲ್ ಬಂಕ್, ಶಾಪಿಂಗ್‌ಗೆ ಎಟಿಎಂ ಕಾರ್ಡ್‌ನಲ್ಲಿ 2–3ಬಾರಿ ದುಡ್ಡು ತೆಗೆದಿರುತ್ತೇವೆ. ಇದರಿಂದ ನಮ್ಮ ಹಣ ಗೊತ್ತಿಲ್ಲದೆ ಕಟ್ ಮಾಡಿರುತ್ತಾರೆ. ಕೇಳಿದರೆ ಅಪ್ಲಿಕೇಷನ್ ಕೊಡಿ, ಬಂದರೆ ಉಂಟು ಇಲ್ಲದಿದ್ದರೆ ಇಲ್ಲ ಎನ್ನುತ್ತಾರೆ. ಬ್ಯಾಂಕ್ ಇರುವುದು ನಮ್ಮ ದುಡ್ಡು ಹಾಗೂ ಒಡವೆಯ ರಕ್ಷಣೆಗಾಗಿ, ನಮ್ಮ ದುಡ್ಡು ದೋಚುವುದಕ್ಕಲ್ಲ.

– ಡಾ.ಎಂ.ಪಿ. ಪ್ರೀತಮ್, ಮೈಸೂರು.

ಪ್ರಾಂತೀಯ ಭಾಷಿಕರಿಗೆ ಅನ್ಯಾಯ

ಮಾನ್ಯರೆ,

ಅಖಿಲ ಭಾರತ ಸೇವಾ ಅಧಿಕಾರಿಗಳಾಗಿ ಪ್ರಜೆಗಳ ಸೇವೆ ಮಾಡಲು ಇರುವ ಮಾರ್ಗ ಸಿವಿಲ್ ಸರ್ವಿಸ್ ಪರೀಕ್ಷೆ. ಈ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉನ್ನತ ಹುದ್ದೆ ಪಡೆಯುವುದು ಎಷ್ಟೋ ಅಭ್ಯರ್ಥಿಗಳ ಕನಸಾಗಿದೆ. ಇದಕ್ಕಾಗಿ ಹಗಲು ರಾತ್ರಿ ಕಷ್ಟಪಟ್ಟು ಓದುತ್ತಿದ್ದಾರೆ ಆದರೆ ಪ್ರಿಲೀಮ್ಸ್ ಮತ್ತು ಮೈನ್ಸ್ ಪರೀಕ್ಷೆ ಪ್ರಶ್ನೆ ಪತ್ರಿಕೆಗಳು ಹಿಂದಿ ಹಾಗೂ ಇಂಗ್ಲಿಷ್ ಭಾಷೆಯಲ್ಲಿರುವುದು ದಕ್ಷಿಣ ಭಾರತ ಹಾಗೂ ಈಶಾನ್ಯ ಭಾರತದ ಅಭ್ಯರ್ಥಿಗಳಿಗೆ ಕಷ್ಟವಾಗಿದೆ. ಕೇಂದ್ರ ಸರ್ಕಾರಕ್ಕೆ ಈ ಹಿಂದೆ ಅನೇಕ ಬಾರಿ ದಕ್ಷಿಣ ಹಾಗೂ ಈಶಾನ್ಯ ರಾಜ್ಯಗಳು ಸ್ಥಳೀಯ ಭಾಷೆಗಳಲ್ಲಿ ಪರೀಕ್ಷೆ ನಡೆಸುವಂತೆ ಕೇಳಿಕೊಂಡರೂ ಯಾವುದೇ ಪ್ರಯೋಜನವಾಗಿಲ್ಲ. ಇದು ಸಂವಿಧಾನದ 16ನೇ ವಿಧಿ ಉದ್ಯೋಗದಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡಬಾರದು ಎಂಬ ನಿಯಮಕ್ಕೆ ವಿರುದ್ಧವಾಗಿದೆ. ಇದರಿಂದ ಇಂಗ್ಲಿಷ್, ಹಿಂದಿ ಬಾರದ ಸ್ಥಳೀಯ ಭಾಷಾ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ. ಕೇಂದ್ರ ಸರ್ಕಾರ ತಾರತಮ್ಯ ನೀತಿಯನ್ನು ಕೈ ಬಿಟ್ಟು ಆಯಾ ರಾಜ್ಯಗಳ ಸ್ಥಳೀಯ ಭಾಷೆಗಳಲ್ಲಿ ಪರೀಕ್ಷೆ ನಡೆಸಲು ಕ್ರಮವಹಿಸಲು ಮನವಿ.

–ಚನ್ನಕೇಶವ ಜಿ. ಕೆ. ತರೀಕೆರೆ

ಇಎಸ್‌ಐಸಿ ವಿಮಾ ವೇತನ ಮಿತಿ ಸಡಿಲಿಕೆಗೆ ಮನವಿ

ಮಾನ್ಯರೆ,

ಕೇಂದ್ರ ಸರ್ಕಾರವು ಖಾಸಗಿ ವಲಯದ, ಕಾರ್ಖಾನೆಗಳ ನೌಕರರ, ಖಾಸಗಿ ಸಂಸ್ಥೆಗಳ ನೌಕರರ ಆರೋಗ್ಯದ ಹಿತದೃಷ್ಟಿಯಿಂದ ಕಾರ್ಮಿಕರ ವಿಮಾ ಯೋಜನೆಯನ್ನು ಜಾರಿಗೆ (ESIC) ತಂದಿದ್ದು, ಪ್ರತಿ ತಿಂಗಳು ನೌಕರರಿಂದ ಇಂತಿಷ್ಟು ವಂತಿಗೆಯನ್ನು ಪಡೆದು ಕುಟುಂಬದ ಎಲ್ಲಾ ಸದಸ್ಯರಿಗೆ ಆರೋಗ್ಯ ವಿಮೆಯನ್ನು ಇಎಸ್‌ಐಸಿ ಆಸ್ಪತ್ರೆ ಹಾಗೂ ಔಷಧಾಲಯಗಳ ಮೂಲಕ ಚಿಕಿತ್ಸೆಯನ್ನು ನೀಡುತ್ತಿದೆ. ಈ ಸೌಲಭ್ಯವು ಕೆಲವು ಖಾಸಗಿ ನೌಕರರಿಗೆ ತುಂಬಾ ಅನುಕೂಲವಾಗುತ್ತಿದೆ. ಆದರೆ ನೌಕರರ ಪ್ರತಿ ತಿಂಗಳ ವೇತನವು ಸರ್ಕಾರದ ನಿಯಮಾನುಸಾರ ಗರಿಷ್ಟ ಮಿತಿ ರೂ.21,000 ಒಳಗೆ ಪಡೆಯುವ ಆಧಾರದ ಮೇಲೆ ಈ ವಿಮೆಯು ನಿರ್ಧಾರವಾಗುತ್ತದೆ. ರೂ. 21000 ಕ್ಕಿಂತ ಹೆಚ್ಚು ವೇತನವನ್ನು ಪಡೆಯುವ ನೌಕರರು ಈ ಚಿಕಿತ್ಸಾ ವಿಮೆಯಿಂದ ವಂಚಿತರಾಗುತ್ತಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಎಲ್ಲಾ ಬೆಲೆಗಳು ಗಗನಕ್ಕೆ ಏರಿದ್ದು ಜೀವನವನ್ನು ಸಾಗಿಸುವುದೇ ದುಸ್ತರವಾಗಿದ್ದು, ತುಂಬಾ ಕಷ್ಟದಲ್ಲಿರುವ ನೌಕರರು ಮನೆ ಬಾಡಿಗೆ, ಮಕ್ಕಳ ವಿದ್ಯಾಭ್ಯಾಸ ಶುಲ್ಕ, ಮನೆಯಲ್ಲಿ ಅನಾರೋಗ್ಯದಿಂದ ಇರುವ ಹಿರಿಯರ ಜೀವಗಳ ತಿಂಗಳ ಔಷಧ ಮತ್ತು ಚಿಕಿತ್ಸಾ ವೆಚ್ಚ, ಖಾಸಗಿ ನೌಕರರ ಮಹಿಳೆಯರ ಹೆರಿಗೆ ಆಸ್ಪತ್ರೆಯ ವೆಚ್ಚ ದಿನನಿತ್ಯದ ಆಹಾರ ಪದಾರ್ಥಗಳನ್ನು ಕೊಳ್ಳುವಿಕೆಗೆ ಅವರ ವೇತನ ಸಾಲುವುದೇ ಇಲ್ಲ. ಇಂತಹ ಸಂದರ್ಭದಲ್ಲಿ ಅನಾರೋಗ್ಯದಿಂದ ಆಸ್ಪತ್ರೆಗೆ ನೌಕರರ ಕುಟುಂಬ ಸದಸ್ಯರು ದಾಖಲಾದರೆ ಸಾವಿರಾರು ರೂಪಾಯಿ ಚಿಕಿತ್ಸೆಗಾಗಿ ಖರ್ಚಾಗುತ್ತದೆ. ಈ ಹಣವನ್ನು ಭರಿಸಲು ಬೇರೆ ಕಡೆ ಸಾಲ ಮಾಡಬೇಕಾಗುತ್ತದೆ. ನೌಕರನ ಆರ್ಥಿಕ ಪರಿಸ್ಥಿತಿಯು ಇನ್ನೂ ಹದಗೆಟ್ಟು ಸಾಲಗಾರನಾಗಿ ನೆಮ್ಮದಿಯನ್ನು ಕಳೆದುಕೊಳ್ಳುತ್ತಾನೆ. ಈ ಎಲ್ಲಾ ಸಮಸ್ಯೆಯಿಂದ ಖಾಸಗಿ ನೌಕರರು ಹೊರ ಬರಲು ಪ್ರತಿ ತಿಂಗಳ ವೇತನದ ಆಧಾರದ ಮೇಲೆ ರೂ 21,000 ರಿಂದ 30,000 ರೂಗಳಿಗೆ ಗರಿಷ್ಠ ವೇತನ ಮಿತಿಯನ್ನು ಸರ್ಕಾರವು ಏರಿಕೆ ಮಾಡಿದರೆ, ಈ ವೇತನವನ್ನು ಪಡೆಯುವ ನೌಕರರಿಂದ ಪ್ರತಿ ತಿಂಗಳು ವಂತಿಗೆಯನ್ನು ಪಡೆದು ಇಎಸ್‌ಐಸಿ ಆಸ್ಪತ್ರೆಯ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುತ್ತದೆ. ಸಾವಿರಾರು ನೌಕರರ ಬಾಳಲ್ಲಿ ಬೆಳಕು ಮೂಡಿದಂತಾಗುತ್ತದೆ ಹಾಗೂ ನೆಮ್ಮದಿಯ ಜೀವನ ಸಾಗಿಸಬಹುದು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಾಗಲೀ, ಕಾರ್ಮಿಕ ಸಚಿವರಾಗಲೀ, ರಾಜ್ಯ ಮತ್ತು ಕೇಂದ್ರ ಸರ್ಕಾರವಾಗಲೀ ಗಮನಹರಿಸಿ ನೌಕರರ ಆರೋಗ್ಯದ ಹಿತದೃಷ್ಟಿಯಿಂದ ಇಎಸ್‌ಐಸಿ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ಮನವಿ.

–ಬಸವರಾಜಪ್ಪ ಹೆಚ್., ಹಾಡ್ಯ, ಕೆ.ಆರ್.ನಗರ ತಾ.

ಇತಿಹಾಸವನ್ನು ತಿದ್ದುವುದು ಬೇಡ

ಮಾನ್ಯರೆ,

ಪ್ರೌಢಶಾಲೆ ಮತ್ತು ಪ್ರಾಥಮಿಕ ಪಠ್ಯ ಪುಸ್ತಕದ ಪರಿಷ್ಕರಣೆ ವಿವಾದ ದಿನೇ ದಿನೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಇದಕ್ಕಾಗಿ ಸಾಹಿತಿಗಳು ತಮ್ಮ ಉನ್ನತ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಸಾಹಿತಿಗಳು ರಾಜೀನಾಮೆ ನೀಡುವ ಬದಲು ತಮ್ಮ ವಿಚಾರಧಾರೆಯನ್ನು ಮಂಡಿಸಬೇಕು. ಇದಕ್ಕೆ ರಾಜೀನಾಮೆ ಉತ್ತರವಲ್ಲ

ಇಷ್ಟು ದಿನ ಕುವೆಂಪು ಹಾಗೂ ಟಿಪ್ಪು ಬಗೆಗಿನ ವಿಚಾರಗಳು ಮುನ್ನೆಲೆಯಲ್ಲಿದ್ದವು. ಈಗ ಬಸವಣ್ಣ ಪಠ್ಯ ಕೂಡ ಚರ್ಚೆಗೆ ಗ್ರಾಸವಾಗಿದೆ. ಸಮಾಜದಲ್ಲಿ ಜಾತಿ ತಾರತಮ್ಯ ತಲೆಯೆತ್ತಿದೆ. ಈ ವಿಷಯದಿಂದ ಸಾಮೀಜಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಪಠ್ಯ ಪುಸ್ತಕದಲ್ಲಿ ಮಕ್ಕಳಿಗೆ ಇತಿಹಾಸವನ್ನು ಇತಿಹಾಸವಾಗಿ ಬೋಧಿಸಬೇಕು. ಇತಿಹಾಸವನ್ನು ತಿದ್ದಬಾರದು. ಯಾವುದೇ ಇತಿಹಾಸವನ್ನು ವೈಭವೀಕರಿಸುವುದು ಅಥವಾ ಚುಟುಕುಗೊಳಿಸುವುದಕ್ಕೆ ಇದು ಕಥೆಯಲ್ಲ. ಮಕ್ಕಳಿಗೆ ಪ್ರಸ್ತುತಕ್ಕೆ ಅನುಗುಣವಾಗಿ ಪಠ್ಯ ಅಳವಡಿಸಿಕೊಳ್ಳಬೇಕು. ಆ ಪಠ್ಯದಲ್ಲಿ ಜೀವನ ಮೌಲ್ಯವನ್ನು ಅಳವಡಿಸಬೇಕು. ಈಗಾಗಲೇ ಶಾಲೆ ಆರಂಭವಾಗಿದೆ. ವಿದ್ಯಾರ್ಥಿಗಳಿಗೆ ಸಾಧಕರ ಮೇಲೆ ಗೌರವ ಮೂಡುವ ಹಾಗೆ ಪಠ್ಯಕ್ರಮವನ್ನು ಅಳವಡಿಸಿ ವಿದ್ಯಾರ್ಥಿಗಳಿಗೆ ಗೊಂದಲ ಸೃಷ್ಟಿಸಬೇಡಿ. ದೇಶದಲ್ಲಿ ನಡೆಯುವ ಎಲ್ಲಾ ವಿಚಾರಗಳಿಗೆ ರಾಜಕೀಯ ಬೆರೆಸಿ, ಸಮಾಜದಲ್ಲಿ ಅಶಾಂತಿ ಮೂಡಿಸಬೇಡಿ. ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ನಿಮ್ಮ ನಡವಳಿಕೆ ತೊಡಕಾಗುವುದು ಬೇಡ.

– ಎಂ. ಎಸ್. ಉಷಾ ಪ್ರಕಾಶ್, ಮೈಸೂರು



ಅಡ್ಡಂಡ ಸಿ. ಕಾರ್ಯಪ್ಪ

ನಿರ್ದೇಶಕರು, ರಂಗಾಯಣ, ಮೈಸೂರು

email : addandacariappa@gmail.com

ಪ್ರಚಲಿತ

ಬದಲಾವಣೆ ಜಗದ ನಿಯಮ

ಪಠ್ಯಪುಸ್ತಕ ಪರಿಷ್ಕರಣೆ ರಗಳೆ! ಏನಿದು ಇಷ್ಟೊಂದು ರಾದ್ಧಾಂತ, ಏನಾದರೂ ಆಗಬಾರದ್ದು ಆಗಿಹೋಯಿತಾ? ನಮ್ಮನ್ನು ನಾವೇ ಕೇಳಿಕೊಳ್ಳಬೇಕಿದೆ. ನಮ್ಮಲ್ಲಿ ಅರವತ್ತು ಜನರ ಗುಂಪೊಂದಿದೆ. ಈ ಗುಂಪು, ಹಿಂದಿನ ಕಾಂಗ್ರೆಸ್ ಸರಕಾರದಲ್ಲಿ ವಿವಿಧ ಹುದ್ದೆಗಳಲ್ಲಿ ಇದ್ದವರು, ಅಕಾಡೆಮಿ, ಪ್ರಾಧಿಕಾರ ಇತ್ಯಾದಿ. ಈ ಜನ ಹೇಳಿ ಕೇಳಿ ಎಡಪಂಥೀಯ ಚಿಂತನೆಯವರು. ಈ ಗುಂಪೇ ಇಂದು ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ ದೊಡ್ಡ ಗುಲ್ಲು ಎಬ್ಬಿಸುತ್ತಿದೆ. ಕಾರಣ ಏನು?


ಕಾರಣ ಹುಡುಕಬೇಕಿಲ್ಲ. ಇವರು ಸಿದ್ಧಾಂತವಾದಿಗಳು! ಇವರ ಚಿಂತನೆಯೇ ಇರಬೇಕು, ಇರುತ್ತದೆ ಎಂದು ನಂಬಿದವರು. ಈ ನಂಬಿಕೆ ಹುಸಿಯಾದಾಗ ರಗಳೆ ಮಾಡುತ್ತಾರೆ. ತಾವೇ 'ಬುದ್ಧಿಜೀವಿಗಳು, ಚಿಂತಕರು' ಎನ್ನುವ ಇವರು ಅಷ್ಟೂ ಜನ ಸೇರಿ ಸಹಿ ಹಾಕುತ್ತಾರೆ. ಪತ್ರಿಕೆಗಳಿಗೆ ಹೇಳಿಕೆ ಬಿಡುಗಡೆ ಮಾಡುತ್ತಾರೆ. ಪತ್ರಿಕೆಗಳಲ್ಲಿ 'ಬುದ್ಧಿಜೀವಿಗಳ ಆಕ್ರೋಶ' ಎಂದು ತಲೆಬರಹ ಬಂದಿರುತ್ತದೆ.

ಬರಗೂರು ರಾಮಚಂದ್ರಪ್ಪನವರು ಇದ್ದಾಗ ಆ ಸಮಿತಿ ಅವರ ಮೂಗಿನ ನೇರಕ್ಕೆ ಪಠ್ಯಪುಸ್ತಕಗಳ ಪರಿಷ್ಕರಣೆ ಮಾಡಿದ್ದಾರೆ. ಯಾರೂ ಕೇಳಿಲ್ಲ. ಮಹಾತ್ಮಾಗಾಂಧಿ, ವಿವೇಕಾನಂದ, ಕುವೆಂಪುರವರ ಪಠ್ಯ ಅಥವಾ ಅವರ ಚಿಂತನಾ ಬರಹಗಳನ್ನು ಕೈಬಿಟ್ಟರೂ ಯಾರೂ ಗೊಂದಲಗೊಳ್ಳಲಿಲ್ಲ. ಕಾರಣ ಅವರು ಬುದ್ಧಿಜೀವಿಗಳು, ಪ್ರಗತಿಪರರು. ಏನೇ ಮಾಡಿದರೂ ನಡೆಯುತ್ತದೆ. ಆದರೆ ಈಗ ಹಾಗಿಲ್ಲ!

ಇಂದು ಆಕಾಶವೇ ಕಳಚಿಬಿದ್ದಂತೆ ಚಡಪಡಿಸುತ್ತಿರುವುದು ಎರಡು ಕಾರಣಕ್ಕೆ. ಒಂದು ಡಾ. ಕೇಶವ ಬಲರಾಮ ಹೆಡಗೆವಾರ್ ಮತ್ತು ಚಕ್ರವರ್ತಿ ಸೂಲಿಬೆಲೆಯವರ ಚಿಂತನಾ ಬರಹಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸಿದ್ದಕ್ಕೆ. ಹೌದು! ಸೇರಿಸಿದರೆ ತಪ್ಪೇನು?

ಇನ್ನೂ ಒಂದು ವಿಷಯ, ಎಡಪಂಥೀಯ ಚಿಂತನೆ ಇರಬಹುದಾದರೆ ಬಲಪಂಥೀಯ ಚಿಂತನೆ ಯಾಕೆ ಬೇಡ? ಕಳೆದ 60 ವರ್ಷಗಳಲ್ಲಿ ಸ್ವಾತಂತ್ರ್ಯ ಬಂದಲ್ಲಿಂದ 'ಚರಿತ್ರೆ'ಯನ್ನು ಈ ಪಂಥೀಯರು ತಮ್ಮ ಮೂಗಿನ ನೇರಕ್ಕೆ ಬರೆದು ಪಠ್ಯವಾಗಿಸಿದ್ದನ್ನು ನಾವು ಓದಿಲ್ಲವೇ. ಓದಿ ಅದೇ ಸತ್ಯವೆಂದು ನಂಬಿಕೊಂಡು ಬಂದಿಲ್ಲವೇ? ಆದರೆ ನಿಧಾನವಾಗಿ ತಿಳಿಯುತ್ತಾ ಹೋಯಿತು, ಇದೆಲ್ಲಾ ಅರ್ಧ ಸತ್ಯವೆಂದು. ನಾವು ಚರಿತ್ರೆಯಲ್ಲಿ ನಮ್ಮ ಸೋಲಿನ ಕತೆಗಳನ್ನೇ ಕೇಳಿದ್ದೇವೆ.

> ಹೆಡಗೆವಾರ್ ಅವರನ್ನೇ ತೆಗೆದುಕೊಳ್ಳಿ, 1925ರ ಮೊದಲು ಕಾಂಗ್ರೆಸ್ ಪಕ್ಷದಲ್ಲಿದ್ದವರು. ನಾಗಪುರ ಕಾಂಗ್ರೆಸ್ ಅಧಿವೇಶನ ಸಂಘಟಿಸಿದವರು, ಇಲ್ಲಿನ ಕಾಂಗ್ರೆಸ್ಸಿನ ಮಹಾ ಕಾರ್ಯದರ್ಶಿಯಾಗಿದ್ದವರು. ಬಾಲ್ಯದಿಂದಲೇ ದೇಶಭಕ್ತಿಯನ್ನು ಮೈಗೂಡಿಸಿಕೊಂಡು, ಗಾಂಧೀಜಿಯನ್ನು ಬೆಂಬಲಿಸಿ ಸತ್ಯಾಗ್ರಹಕ್ಕಿಳಿದವರು. ವಂದೇಮಾತರಂ ಹೇಳುತ್ತಾ ಒಂದು ವರ್ಷ ಸೆರೆಮನೆಯಲ್ಲಿ ಕಳೆದವರು. ಗಾಂಧೀಜಿಯವರ ದಾರಿ ಸರಿಹೋಗದು ಎಂದು ತೀರ್ಮಾನಿಸಿ 1925 ರಲ್ಲಿ 'ರಾಷ್ಟ್ರೀಯ ಸ್ವಯಂ ಸೇವಕ' ಸಂಘ ಕಟ್ಟಿದವರು. ಇಂದು ಈ ಸಂಘ ವಿಶ್ವದ ಅತೀ ದೊಡ್ಡ ಸ್ವಯಂ ಸೇವಕ ಕಾರ್ಯಕರ್ತರನ್ನು ಹೊಂದಿರುವ ಸಂಸ್ಥೆ. ಕೋಟಿ ಕೋಟಿ ಸ್ವಯಂ ಸೇವಕರು ಭಾರತದ ಉದ್ದಗಲಕ್ಕೂ ನಿತ್ಯ ಶಾಖೆಯಲ್ಲಿದ್ದಾರೆ.



ನಮ್ಮ ಗೆಲುವಿನ ಕತೆಗಳು ಎಲ್ಲಿ? ಅಕ್ಬರ್ ಗ್ರೇಟ್, ಅಲೆಕ್ಸಾಂಡರ್ ಗ್ರೇಟ್ ಎಂದಿದ್ದೇವೆ. ಆದರೆ ಈ ನೆಲದಲ್ಲಿ ಅವರನ್ನು ಹಿಮ್ಮೆಟ್ಟಿಸಿದವರು ಎಷ್ಟು ಜನ ವೀರರಿಲ್ಲ. ನಮ್ಮೊಳಗಿನ ಕಿತ್ತಾಟ–ಹೊಟ್ಟೆ ಉರಿಯಿಂದ ಸೋಲುತ್ತಾ ಬಂದಿದ್ದೇವೆ ಅಷ್ಟೆ.

ಇದೀಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿದ್ದೇವೆ. ನಮಗೆ ಗೊತ್ತಿರುವ ನಾಲ್ಕಾರು ಹೆಸರುಗಳೇ ಸ್ವಾತಂತ್ರ್ಯ ತಂದು ಕೊಟ್ಟಿವೆ ಎಂಬ ನಂಬಿಕೆ. ಗಾಂಧೀಜಿ ಯವರೇ ಹೇಳಿದ್ದಾರೆ 'ಈ ಸ್ವಾತಂತ್ರ್ಯ ಕೆಲವರಿಂದ ಮಾತ್ರ ಬಂದದ್ದಲ್ಲ. ಅಸಂಖ್ಯ ದೇಶಭಕ್ತರ ತ್ಯಾಗ ಬಲಿದಾನದಿಂದ ಬಂದಿದೆ.' ಇದನ್ನು ಅರ್ಥ ಮಾಡಿಕೊಳ್ಳಬೇಕಲ್ಲವೇ. ಜತಿನ್‌ದಾಸ್ ಎಂಬುವರು ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆಯಲ್ಲಿ 64 ದಿನ ಉಪವಾಸವಿದ್ದು ಪ್ರಾಣ ಬಿಟ್ಟರು. ಅತ್ಯಂತ ದೀರ್ಘಕಾಲ ಉಪವಾಸವಿದ್ದವರು ಎಂಬ ದಾಖಲೆ ಇದೆ. ಎಷ್ಟು ಜನ ಇವರ ಹೆಸರು ಕೇಳಿದ್ದಾರೆ? ಆದರೆ ಈ ಉಪವಾಸ ಪ್ರತಿಭಟನೆ ಮಾಡಿ ಬಲಿದಾನ ಮಾಡಿದ ವೀರನ ಚರಿತ್ರೆಯನ್ನು ಓದಿದ್ದೇವಾ? ಇಂತಹ ಅಸಂಖ್ಯ ವೀರರು ಚರಿತ್ರೆಯ ಪುಟಗಳಲ್ಲಿ ಕಣ್ಮರೆಯಾಗಿದ್ದಾರೆ. ಕೆಲವೇ ಕೆಲವು ಜನರನ್ನು ಮೆರೆಸುವ ಪ್ರಕ್ರಿಯೆ ಆಗಿಹೋಯಿತು. ಇದಕ್ಕೆ ಕಾರಣ ಹುಡುಕಬೇಕಿಲ್ಲ. ಅಧಿಕಾರಶಾಹಿ! ಓಲೈಕೆ ರಾಜಕಾರಣ! ಇವುಗಳಿಂದ ನಮ್ಮ ಯುವ ಸಮಾಜವನ್ನು ಹೇಡಿಗಳನ್ನಾಗಿ ಮಾಡಬೇಕೆ?

ಹೆಡಗೆವಾರ್ ಅವರನ್ನೇ ತೆಗೆದುಕೊಳ್ಳಿ, 1925ರ ಮೊದಲು ಕಾಂಗ್ರೆಸ್ ಪಕ್ಷದಲ್ಲಿದ್ದವರು. ನಾಗಪುರ ಕಾಂಗ್ರೆಸ್ ಅಧಿವೇಶನ ಸಂಘಟಿಸಿದವರು, ಇಲ್ಲಿನ ಕಾಂಗ್ರೆಸ್ಸಿನ ಮಹಾ ಕಾರ್ಯದರ್ಶಿಯಾಗಿದ್ದವರು. ಬಾಲ್ಯದಿಂದಲೇ ದೇಶಭಕ್ತಿಯನ್ನು ಮೈಗೂಡಿಸಿಕೊಂಡು, ಗಾಂಧೀಜಿಯನ್ನು ಬೆಂಬಲಿಸಿ ಸತ್ಯಾಗ್ರಹಕ್ಕಿಳಿದವರು. ವಂದೇ ಮಾತರಂ ಹೇಳುತ್ತಾ ಒಂದು ವರ್ಷ ಸೆರೆಮನೆಯಲ್ಲಿ ಕಳೆದವರು. ಗಾಂಧೀಜಿಯವರ ದಾರಿ ಸರಿ ಹೋಗದು ಎಂದು ತೀರ್ಮಾನಿಸಿ 1925ರಲ್ಲಿ 'ರಾಷ್ಟ್ರೀಯ ಸ್ವಯಂ ಸೇವಕ' ಸಂಘಕಟ್ಟಿದವರು. ಇಂದು ಈ ಸಂಘ ವಿಶ್ವದ ಅತೀ ದೊಡ್ಡ ಸ್ವಯಂ ಸೇವಕ ಕಾರ್ಯಕರ್ತರನ್ನು ಹೊಂದಿರುವ ಸಂಸ್ಥೆ. ಕೋಟಿ ಕೋಟಿ ಸ್ವಯಂ ಸೇವಕರು ಭಾರತದ ಉದ್ದಗಲಕ್ಕೂ ನಿತ್ಯ ಶಾಖೆಯಲ್ಲಿದ್ದಾರೆ. ದೇಶದ ಸಂಕಷ್ಟ ಕಾಲದಲ್ಲಿ ಧಾವಿಸಿ ಬರುತ್ತಾರೆ. ಈ ಸಂಸ್ಥೆ ಹಿಂದೂ ಧರ್ಮದ ಪ್ರತಿಪಾದಕರಾಗಿದ್ದರೂ 'ದೇಶವೆಂದರೆ ತಾಯಿ' ಎಂದು ನಂಬಿದವರು. ಹೆಡಗೆವಾರ್ ಚಿಂತಕರು, ಸುಶಿಕ್ಷಿತರು, ಸಜ್ಜನರು ಯಾಕೆ ಇವರ ಚಿಂತನೆ ಪಠ್ಯವಾಗಬಾರದು? ನಟಿ ಜಯಮಾಲರ ಚಿಂತನೆ ಪಠ್ಯವಾಗಬಹುದಾದರೆ, ಚಕ್ರವರ್ತಿ ಸೂಲಿಬೆಲೆಯವರದು ಯಾಕಾಗಬಾರದು? ಎಡಪಂಥೀಯರಿಗೆ ಹಿಡಿಸದು ಎಂದರೆ ಅದೆಲ್ಲವನ್ನೂ ಕೈಬಿಡಬೇಕೆ?

ನಮಗೂ ಕಿರುಕುಳವಾಗಿದೆ. ರಂಗಾಯಣದ ಸಮಾರಂಭಕ್ಕೆ ಚಕ್ರವರ್ತಿ ಸೂಲಿಬೆಲೆಯವರನ್ನು ಅತಿಥಿಯನ್ನಾಗಿ ಕರೆದಿದ್ದೇವೆ ಎನ್ನುವ ಕಾರಣಕ್ಕೆ ಇದೇ ಎಡಪಂಥೀಯರ ಗುಂಪು 20 ದಿನ ರಂಗಾಯಣದ ಗೇಟಿನ ಮುಂದೆ ಶಾಮಿಯಾನ ಹಾಕಿಕೊಂಡು ಪ್ರತಿಭಟನೆ ನಡೆಸಿತು. ನಂತರ ಇದ್ದಕ್ಕಿದ್ದಂತೆ ಕೈಬಿಟ್ಟರು. ಚಕ್ರವರ್ತಿ ಸೂಲಿಬೆಲೆ ಬಹುರೂಪಿ ರಂಗೋತ್ಸವಕ್ಕೆ ಬಂದು ಭಾಷಣ ಮಾಡಿಯೂ ಹೋದರು. ಏನಾಯಿತು ಈಗ? ಅದೇ ರೀತಿ ಎಲ್ಲವೂ.

ಗೌರವಾನ್ವಿತ ದೇವನೂರ ಮಹದೇವರವರು 'ಪಠ್ಯದಲ್ಲಿ ನನ್ನ ಲೇಖನ ಬೇಡ' ಎಂದಿದ್ದಾರೆ. ಅದು ಅವರ ಇಷ್ಟಕ್ಕೆ ಬಿಟ್ಟದ್ದು. ಇದೇ ದೇವನೂರರವರು ಮೊನ್ನೆ ಮೈಸೂರಿನಲ್ಲಿ ಒಂದು ಪಕ್ಷದ ಅಭ್ಯರ್ಥಿಯ ನಾಮಪತ್ರ ಸಲ್ಲಿಸಲು ಬಂದಿದ್ದರು. ಇವರಿಗೂ ಒಂದು ಪಕ್ಷವಿದೆ, ಇವರದೂ ಒಂದು ಸಿದ್ಧಾಂತವಿದೆ. ತನ್ನ ಸಿದ್ಧಾಂತವೇ ಸರಿ, ಉಳಿದವರೆಲ್ಲರದೂ ತಪ್ಪು ಎಂದು ಅವರೇ ನಿರ್ಣಯಿಸಿದರೆ ಹೇಗೆ?

ಇಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಮೆಚ್ಚುವವರು ಈ ದೇಶದಲ್ಲಿ ಕೋಟಿ ಕೋಟಿ ಜನರಿದ್ದಾರೆ. ಹಾಗೆಯೇ ಮೆಚ್ಚದವರು ಲಕ್ಷ ಲಕ್ಷ ಇರಬಹುದು, ಇದ್ದಾರೆ. ಅಂದ ಮಾತ್ರಕ್ಕೆ ಈ ಕೋಟಿ ಕೋಟಿ ಜನರ ಭಾವನೆಯನ್ನು ಬಿಟ್ಟುಬಿಡಬೇಕಾ? ಕಳೆದ 60 ವರ್ಷಗಳಿಂದ ತನ್ನ ಸಿದ್ಧಾಂತವೇ ಸರಿ, ಇದೇ ಪ್ರಗತಿಪರ ಎನ್ನುತ್ತಾ ಬಂದವರಿಗೆ ವಾಕ್ ಸ್ವಾತಂತ್ರ್ಯ ಎಲ್ಲರಿಗೂ ಇದೆ ಎಂಬ ಪರಿಜ್ಞಾನವೇ ಇಲ್ಲ. ಈಗ ಚರ್ಚೆ ಮಾಡಬೇಕಾದ ಕಾಲ ಬಂದಿದೆ.


1925ರಲ್ಲಿ ಎರಡು ಮಹತ್ವದ ಘಟನೆಗಳು ಭಾರತದಲ್ಲಿ ಘಟಿಸಿವೆ. ಒಂದು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪನೆ, ಇನ್ನೊಂದು ಕಮ್ಯುನಿಸ್ಟ್ ಪಾರ್ಟಿಯ ಸ್ಥಾಪನೆ. ಈ 98 ವರ್ಷಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ದೊಡ್ಡದಾಗಿ ಬೆಳೆದು ಒಂದು ರಾಜಕೀಯ ಪಕ್ಷವನ್ನು ನಿಯಂತ್ರಿಸುವ, ಮುನ್ನಡೆಸುವ, ನಾಯಕನನ್ನು ಸೂಚಿಸುವ ನಿರ್ಣಾಯಕ ಪಾತ್ರ ವಹಿಸುವ ಶಕ್ತಿ ಪಡೆದಿದೆ. ಆದರೆ ಅದೇ ಕಮ್ಯೂನಿಸ್ಟ್ ಪಾರ್ಟಿ ಏನಾಯಿತು? ಎಲ್ಲಿದೆ? ಪಶ್ಚಿಮ ಬಂಗಾಳದಲ್ಲೇ ಇಲ್ಲ. ಕರ್ನಾಟಕದಲ್ಲಂತೂ ಇಲ್ಲವೇ ಇಲ್ಲ. ಇದೇ ತಾನೇ ಎಡಪಂಥೀಯ ಚಿಂತನೆಯ ಪಕ್ಷ. ಯಾಕೆ ಹೀಗಾಯಿತು? ರಾಷ್ಟ್ರೀಯ ಸ್ವಯಂ ಸೇವಕ ಸಂಘ ಬಲಪಂಥೀಯ ಸಿದ್ಧಾಂತ ಹೌದಾದರೆ ಯಾಕೆ ಇಷ್ಟೊಂದು ಅಗಾಧವಾಗಿ ಬೆಳೆಯಿತು. ಯೋಚಿಸಬೇಕಾದವರು ಬಲಪಂಥೀಯರಲ್ಲ, ಎಡಪಂಥಿಯರು. ಇದೀಗ ಈ ಶಕ್ತಿ ಕುಂದಿದ ಪಕ್ಷ ವಿವಿಧ ಪಕ್ಷಗಳಲ್ಲಿ ಪರಾವಲಂಬಿಗಳಾಗಿ ಅಂಟಿಕೊಂಡು ಗಿಮಿಕ್‌ಗೆ ಇಳಿದಿದೆ. ಮೊದಲು ಅರ್ಥೈಸುವಂತೆ ನಟಿಸುವುದು, ಈ ಯತ್ನ ವಿಫಲವಾದರೆ ಗೊಂದಲಗೊಳಿಸುವುದು. (ಕನ್‌ವೆನ್ಸ್ ನಂತರ ಕನ್‌ಫ್ಯೂಸ್) ಇದೇ ಈಗ ಆಗುತ್ತಿರುವುದು. ಆದರೆ ಬಚ್ಚಿಟ್ಟ ಸತ್ಯಗಳೆಲ್ಲಾ ಬಿಚ್ಚುತ್ತಾ ಹೋಗುತ್ತಿವೆ. ಬದಲಾವಣೆ ಜಗದ ನಿಯಮ.

ಮನುಷ್ಯನ ಯಶಸ್ಸಿಗೆ ವೃತ್ತಿ, ಆರೋಗ್ಯ, ಸಂಬಂಧಗಳೇ ಇಂಧನ....

- ಪ್ರಖ್ಯಾತ ಅಂಕಣಕಾರ ಚೇತನ್ ಭಗತ್‌ರಿಂದ ಯಶಸ್ಸಿನ ಟಿಪ್ಸ್
- ನೀವು ನಿಮ್ಮ ಕನಸ್ಸಿನ ಹಿಂದೆ ಸಾಗಿದರಷ್ಟೇ ಯಶಸ್ಸು ಸಾಧ್ಯ



ಪ್ರಖ್ಯಾತ ಅಂಕಣಕಾರ ಚೇತನ್ ಭಗತ್‌ರಿಂದ ಮಾರ್ಗದರ್ಶಿ ಭಾಷಣ.



ಕಾರ್ಯಕ್ರಮ ಉದ್ಘಾಟನೆ ವೇಳೆ (ಎಡದಿಂದ) ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ವಿದ್ಯಾಶಂಕರ್, ಎಸ್‌ಟಿಜಿ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಸಿಇಓ ಅಂಡ್ ಎಂಡಿ ಸಿ.ಪಿ. ಶಿವರಾಜ್, ಎಕ್ಸೆಲ್ ಪಬ್ಲಿಕ್ ಸ್ಕೂಲ್ ಮುಖ್ಯಸ್ಥ ಡಿ.ಸುಧನ್ವ, ಚೇತನ್ ಭಗತ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ಆಯೋಜಕರಾದ ಗಿರೀಶ್ ಭಾಗಾ, ಮಂಜುನಾಥ್ ಅವರನ್ನು ಕಾಣಬಹುದು.

ಮೈಸೂರು, ಜೂ.4(ಎಂಕೆ)– ಮತ್ತೊಬ್ಬರ ನಿರೀಕ್ಷೆಗಳಿಗೆ ಮಣಿಯದೆ ನೀವು ನಿಮ್ಮ ಕನಸುಗಳ ಹಿಂದೆ ಹೋದರಷ್ಟೇ ಯಶಸ್ಸು ಸಾಧ್ಯ. ಇಂತಹ ಯಶಸ್ಸಿಗೆ ನಿರ್ವಹಿಸುವ ವೃತ್ತಿ, ಆರೋಗ್ಯ ಮತ್ತು ಸಂಬಂಧಗಳನ್ನು ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯ ಎಂದು ಹೇಳುವ ಮೂಲಕ ಪ್ರಖ್ಯಾತ ಅಂಕಣಕಾರರೂ, ಮಾರ್ಗದರ್ಶಿ ಭಾಷಣಕಾರ ಚೇತನ್ ಭಗತ್, ಯಶಸ್ಸಿನ ಗುಟ್ಟನ್ನು ಹೇಳಿಕೊಟ್ಟರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಮಾರ್ಗದರ್ಶಿ ಭಾಷಣ ಕಾರ್ಯಕ್ರಮದಲ್ಲಿ 'ಯಶಸ್ಸಿನ ವ್ಯಾಖ್ಯಾನ' ಕುರಿತು ಮಾತನಾಡಿದ ಅವರು, ನಿಮ್ಮ ಸ್ವಂತ ಕನಸುಗಳಿಗೊಂದು ಅವಕಾಶ ಕಲ್ಪಿಸಿ. ಜೀವನದಲ್ಲಿ ಯಶಸ್ವಿಯಾಗಲು ನಾನು ಹೇಗೆ ಬದಲಾಗಬೇಕು? ಹೇಗೆ ಇರಬೇಕು ಎಂಬಿತ್ಯಾದಿ ಚಿಂತನೆಗಳನ್ನು ಮಾಡುವುದಕ್ಕಿಂತ ಸಣ್ಣ–ಸಣ್ಣ ಸ್ಪಷ್ಟ ಗುರಿಗಳನ್ನು ಸಾಧಿಸುವ ಮೂಲಕ ಖುಷಿ–ಖುಷಿಯಿಂದಲೇ ಯಶಸ್ಸು ಸಾಧಿಸಬಹುದು ಎಂದು ಹೇಳಿದರು.

ನಮ್ಮ ಅರಿವಿಲ್ಲದೆಯೇ ಸ್ನಾನ, ಊಟ ಇತ್ಯಾದಿ ಕೆಲಸಗಳು ಹೇಗೆ ನಿತ್ಯ ಹವ್ಯಾಸಗಳಾಗಿರುತ್ತವೆಯೋ ಹಾಗೆಯೇ ಅಂದುಕೊಂಡ ಗುರಿ ಸಾಧನೆಗೆ ಕೈಗೊಳ್ಳುವ ಪ್ರತಿಯೊಂದು ಅಂಶಗಳನ್ನು ಹವ್ಯಾಸಗಳನ್ನಾಗಿ ಮಾಡಿಕೊಳ್ಳಬೇಕು. ಬೆಳಗ್ಗೆ 5–6 ಗಂಟೆಗೆ ಎದ್ದು, ನಿತ್ಯ ಹವ್ಯಾಸ (ಕೆಲಸದಲ್ಲಿ)ಗಳಲ್ಲಿ ತೊಡಗಿಕೊಂಡರೆ ಯಶಸ್ಸನ್ನು ಪಡೆಯಬಹುದಾಗಿದೆ. ಅಲ್ಲದೆ ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳಲು ಅನುಕೂಲವಾಗುತ್ತದೆ ಎಂದರು.

ನಿಮಗಾಗಿ ಮೊದಲು ಬದುಕಿ: ನಿಮ್ಮಲ್ಲಿರುವ ಕನಸುಗಳನ್ನು ಮರೆತು ತಂದೆ–

'ಐಕಾನ್ ಆಫ್ ಮೈಸೂರ್' ಪ್ರಶಸ್ತಿ ಪ್ರದಾನ...

ಇದೇ ವೇಳೆ ಎಂ.ಆರ್ ಮಿತ್ರ ಫೌಂಡೇಶನ್ ವತಿಯಿಂದ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಮುಖ್ಯಸ್ಥ ಡಿ.ಸುಧನ್ವ ಹಾಗೂ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಅವರಿಗೆ 'ಐಕಾನ್ ಆಫ್ ಮೈಸೂರ್' ಪ್ರಶಸ್ತಿ ನೀಡಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ತಾಯಿ, ಹೆಂಡತಿ–ಮಕ್ಕಳು, ಮನೆ ಎನ್ನುತ್ತಲೇ ಸರಿಯಾದ ಸಮಯಕ್ಕೆ ಊಟ, ನಿದ್ರೆ ಮಾಡದೆ ಆರೋಗ್ಯ ಹಾಳುಮಾಡಿಕೊಳ್ಳುವುದು ಸರಿಯಲ್ಲ. ನನ್ನ ಆರೋಗ್ಯವೂ ಹಾಳಾಗಿತ್ತು. ನಂತರ ಬ್ಯಾಂಕ್ ಕೆಲಸವನ್ನು ಬಿಟ್ಟು ಬರಹಗಾರನಾಗಬೇಕು ಎಂಬ ನನ್ನ ಕನಸಿನ ಕಡೆ ಸಾಗಿದೆ. ಸ್ವಲ್ಪ ದಿನ ಆರ್ಥಿಕವಾಗಿ ಕಷ್ಟವಾಯಿತು. ಆದರೆ ಕನಸು ಸಾಕಾರಗೊಂಡಂತೆ ಆರೋಗ್ಯ, ನನ್ನ ಮತ್ತು ನನ್ನ ಕುಟುಂಬದ ಸಂತೋಷದ ಜೊತೆ ಜೊತೆಗೆ ಯಶಸ್ಸು ದೊರಕುತ್ತಿದೆ ಎಂದು ತಮ್ಮ ಹಳೇ ದಿನಗಳನ್ನೇ ಉದಾಹರಣೆಯನ್ನಾಗಿ ನೀಡಿದ ಚೇತನ್ ಭಗತ್, ಯಶಸ್ಸಿಗೆ ನಿರ್ವಹಿಸುವ ವೃತ್ತಿ, ಆರೋಗ್ಯ ಮತ್ತು ಸಂಬಂಧಗಳನ್ನು ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ ಎಂಬುದನ್ನು ಮನದಟ್ಟು ಮಾಡಿದರು.

ಒಳ್ಳೆಯ ವೃತ್ತಿಯಲ್ಲಿದ್ದವರಿಗೆ ಆರೋಗ್ಯ ಮತ್ತು ಸಂಬಂಧಗಳು ಸರಿಯಾಗಿರುವುದಿಲ್ಲ. ಆರೋಗ್ಯ ಚೆನ್ನಾಗಿದ್ದಾರೆ ಮಾಡಲು ಒಳ್ಳೆಯ ಕೆಲಸವಿರುವುದಿಲ್ಲ.

ಕಳೆದುಹೋದ ಸಮಯ, ವಯಸ್ಸು ಮತ್ತೆಂದೂ ಬಾರದು....

> "ಜೀವನದಲ್ಲಿ ನಾವು ಕಳೆದುಕೊಳ್ಳುವ ಸಮಯ ಮತ್ತು ವಯಸ್ಸು ಮತ್ತೆಂದೂ ವಾಪಸ್ ಬರುವುದಿಲ್ಲ. ಸಾಮಾನ್ಯವಾಗಿ ಪ್ರಯೋಜನವಿಲ್ಲದ ವಿಷಯಗಳನ್ನು ಮೊಬೈಲ್‌ನಲ್ಲಿ ನೋಡುವವರೇ ಹೆಚ್ಚು. ದಿನದಲ್ಲಿ ಕಡಿಮೆ ಎಂದರೂ 5 ಗಂಟೆಗಳ ಕಾಲ ಮೊಬೈಲ್ ನೋಡುತ್ತಾ ಇದ್ದರೆ ನಮ್ಮ ಜೀವನದ ಅರ್ಧದಷ್ಟು ಭಾಗ ಮೊಬೈಲ್ ಜೊತೆಗೆ ಕಳೆದುಕೊಳ್ಳುತ್ತೇವೆಯೇ ಹೊರತು ಯಶಸ್ಸು ಪಡೆಯಲು ಸಾಧ್ಯವಾಗುವುದಿಲ್ಲ. ಎಲ್ಲವೂ ನಿಮ್ಮ ಮನಸ್ಸಿನ ಮೇಲೆ ನಿಂತಿದ್ದು, ಯಶಸ್ಸಿಗೆ ಬೇಕಾದ ಕೆಲಸಗಳನ್ನು ನಿಯಂತ್ರಣಕ್ಕೂ ಮೀರಿ ಮಾಡಬೇಕು. ಆಗಲೇ ಜೀವನ ಪರಿಪೂರ್ಣವಾಗುವುದು. ನಿಮಗಾಗಿ ನೀವು ಬದುಕಿ. ನಾನು ಯಾವಾಗಲೂ ಮುಂದೆ ಇರಬೇಕು ಎನ್ನುತ್ತಲೇ ಕನಸುಗಳನ್ನು ಸಾಕಾರಗೊಳಿಸಿಕೊಳ್ಳುವತ್ತಾ ಸಾಗಿ.
>
> –ಚೇತನ್ ಭಗತ್, ಪ್ರಖ್ಯಾತ ಅಂಕಣಕಾರ

ಆದ್ದರಿಂದ ನಿರ್ವಹಿಸುವ ವೃತ್ತಿ, ಆರೋಗ್ಯ ಮತ್ತು ಸಂಬಂಧಗಳನ್ನು ಸಮತೋಲನವಾಗಿ ಕಾಪಾಡಿಕೊಳ್ಳಬೇಕು. ಪ್ರತಿನಿತ್ಯ ಸಂತೋಷವಾಗಿರಬೇಕಾದರೆ ಸಮಯಕ್ಕೆ ಸರಿಯಾಗಿ ಊಟ, ನಿದ್ದೆ, ದೈಹಿಕ ವ್ಯಾಯಾಮ ಮತ್ತು ಒತ್ತಡವಿಲ್ಲದ ಕೆಲಸ ಅವಶ್ಯಕವಾಗಿರುತ್ತದೆ. ಎಂದಾದರೂ ನಿಮ್ಮ ಹೆಂಡತಿ ನೀವು ತುಂಬಾ ಕೆಲಸ ಮಾಡುತ್ತಿದ್ದೀರಿ, ಸಂಪಾದನೆ ಸಾಕು ಎಂದಿದ್ದಾರೆಯೇ? ಎಂದು ನೆರೆದಿದ್ದವರನ್ನು ಪ್ರಶ್ನಿಸಿದ ಅವರು, ತಮ್ಮದೇ ಶೈಲಿಯಲ್ಲಿ ಹಾಸ್ಯ ಚಟಾಕಿ ಹಾರಿಸಿದರು.

ಯಶಸ್ಸು ಸುಲಭವಲ್ಲ: ಸಾಧನೆ ಅಥವಾ ಯಶಸ್ಸು ಯಾರಿಗೂ ಸುಲಭವಾಗಿ ದೊರೆಯುವುದಿಲ್ಲ. ಯಶಸ್ಸಿಗೆ ಕಾರಣ ಗಳನ್ನು ಕೊಡಲು ಸಾಧ್ಯವಾಗುವುದಿಲ್ಲ. ಸವಾಲುಗಳನ್ನು ಎದುರಿಸುವ ಆತ್ಮವಿಶ್ವಾಸದೊಂದಿಗೆ ಸ್ಪಷ್ಟ ಗುರಿಗಳನ್ನು ಹೊಂದಿರಬೇಕು. ಅಂತಹ ಗುರಿಗಳತ್ತ ನಿಖರ ಗಮನ ಮತ್ತು ನಿರಂತರ ಕಠಿಣ ಪರಿಶ್ರಮಪಡಬೇಕಾಗುತ್ತದೆ. ಗುರಿಗಳ ಸಾಧನೆಗೆ ನಿಗದಿತ ಸಮಯವನ್ನು ಹಾಕಿಕೊಳ್ಳಬೇಕಾಗುತ್ತದೆ. ಈ ವರ್ಷ ಒಂದು ಹೊಸ ಕಂಪನಿಯೊಂದನ್ನು ಆರಂಭಿಸುತ್ತೇನೆ ಎಂದು ಗುರಿ ನಿಗದಿಪಡಿಸಿಕೊಂಡರೆ ಆರಂಭಿಸಲೇಬೇಕು. ಹಾಗೆಯೇ ಅಂದುಕೊಂಡ ತಕ್ಷಣವೇ ಎಲ್ಲವೂ ಸಾಧ್ಯವಾಗುತ್ತದೆ ಎಂದುಕೊಳ್ಳುವುದು ತಪ್ಪು. ಯಾವುದೇ ಗುರಿ ಸಾಕಾರ ಗೊಳ್ಳಲು ಸಮಯ ತೆಗೆದುಕೊಳ್ಳುತ್ತದೆ ಎಂಬುದನ್ನು ಅರಿತಿರಬೇಕು ಎಂದು ಕಿವಿಮಾತು ಹೇಳಿದರು.

ನೋವು, ಕಷ್ಟ ಮತ್ತು ಸೋಲು: ಯಶಸ್ಸು ಪಡೆಯಲು ನೋವು, ಕಷ್ಟ ಮತ್ತು ಸೋಲನ್ನು ಅನುಭವಿಸಲೇಬೇಕಾಗುತ್ತದೆ. ಸೋಲನ್ನು ಸ್ವೀಕರಿಸದೆ ಗೆಲುವು ಸಾಧ್ಯ ಎಂಬ ನಿರ್ಧಾರಕ್ಕೆ ಬರಬಾರದು. ಕಷ್ಟ–ಸುಖಗಳು ಒಂದೇ ನಾಣ್ಯದ ಎರಡು ಮುಖಗಳಾಗಿದ್ದು, ಕಷ್ಟದ ಹಿಂದೆ ಸುಖ ಹಾಗೂ ಸುಖದ ಹಿಂದೆ ಕಷ್ಟ ಇದ್ದೆ ಇರುತ್ತದೆ. ನಮ್ಮ ಭವಿಷ್ಯ ಉಜ್ವಲವಾಗಿರಬೇಕಾದರೆ ಸೋಲು–ಗೆಲುವು, ಕಷ್ಟ–ನಷ್ಟಗಳನ್ನು ಎದುರಿಸಲೇಬೇಕಾಗುತ್ತದೆ. ಸೋತವರೇ ಮತ್ತೆ ಗೆಲ್ಲಲು ಸಾಧ್ಯ. ಕಷ್ಟಪಟ್ಟವರೇ ಸುಖದಿಂದಿರಲು ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಯಶಸ್ಸು ಗಳಿಸಲು ಬುದ್ಧಿವಂತರೇ ಆಗಬೇಕೆಂದಿಲ್ಲ. ಸಾಮಾನ್ಯ ಬುದ್ಧಿಶಕ್ತಿ ಜೊತೆಗೆ ಆಲೋಚನೆ ಮಾಡುವ ಶಕ್ತಿ ಇದ್ದರಷ್ಟೇ ಸಾಕು ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿದ್ಯಾಶಂಕರ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ವ್ಯವಸ್ಥಾಪಕ ಸಂಪಾದಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ವಿಕ್ರಂ ಮುತ್ತಣ್ಣ, ಎಸ್‌ಟಿಜಿ ಶಿಕ್ಷಣ ಸಂಸ್ಥೆಗಳ ಸಿಇಓ ಹಾಗೂ ಎಂಡಿ ಸಿ.ಪಿ.ಶಿವರಾಜ್, ಆಯೋಜಕರಾದ ಗಿರೀಶ್ ಭಾಗಾ, ಮಂಜುನಾಥ್ ಮತ್ತಿತರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದಮಿತ್ರ
ಸಾಪ್ತಾಹಿಕ ಪುರವಣಿ

ನೂರು ಬೇಡ ಮೂರೇ ಗಿಡ ನೆಡಿ ಆದರೆ ಕಾಪಾಡಿ

ಮಂಜುನಾಥ ಬಿ.ಆರ್,
ಮೊ:8884684726

ಮನುಷ್ಯನಿಗೆ ಕುತ್ತಿಗೆ ಎಷ್ಟು ಮುಖ್ಯ ಅಂಗವೋ ಮರಗಳಿಗೆ ತನ್ನ ಬುಡ, ಬೇರು ಅಷ್ಟೇ ಮುಖ್ಯ ಅಂಗ. ಹಲವಾರು ರಸ್ತೆಬದಿಯ ಮರಗಳ ಕುತ್ತಿಗೆಗೆ ಇಂದು ಡಾಂಬರು ಮತ್ತು ಕಾಂಕ್ರೀಟ್‌ನ ನೇಣು ಬಿಗಿದಿದೆ. ಅವುಗಳ ಬೇರಿಗೆ ಸರಿಯಾದ ಪ್ರಮಾಣದಲ್ಲಿ ನೀರು ಸಿಗುತ್ತಿಲ್ಲ, ಗೊಬ್ಬರ ಸಿಗುತ್ತಿಲ್ಲ, ಬದಲಿಗೆ ಮನುಷ್ಯನ ನಿಸರ್ಗ ವಿರೋಧಿ ಚಟುವಟಿಕೆಗಳಿಂದ ವಿಷಕಾರಿ ರಸಾಯನಿಕಗಳು ಸೇರುತ್ತಿವೆ. ಅವುಗಳ ಬುಡದ ಪಕ್ಕದಲ್ಲಿ ದೊಡ್ಡ ಚರಂಡಿಗಳನ್ನು ತೆಗೆದು ಅವುಗಳ ಬೇರು ಆ ಕೆಟ್ಟ ನೀರಿಗೆ, ವಿಷ ರಸಾಯನಿಕಗಳಿಗೆ ಕೊಳೆತು ತನ್ನ ಜೀವಚೈತನ್ಯ ಕಳೆದುಕೊಂಡು ದಾರುಣ ಸಾವನ್ನಪ್ಪುತ್ತಿವೆ. ಮರಗಳ ಬುಡಕ್ಕೆ ಕರಗುವ ಕಸಕ್ಕಿಂತ ಕರಗದೇ ಇರುವ ಪ್ಲಾಸ್ಟಿಕ್ ನಂತಹ ಅಪಾಯಕಾರಿ ತ್ಯಾಜ್ಯಗಳೇ ಸೇರುತ್ತಿವೆ. ಇದು ಮಣ್ಣಿನ ಗುಣಮಟ್ಟ ಸ್ವರೂಪಕ್ಕೂ ಅಪಾಯ; ಭೂಮಿಯನ್ನು ಆಧರಿಸಿ ನಿಂತ ಮರ ಗಿಡಗಳಿಗೂ ಹಾನಿ. ಒಟ್ಟಾರೆ ಇಡೀ ನಿಸರ್ಗಕ್ಕೇ ತೊಡಕು.

ಪರಿಸರ ದಿನ ಬಂತೆಂದರೆ ಸಾಕು ಕೆಲವರು ಪರಿಸರ ಪ್ರೇಮಿಗಳಾಗುವರು. ಅವತ್ತೊಂದೇ ದಿನಕ್ಕೆ ತೋರುವ ಪರಿಸರ ಕಾಳಜಿ ಅವರ ಒಣ ಪ್ರತಿಷ್ಠೆಯ ಅನಾವರಣ. ಇನ್ನುಳಿದ ದಿನಗಳಲ್ಲಿ ಆ ಪರಿಸರಕ್ಕೆ ಅವರಿಂದಾಗುವ ಅಪಾಯಗಳ ಬಗ್ಗೆ ಕಿಂಚಿತ್ತೂ ಪ್ರಜ್ಞೆ ಇರುವುದಿಲ್ಲ. ಸಾವಿರದಿಂದ ಲಕ್ಷದವರೆವಿಗೆ ಗಿಡಗಳನ್ನು ನೆಡಬೇಕು ನಮ್ಮ ಹೆಸರುಗಳನ್ನು ಅಥವಾ ನಮ್ಮ ಸಂಘ ಸಂಸ್ಥೆಯ ಹೆಸರನ್ನು ಗಿನ್ನಿಸ್ ರೆಕಾರ್ಡ್‌ಗೆ ಸೇರಿಸಬೇಕು. ಲಿಮ್ಕಾ ಬುಕ್ಕಿಗೆ ಸೇರಿಸಬೇಕು, ವಿಶ್ವ ದಾಖಲೆಗೆ ಸೇರಿಸಬೇಕು. ಎಲ್ಲದರಲ್ಲೂ ಎಲ್ಲರಲ್ಲೂ ಸ್ಪರ್ಧೆ, ಥೂ ಇಂತಹ ಸ್ಪರ್ಧೆಗೆ ನಾಚಿಗೆಯಾಗಬೇಕು, ಹೇಸಿಗೆ ಎನಿಸಬೇಕು.

ಯಾವುದೇ ಜೀವಿಗೆ ಹುಟ್ಟನ್ನು ಕರುಣಿಸಿದ ನಂತರ ಅದಕ್ಕೆ ಇಂತಿಷ್ಟು ಸಮಯ ಪೋಷಣೆ ಎಂಬುವುದು ಅಗತ್ಯ. ಸಾವಿರ ಸಸಿಗಳನ್ನು ನೆಟ್ಟು ಅದಕ್ಕೆ ನೀರು ಗೊಬ್ಬರ ಹಾಕದೆ ಅವುಗಳ ಅಪೌಷ್ಟಿಕತೆಯ ಸಾವಿಗೆ ಬೂಟಾಟಿಕೆಯ ಪರಿಸರ ಪ್ರೇಮಿಗಳೆನಿಸುವವರು ಕಾರಣರಾಗುತ್ತಿದ್ದಾರೆ. ಇದಕ್ಕಾಗಿಯೇ ಒಂದಿಷ್ಟು ಪರಿಸರ ಪ್ರಜ್ಞೆ ಅಗತ್ಯ; ಅದೇನೆಂದರೆ ಎಲ್ಲರೂ ಒಂದೊಂದು ಗಿಡ ನೆಡಿ ಸಾಕು; ಅದರ ಪೋಷಣೆಯ ಜವಾಬ್ದಾರಿಯನ್ನು ಸ್ವತಃ ತೆಗೆದುಕೊಳ್ಳಿ, ಆಗ ಅದು ಸಾರ್ಥಕವಾಗುತ್ತದೆ. ಅದರ ಬದಲು ಒಬ್ಬರೇ ಸಾವಿರ ಸಸಿಗಳನ್ನು ನೆಟ್ಟು ಪೋಟೋ ತೆಗೆದು ಎಲ್ಲಾ ಸುದ್ದಿ ಮಾಧ್ಯಮಗಳಲ್ಲಿ ರಾರಾಜಿಸಿ, ಅಸಂಭವ ತೋರಿ ಅವುಗಳನ್ನು ಸಾವಿಗೀಡು ಮಾಡಬೇಡಿ.

ಇತ್ತೀಚಿನ ದಿನಗಳಲ್ಲಿ ಸಣ್ಣ ಗಾಳಿಮಳೆ ಬಂತೆಂದರೆ ಸಾಕು; ದೊಡ್ಡ ದೊಡ್ಡ ಬೃಹತ್ ಮರಗಳೇ ಧರೆಗೆ ಉರುಳುತ್ತಿವೆ. ಇದಕ್ಕೆ ಮುಖ್ಯ ಕಾರಣ ಭಾರೀ ಗಾಳಿಮಳೆ ಎಂಬುದೊಂದೇ ಅಲ್ಲ; ಮರಗಳಿಗೆ ಮಾನವರ ಪರಿಸರ ವಿರೋಧಿ ಕೃತ್ಯಗಳಿಂದಾಗಿ ಒದಗಿರುವ ಪೌಷ್ಟಿಕತೆಯ ಕೊರತೆ ಎನ್ನುವುದೇ ಸತ್ಯ. ಎಲ್ಲೆಡೆ ಕಾಂಕ್ರಿಟ್ ಕಾಡು ನಿರ್ಮಾಣವಾಗುತ್ತಿದೆ, ಡಾಂಬರು ರಸ್ತೆಗಳು



ನಿರ್ಮಾಣವಾಗುತ್ತಿದೆ; ಜಾಗತಿಕ ತಾಪಮಾನ ಹೆಚ್ಚಾಗಲು ಇದು ಪ್ರಮುಖ ಕಾರಣ. ಈ ಜಾಗತಿಕ ತಾಪಮಾನ ಮನುಷ್ಯನಿಗೆ ಮಾತ್ರ ಅಪಾಯವಲ್ಲ ನಿಸರ್ಗಕ್ಕೂ ಅಪಾಯವೇ. ಸಣ್ಣ ಮಳೆಯಾದರೂ ನಗರಗಳು ನೀರಿ ನಿಂದ ಆವೃತವಾಗುತ್ತಿದೆ ಇದಕ್ಕೆ ಕಾರಣ ಸುಸಜ್ಜಿತ ಚರಂಡಿ ಅಥವಾ ಕಾಲುವೆ ವ್ಯವಸ್ಥೆ ಇಲ್ಲವೆಂದಲ್ಲ. ಭೂಮಿಗೆ ಬಿದ್ದ ಮಳೆನೀರು ಇಂಗಲು ಅಥವಾ ಇಳಿಯಲು ಯಾವುದೇ ರೀತಿಯ ಪರಿಸರ ಸ್ನೇಹಿ ವಾತಾವರಣ ಮಾನವನಿಂದ ಬಹುತೇಕ ನಿರ್ಮಾಣವಾಗುತ್ತಿಲ್ಲ ಎನ್ನುವುದೇ ಸತ್ಯ. ಇದರಿಂದಲೇ ಮಳೆನೀರು ಎಲ್ಲೆಡೆ ಹರಿದು ಭೂಮಿಯ ಮೇಲ್ಮೈನಲ್ಲಿ ರೌದ್ರತೆಯನ್ನು ಸೃಷ್ಟಿಸು ವುದು; ಅಪಾರ ಹಾನಿಯನ್ನುಂಟು ಮಾಡುವುದು.

ಇನ್ನೊಂದು ಅಪಾಯಕಾರಿ ಬೆಳವಣಿಗೆ ಎಲ್ಲೆಡೆ ಜರುಗುತ್ತಿದೆ. ಇದರ ಅರಿವು ಎಷ್ಟು ಜನರಿಗಿದೆಯೋ ಗೊತ್ತಿಲ್ಲ. ಕಾಡು ಜಾತಿಯ (ವೈಲ್ಡ್) ಪ್ರಾಣಿ–ಪಕ್ಷಿಗಳಿಗೆ ಆಹಾರ ನೀಡಬಾರದು. ಅವುಗಳ ಆಹಾರ ಪದ್ಧತಿ ನಿಸರ್ಗದಲ್ಲಿ ವಿಭಿನ್ನವಾಗಿದೆ. ನಗರ ಭಾಗಗಳಲ್ಲಿ ಕೆಲವು ಕಡೆ ಪಾರಿವಾಳಗಳಿಗೆ ಆಹಾರ ನೀಡಲಾಗುತ್ತಿದೆ. ಇದು ಪಾರಿವಾಳಗಳ ಸಂತತಿಯನ್ನು ಹೆಚ್ಚಿಗೆ ಗೊಳಿಸಿದೆ. ಹೀಗೆ ಹೆಚ್ಚಿಗೆಗೊಂಡ ಪಾರಿವಾಳಗಳು ನಿಸರ್ಗದ ಆಹಾರ ಸರಪಳಿಗೆ ಅಪಾಯ ಎನ್ನುವುದು ಬಹಳ ಜನರಿಗೆ ತಿಳಿದಿಲ್ಲ. ಯಾರೋ ಜ್ಯೋತಿಷಿ ಹೇಳಿದರೆಂದು ಪಾರಿವಾಳಗಳಿಗೆ ಗೋಧಿ, ಜೋಳ, ಹುರಿಗಡಲೆ ಇನ್ನಿತರ ಕಾಳುಗಳನ್ನು ಕೊಟ್ಟು ತಮ್ಮ ಪಾಪ ಕಳೆದುಕೊಂಡೆವು ಎನ್ನುವ ರೀತಿಯಲ್ಲಿ ಸಾಕಲಾಗುತ್ತಿದೆ. ಇದರಿಂದ ಪಾರಿವಾಳಗಳು ಆಹಾರ ಹುಡುಕಿ ತಿನ್ನುವುದು; ವಲಸೆ ಹೋಗುವುದು ಮರೆಯಾಗುತ್ತಿದೆ. ಪಾರಿವಾಳಗಳು ಎಲ್ಲಾ ಕಡೆ ನೆಲೆಸುವ ಬದಲು ಒಂದೇ ಕಡೆ ನೆಲೆಸುವಂತಾಗುತ್ತಿದೆ. ಒಂದೇ ಕಡೆ ನೆಲೆಸಿದ ಪಾರಿವಾಳಗಳ ಮಲವಿಸರ್ಜನೆ ಇನ್ನಿತರ ಜೀವಸಂಕುಲಗಳಿಗೆ ತೊಡಕಾಗಿ ಪರಿಣಮಿಸದೇ ಇರದು.

ಉತ್ತರ ಇಟಲಿಯ ವೆನಿಸ್ ನಗರದಲ್ಲಿ ಪಾರಿವಾಳಗಳಿಗೆ ಆಹಾರ ನೀಡುವುದು ಕಾನೂನುಬಾಹಿರವಾಗಿದೆ. ಈ ರೀತಿ ಕಾನೂನು ತಂದಿರುವುದರ ಹಿಂದಿನ ಉದ್ದೇಶ ಪರಿಸರ ಸಮತೋಲನೆಯ ಅರಿವು. ಈ ಅರಿವು ವಿಶ್ವದ ಎಲ್ಲರಿಗೂ ಆಗಬೇಕಿರುವುದು ಅವಶ್ಯಕ. ಕೋತಿಗಳಿಗೆ ದೇವಸ್ಥಾನಗಳಲ್ಲಿ ಹಣ್ಣು, ಕಾಯಿ, ಪ್ರಸಾದ ನೀಡಿ ಅವುಗಳ ಆಹಾರ ಕ್ರಮವನ್ನು ಬದಲಾಯಿಸಲಾಗುತ್ತಿದೆ. ಮಂಗಗಳು ತಮ್ಮ ಆಹಾರಕ್ಕಾಗಿ ಎಷ್ಟರ ಮಟ್ಟಿಗಾಗಿವೆ ಎಂದರೆ ದೇವಸ್ಥಾನಕ್ಕೆ ಬರುವ ಭಕ್ತರ ಕೈಯಲ್ಲಿ ಏನೇ ಇದ್ದರೂ ಅದನ್ನು ಕಿತ್ತುಕೊಳ್ಳುವ; ಕೊಡದಿದ್ದರೆ ಅವರ ಮೇಲೆ ಎರಗಿಬೀಳುವ, ಜನರಿಗೆ ಅಪಾಯ ಉಂಟುಮಾಡುವ ಸ್ಥಿತಿಗೆ ತಲುಪಿವೆ. ಅಳಿಲುಗಳಿಗೂ ಸಹ ಹೆಚ್ಚಿಗೆ ಆಹಾರ ನೀಡಿ ಪೋಷಿಸಿದಷ್ಟೂ ಅವುಗಳ ಸಂತತಿ ಹೆಚ್ಚಿ ಇನ್ನಿತರ ವೃಕ್ಷಾಸಿ ಪಕ್ಷಿಗಳಿಗೆ ಅಪಾಯ ವನ್ನುಂಟು ಮಾಡುತ್ತವೆ. ಪಕ್ಷಿಗಳು ಮರಗಳಲ್ಲಿ ಗೂಡು ಕಟ್ಟಿ ಮೊಟ್ಟೆ ಇಟ್ಟಿರುವ ಸಮಯದಲ್ಲಿ ಅಳಿಲುಗಳು ಆ ಮೊಟ್ಟೆಗಳನ್ನು ಒಡೆದು ಹಾಕಿ ಆ ಪಕ್ಷಿಗಳ ಸಂತಾನೋತ್ಪತ್ತಿಗೆ ತೊಡಕನ್ನು ಉಂಟುಮಾಡುತ್ತವೆ. ಕಾಡು(ವೈಲ್ಡ್) ಪ್ರಾಣಿಗಳಿಗೆ ನೀರು ಕೊಡಿ ತಪ್ಪಿಲ್ಲ; ಅವುಗಳ ವಾಸಕ್ಕೆ ಯೋಗ್ಯವಾದ ಪರಿಸರ ನಿರ್ಮಾಣ ಮಾಡಿ ತಪ್ಪಿಲ್ಲ ಆದರೆ ಅವುಗಳಿಗೆ ಆಹಾರ ನೀಡಿ ಅವುಗಳನ್ನು ಪರಾವಲಂಬಿ ಜೀವಿಗಳನ್ನಾಗಿ ಎಂದಿಗೂ ಮಾಡಬೇಡಿ. ಇದು ಒಂದು ರೀತಿಯಲ್ಲಿ ನಿಸರ್ಗದ ಆಹಾರ ಸರಪಳಿಗೆ ಕೊಡಲಿ ಪೆಟ್ಟು ಬಿದ್ದಂತಾಗುತ್ತದೆ.

ಪರಿಸರದ ಬಗ್ಗೆ ಕಾಳಜಿವಹಿಸಬೇಕಾದ ನಾವೆಲ್ಲರೂ, ಈ ಕೆಳಗಿನ ವಿಚಾರಗಳನ್ನು ತಿಳಿಯುವುದು ಮತ್ತು ಅವುಗಳನ್ನು ಅನುಸರಿಸುವುದು ಅವಶ್ಯವಿದೆ. ಮೊದಲು ಕಾಡು ಮತ್ತು ಸಾಕು ಪ್ರಾಣಿ–ಪಕ್ಷಿಗಳು ಯಾವುವು ಎನ್ನುವುದನ್ನು ತಿಳಿಯಬೇಕು. ತದನಂತರ ಅವುಗಳ ಆಹಾರ ಕ್ರಮದ ಬಗ್ಗೆ, ವಾಸಸ್ಥಳದ ಬಗ್ಗೆ ತಿಳಿಯುವುದು ಒಳಿತು. ಸಾಕು ಪ್ರಾಣಿ–ಪಕ್ಷಿಗಳಿಗೆ ನಿಯಮಿತವಾಗಿ ಆಹಾರ ನೀಡಿ ಪೋಷಿಸುವುದರಲ್ಲಿ ಯಾವುದೇ ಅಪಾಯ ವಿಲ್ಲ. ಆದರೆ ಕಾಡು ಪ್ರಾಣಿ–ಪಕ್ಷಿಗಳನ್ನು ನಮ್ಮ ಇಚ್ಛೆಯ ಆಹಾರ ನೀಡಿ ಪೋಷಿಸುವುದು ಖಂಡಿತ ಅಪಾಯ. ಕೆಲವು ಪ್ರಾಣಿ–ಪಕ್ಷಿಗಳು ವಿಷಕಾರಿ ಹುಳು–ಹುಪ್ಪಟೆಗಳನ್ನು, ಸಸ್ಯಗಳನ್ನು ತಿಂದು ಪರಿಸರವನ್ನು ಸಂರಕ್ಷಣೆ ಮಾಡುವಂತಹ ಜೀವವೈವಿಧ್ಯ ಸ್ವರೂಪವನ್ನು ಹೊಂದಿರುತ್ತವೆ. ಆದರೆ ಇದರ ಅರಿವಿಲ್ಲದೆ ಅವುಗಳ ಆಹಾರ ಕ್ರಮವನ್ನು ಬದಲಿಸಿ ನಾವು ಆ ಕಾಡು ಪ್ರಾಣಿ–ಪಕ್ಷಿಗಳನ್ನು ನಮ್ಮ ತಪ್ಪಾದ ಆಹಾರ ಪದ್ಧತಿಯಲ್ಲಿ ಸಲಹಿದರೆ ಖಂಡಿತ ತಪ್ಪಾಗುತ್ತದೆ. ವನಪರಿಸರದ ವ್ಯಾಪ್ತಿಯನ್ನು ಮಾನವರಾದ ನಾವು ವಶಪಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕಾಡು ಪ್ರಾಣಿ–ಪಕ್ಷಿಗಳನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರದ್ದಾಗಿದೆ. ಇಂತಹ ಸಂದರ್ಭದಲ್ಲಿ ಈ ಕಾಡು ಪ್ರಾಣಿ –ಪಕ್ಷಿಗಳಿಗೆ ತಕ್ಕುದಾದ ಆಹಾರವಾದ ಹಣ್ಣಿನ ಮರಗಿಡಗಳನ್ನು ಬೆಳೆಸುವುದು; ಆ ಪ್ರಾಣಿಗಳಿಗೆ ತಕ್ಕುದಾದ ಉದ್ಯಾನ ವನಗಳನ್ನು ತುಂಬಾ ವೈಜ್ಞಾನಿಕವಾಗಿ ನಿರ್ಮಿಸುವುದು ಅವಶ್ಯವಾಗಿದೆ. ಪ್ರತೀ ನಗರದಲ್ಲೂ ಈ ರೀತಿಯ ಉದ್ಯಾನ ವನಗಳು ಅಲ್ಲಲ್ಲಿ ನಿರ್ಮಾಣವಾಗಲಿ.

ಭೂಮಿ
–ಮನುಷ್ಯ ಮಾತ್ರವಲ್ಲ ಕೋಟಿ ಕೋಟಿ ಜೀವಜಂತುಗಳದ್ದು!

ಡಾ.ಎಂ.ಎನ್.ಸುಧಾ
ಮೊ:9448071933



ಪ್ರತಿ ವರ್ಷ ಜೂನ್ 5 ರಂದು 'ವಿಶ್ವ ಪರಿಸರ ದಿನ' ಆಚರಿಸಲಾಗುತ್ತದೆ. 1972ರಿಂದ ವಿಶ್ವ ಸಂಸ್ಥೆಯು 'ಯುನೈಟೆಡ್ ನೇಷನ್ಸ್ ಎನ್‌ವೈರನ್‌ಮೆಂಟ್ ಪ್ರೋಗ್ರಾಂ' ಅಂಗ ಸಂಸ್ಥೆಯಡಿ ಪ್ರತಿ ವರ್ಷವೂ ಒಂದೊಂದು ದೇಶದಲ್ಲಿ ಘೋಷಣಾ ವಾಕ್ಯದೊಂದಿಗೆ ಆಚರಿಸಲ್ಪಡುತ್ತದೆ.


'ವಿಶ್ವ ಪರಿಸರ ದಿನ'ಕ್ಕೆ ಈ ಬಾರಿ 50ರ ಸಂಭ್ರಮ! 'Only one Earth' 'ನಮಗಿರುವುದು ಒಂದೇ ಭೂಮಿ' ಎಂಬುದು 1972ರ ವಾಕ್ಯವಾಗಿತ್ತು, ಈ ಭಾರಿಯೂ 2022ರ ಘೋಷಣಾವಾಕ್ಯ 'Only one Earth' ಹೇಗಿದೆ ನೋಡಿ ವಿಪರ್ಯಾಸ ಪರಿಸರ ಹಾಳಾಗದಂತೆ ಕಾಪಾಡಲು ತಡೆಯಲು ಏನೇನು ಮಾಡಬೇಕೆಂದು ವಿಶ್ವಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ದೇಶಗಳ ನಡುವಿನ ಚರ್ಚೆಗಳು ಬರೀ ಗೋಷ್ಠಿ, ಚರ್ಚೆಗಷ್ಟೇ ಸೀಮಿತವಾಗಿದೆಯಷ್ಟೇ ಅಲ್ಲವೇ ಕಳೆದ 100 ವರ್ಷಗಳಿಂದ ಜಗತ್ತಿನಲ್ಲಿ ಉದ್ಯಮಗಳು ಬೆಳೆದಿವೆ. ಜೊತೆಗೆ ಮಾಲಿನ್ಯವೂ ಹೆಚ್ಚಿದೆ, ಮಾಲಿನ್ಯವೆಂದರೆ ವಾಯು, ಜಲ, (ನದಿ, ಕೊಳ, ಸರೋವರ, ಸಮುದ್ರ, ಕೆರೆ) ಶಬ್ದಮಾಲಿನ್ಯ ಎಲ್ಲವೂ ನಮ್ಮ ಪರಿಸರಕ್ಕೆ ಅನಪೇಕ್ಷಿತ ಪದಾರ್ಥಗಳನ್ನು ಸೇರ್ಪಡಿಸಿ ಪ್ರಾಣಿಗಳಿಗೆ, ಕೀಟ ಸಂಕುಲ, ಪಕ್ಷಿಸಂಕುಲ, ಸಸ್ಯಗಳು, ಮುಂತಾದ ಎಲ್ಲಾ ಜೀವವೈವಿಧ್ಯಗಳಿಗೆ ಹಾಗೆಯೇ ಮನುಷ್ಯನಿಗೂ ತೊಂದರೆಯುಂಟು ಮಾಡುತ್ತದೆ. ತಾಪಮಾನ ಏರಿಕೆ ಹವಾಮಾನ ಬದಲಾವಣೆಗಳು ಹೀಗೆ ಹತ್ತು ಹಲವಾರು ಅಪಾಯಗಳನ್ನು ಮಾನವನೇ ಈ ಪರಿಸರಕ್ಕೆ ತಂದೊಡ್ಡುತ್ತಿದ್ದಾನೆ ಇವೆಲ್ಲವುದರ ಬಗ್ಗೆ ಹೆಚ್ಚು ಹೆಚ್ಚು ಸಂಶೋಧನೆಗಳಿಂದ ತಿಳಿದು ಕೊಂಡಿದ್ದೂ ಅವನಲ್ಲಿಯೇ ಸೂಕ್ತ ಸೂಕ್ಷ್ಮ ಜೀವನ ಪದ್ಧತಿ ಇಲ್ಲದಿರುವುದು ವಿಪರ್ಯಾಸ. ಕಳೆದ 100 ವರ್ಷಗಳಲ್ಲಿ ಭೂಮಿಯ ತಾಪಮಾನ ಹೆಚ್ಚಾಗಿದೆ. ವಾತಾವರಣದಲ್ಲಿನ ಹಸಿರು ಮನೆ ಅನಿಲಗಳು ಮಾಯವಾಗುತ್ತಿದ್ದು, ಜೀವರಾಶಿ ನಾಶವಾಗುತ್ತಿದೆ. ಮಳೆಕಾಡುಗಳು ಭೂಮಿಯ ಅತ್ಯಮೂಲ್ಯ ಸಂಪತ್ತು. ಭೂಮಿಯ ಜೀವ ಸಂಕುಲ ಶೇ.50 ಹೆಚ್ಚು ಭಾಗ ಮಳೆಕಾಡಿನಲ್ಲಿಯೇ ಹುಟ್ಟಿದೆ. ಬದುಕಿಗೆ ಬೇಕಾದ ಆಮ್ಲಜನಕ ಲಭಿಸುವುದೇ ಮಳೆಕಾಡುಗಳಿಂದ. ಅಪರೂಪದ ಪ್ರಾಣಿ, ಕೀಟ, ಸಸ್ಯಸಂಕುಲಗಳು ಹುಟ್ಟಿರುವುದೂ, ಇರುವುದೂ ಮಳೆಕಾಡುಗಳಲ್ಲಿ. ಇಂತಹ ಅದ್ಭುತ ಮಳೆಗಾಡನ್ನು ಮನುಷ್ಯ ನಾಶಮಾಡಿದ್ದಾನೆ, ನಾಶ ಮಾಡುತ್ತಿದ್ದಾನೆ. ಲಕ್ಷಾಂತರ ವರ್ಷಗಳಿಂದ ಇದ್ದ ವೃಕ್ಷಗಳ ಬಹುಭಾಗ ಈ 20ನೇ ಶತಮಾನದಲ್ಲಿ ಹಾಳಾಗಿದ್ದು, ಸುಮಾರು 50,000 ಜೀವ ಪ್ರಭೇದಗಳು ಅಳಿಯುತ್ತಿವೆ. ಜೀವ ವೈವಿಧ್ಯ ಎಂದರೆ ಭೂಮಿಯಲ್ಲಿನ ವೈವಿಧ್ಯಮಯ ಜೀವರಾಶಿ, ಅದರಲ್ಲಿ ಪ್ರಾಣಿಗಳು, ಪಕ್ಷಿಗಳು, ಕೀಟಗಳು, ಸಸ್ಯಗಳು ಎಲ್ಲವೂ ಸೇರಿವೆ. ಎಲ್ಲಾ ಜೀವಿಗಳೂ ಸರಿಯಾದ ರೀತಿ ಒಂದಾಗಿ ಜೀವನ ನಡೆಸಿದರೆ ಈ ವೈವಿಧ್ಯಕ್ಕೆ ಯಾವುದೇ ತೊಂದರೆಯಿಲ್ಲ.

ಮಾನವನನ್ನು ಹೊರಪಡಿಸಿ ಇತರ ಜೀವ ಸಂಕುಲ ತನ್ನ ಪಕ್ಕೆ ತಾನು ಸಹಜ ರೀತಿಯಲ್ಲಿ ಬದುಕುತ್ತಿದ್ದರೆ, ಇವನು ಮಾತ್ರ ವಿನಾಶದ ರೂವಾರಿಯಾಗಿ ಪರಿಸರಕ್ಕೆ ದೊಡ್ಡ ಸಮಸ್ಯೆಯಾಗಿದ್ದಾನೆ. ಅಳಿವಿನ ಅಂಚನ್ನು ತಲುಪಿರುವ 16,000 ಜೀವರಾಶಿಗಳು ಇತಿಹಾಸ ಸೇರಿಯಾಗಿದೆ. ಇನ್ನಾದರೂ ಮನುಷ್ಯನ ಚಟುವಟಿಕೆಗಳು ಪರಿಸರದ ಜೀವ ಸಂಕುಲವನ್ನು ಉಳಿಸುವತ್ತ ಇರಬೇಕು.

'ಹಸಿರುಕ್ರಾಂತಿ' ಅಂದರೆ ಆಧುನಿಕ ಕೃಷಿ ಪದ್ಧತಿ ಆಹಾರ ಭದ್ರತೆಯನ್ನೇನೋ ಒದಗಿಸಿತು. ಆದರೆ ಅದರ ವೈಪರೀತ್ಯವೆಂದರೆ ಅತಿಯಾದ ರಾಸಾಯನಿಕಗಳ ಬಳಕೆ, ಕೀಟನಾಶಕಗಳು, ಕೃತಕ ವಿಧಾನಗಳು, ಭೂಮಿಯ ಸಹಜ ಫಲವತ್ತತೆಯನ್ನು ಕೆಡಿಸಿ ವೈವಿಧ್ಯಮಯ ಬೆಳೆ ಬೆಳೆಯುವ ಕೃಷಿ ಪದ್ಧತಿ ನಾಶವಾಗಿ ಇಂದು ಒಂದೇ ಬಗೆಯ ಬೆಳೆ ಬೆಳೆಯುವ Monoculture ಕ್ರಮ ಬಂದು, ಮಣ್ಣಿನ ಆರೋಗ್ಯ, ಜೀವ ಸಂಕುಲದ ಆರೋಗ್ಯ, ಹಾಗೆಯೇ ಮಾನವನ ಆರೋಗ್ಯವೂ ಕೆಟ್ಟಮೇಲೆ ಇಂದು ಮತ್ತೆ ನಾವೆಲ್ಲ ನೈಸರ್ಗಿಕ ಕೃಷಿ, ಸಾವಯವ ಕೃಷಿ ಪದ್ಧತಿಯತ್ತ ಚಿತ್ತ ಹರಿಸಬೇಕಾಗಿದೆ. ನಾವು ನಮ್ಮ ಭೂಮಿಯನ್ನು ಹೇಗೆ ಕಾಪಾಡುತ್ತಿದ್ದೇವೆ, ಯಾವ ರೀತಿ ಮಾಲಿನ್ಯಗೊಳಿಸಿದ್ದೇವೆ? ಇದರಿಂದ ನಮ್ಮ ಜನಜೀವನ, ಅಗತ್ಯಗಳ ಜಲ, ಓಜೋನ್ ಪದರ, ನಮ್ಮ ಆಧುನಿಕ ಉದ್ಯಮಗಳು, ಅಭಿವೃದ್ಧಿ, ಹವಾಮಾನದ ಬದಲಾವಣೆಗಳು, ಭೂತಾಪ ಹೆಚ್ಚಳ ಇತ್ಯಾದಿ ಎಲ್ಲ ವಿಷಯಗಳ ಬಗ್ಗೆ ಜನಜಾಗೃತಿ, ಮಕ್ಕಳಲ್ಲೂ ಮೂಡಬೇಕು.

'ಇರುವುದೊಂದೇ ಭೂಮಿ' ಈ ಭೂಮಿಗೆ ಕೋಟಿ ಕೋಟಿ ಪ್ರಭೇದದ ಜೀವ ವೈವಿಧ್ಯದ ಮಕ್ಕಳಿದ್ದಾರೆ. ಅವರಲ್ಲೊಬ್ಬ ಈ ಮನುಷ್ಯ, ಎಲ್ಲರಿಗೂ ಇರುವ ಈ ಭೂಮಿಯನ್ನು ಬರೀ ತನ್ನದು ಎಂಬ ಸ್ವಾರ್ಥದಿಂದ ಕೋಟ್ಯಾಂತರ ಜೀವ ಪ್ರಭೇದಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಈ ಜೀವವೈವಿಧ್ಯದ ಉಳಿವು ಪರಿಸರದ ಉಳಿವು ಎಂದರೆ ನಾವಿಂದು ಅರಿಯಬೇಕಾದ ಸತ್ಯ ನಮ್ಮನ್ನು ನಾವು, ಮುಂದಿನ ಪೀಳಿಗೆಯನ್ನು ಉಳಿಸಿಕೊಳ್ಳಬೇಕಾದ ಕಸರತ್ತು, ಜರೂರತ್ತು! ಮನುಕುಲದ ಕೆಟ್ಟ ಕಥೆಯ ಅನುಭವಿಸುತ್ತಿರುವ ವ್ಯಥೆಯ ಬಗ್ಗೆ ಬರೀ ಪರಿಸರದ ದಿನದಂದು ಮಾತ್ರ ನೆನಪಿಸಿಕೊಂಡರೆ ಸಾಕೆ? ಪರಿಸರವೆಂದರೆ ಜೈವಿಕ ವೈವಿಧ್ಯದ ಅಪೂರ್ವ ಭೂಗ್ರಹ, ನಮ್ಮ ವರ್ತಮಾನ, ಭವಿಷ್ಯದ ಬದುಕು ನಿಂತಿರುವುದು ಈ ಪರಿಸರದ ವೈವಿಧ್ಯದಿಂದಲೇ. ಇದನ್ನು ಉಳಿಸಿದರೆ ನಮ್ಮ ಭವಿಷ್ಯ ಉಳಿದಂತೆ, ಸಹಬಾಳ್ವೆ ನಮ್ಮ ಅನಿವಾರ್ಯವಷ್ಟೇ ಅಲ್ಲ, ನೈತಿಕ ಕರ್ತವ್ಯವೂ ಹೌದು!

ವಾರ ಭವಿಷ್ಯ



5.6.2022 ರಿಂದ 11.06.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ವೃಷಭ, ಚಂದ್ರ–ಕಟಕ, ಸಿಂಹ, ಕನ್ಯಾ, ಕುಜ–ಮೀನ, ಬುಧ–ವೃಷಭ, ಗುರು–ಮೀನ, ಶುಕ್ರ–ಮೇಷ, ಶನಿ(ವ)–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು". ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ, ವಿಳಾಸ : 533, 6ನೇ ಕ್ರಾಸ್, ಬೋಗಾದಿ ಉತ್ತರ 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ. ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಹೊಸ ಆದಾಯ ಮೂಲಗಳು ಗೋಚರವಾಗಲಿದೆ. ಆದಾಯ ಮತ್ತು ಖರ್ಚುಗಳು ಹೆಚ್ಚಾಗುವ ಸಾಧ್ಯತೆ ಇದೆ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರಗಳು ಇತ್ಯರ್ಥವಾಗುವುದರಲ್ಲಿ ವಿಳಂಬವಾಗುವುದು. ನ್ಯಾಯಾಲಯಗಳ ಕೆಲಸಗಳಲ್ಲೂ ಅಲ್ಪ ಪ್ರಗತಿ. ಸರ್ಕಾರಿ ನೌಕರರಿಗೆ ಹೊಸ ಜವಾಬ್ದಾರಿ ಉಂಟಾಗಲಿದೆ. ಅಗ್ನಿ, ವಿದ್ಯುತ್ ಅವಘಡಗಳಿಂದ ಜಾಗೃತರಾಗಿರಿ. ನರ ಸಂಬಂಧಿ ಕಾಯಿಲೆ ಕಾಡಬಹುದು.
– ಶ್ರೀಸುಬ್ರಹ್ಮಣ್ಯ ಪೂಜೆ, ಶುಭಸಂಖ್ಯೆ–6.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಿವಿಧ ಮೂಲಗಳಿಂದ ಧನ ಸಂಚಯ, ಇಷ್ಟ ಬಂಧುಮಿತ್ರರ ಮಿಲನ, ತೀರ ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ಕೇಳಿಸಿಕೊಂಡಿದ್ದಕ್ಕೆಲ್ಲಾ ಮಹತ್ವ ಕೊಡಬೇಡಿ. 'ಜಾಣ ಕಿವುಡು ಬುದ್ಧಿವಂತರ ಲಕ್ಷಣ'. ಶ್ರೀಮತಿಯೊಂದಿಗೆ ಸೋತು ಗೆಲ್ಲುವುದರಿಂದ ಮನೆಯಲ್ಲಿ ಶಾಂತಿಯ ವಾತಾವರಣ ಇರುತ್ತದೆ. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ. ಸಂಚಾರಿ ನಿಯಮಗಳನ್ನು ಪಾಲಿಸಿ
– ಶ್ರೀ ವೆಂಕಟೇಶ್ವರನಿಗೆ ತುಳಸಿ ಮಾಲೆ ಸಮರ್ಪಣೆ, ಶುಭಸಂಖ್ಯೆ–4.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಸ್ವಂತ ಕೆಲಸಗಳಲ್ಲಿ ಉಂಟಾಗಿದ್ದ ಅಡಚಣೆಗಳು ನಿವಾರಣೆ ಆಗುವುದು. ಬೃಹತ್ ಕೈಗಾರಿಕೆ ಆರಂಭಿಸಲು ಗುರುಬಲವಿದೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು–ವರ ನಿಶ್ಚಯವಾದೀತು. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಕಡೆ ಹೆಚ್ಚಿನ ಗಮನ ನೀಡಬೇಕು. ಕೃಷಿಕರಿಗೆ ಉತ್ತಮ ಫಸಲು, ಬೆಲೆ ಎರಡೂ ದೊರೆಯುವುದು. ಪಶು ಸಂಗೋಪನೆ ಮಾಡುತ್ತಿರುವವರಿಗೆ ಹೆಚ್ಚಿನ ಆದಾಯ ದೊರೆಯಲಿದೆ.
– ಶ್ರೀ ಲಲಿತಾ ಸಹಸ್ರನಾಮ ಪಠಿಸಿ, ಶುಭಸಂಖ್ಯೆ–2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)
ಗುರು ಭ್ರಮಣ ಶುಭವಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಆಸ್ತಿ ವಿವಾದಗಳು ಸುಖಾಂತ್ಯವನ್ನು ಹೊಂದಲಿದೆ. ಯುವಕರಿಗೆ ಉನ್ನತ ಅಧ್ಯಯನದಿಂದ ಕೀರ್ತಿ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ದೊರಕುವ ಸಾಧ್ಯತೆ. ವ್ಯಾಪಾರ ಪ್ರಾರಂಭಕ್ಕೆ ಸಾಲದ ಪ್ರಯತ್ನ ಫಲಿಸುವುದು. ಸರ್ಕಾರಿ ಅಧಿಕಾರಿಗಳು ಕಾನೂನು ಬಾಹಿರ ವ್ಯವಹಾರಗಳಿಂದ ತೊಡಕಿಗೆ ಸಿಲುಕುವರು.
– ಶ್ರೀ ಗಣಪತಿ ಉಪಾಸನೆ, ಶುಭಸಂಖ್ಯೆ–1.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವಾರದ ಪೂರ್ವಾರ್ಧದಲ್ಲಿ ಧನ ಸಹಾಯ, ಆರೋಗ್ಯದಲ್ಲಿ ಚೇತರಿಕೆ, ಮಹತ್ತರ ಕೆಲಸಗಳನ್ನು ಸಂಪನ್ನಗೊಳಿಸಿಕೊಳ್ಳಿ. ಆತ್ಮೀಯ ಬಂಧುಗಳ ಭೇಟಿಯಿಂದ ಮನೆಯಲ್ಲಿ ಸಡಗರ. ಲಾಡ್ಜ್, ಹೋಟೆಲ್ ಉದ್ಯಮಿಗಳಿಗೆ ಉತ್ತಮ ವರಮಾನವಾಗುವುದು. ಕಾರ್ಯನಿಮಿತ್ತ ದೂರ ಪ್ರಯಾಣಗಳು ಉಂಟಾಗುವುದು. ವಿದ್ಯಾರ್ಥಿಗಳಿಗೆ ಪರಿಶ್ರಮವಿಲ್ಲದೆ ಫಲವಿಲ್ಲ. ಮನೆಯಲ್ಲಿ ಪಿತೃಸಮಾನ ವ್ಯಕ್ತಿಗೆ ಆರೋಗ್ಯ ಸಮಸ್ಯೆ.
– ಶ್ರೀ ಪಾರ್ವತಿ ದರ್ಶನ, ಶುಭಸಂಖ್ಯೆ–3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಕೆಲಸ ಕಾರ್ಯಗಳ ಬಗ್ಗೆ ವಿಘ್ನಗಳು ಉಂಟಾದರೂ ಎದೆಗುಂದದೆ ಮುಂದುವರೆದು ಯಶಸ್ಸನ್ನು ಸಾಧಿಸಲಿದ್ದೀರಿ. ಕಚೇರಿಯಲ್ಲಿ ಸಹೋದ್ಯೋಗಿಗಳ ಸಹಕಾರದಿಂದ ನೆಮ್ಮದಿ ದೊರಕಲಿದೆ. ಮಹತ್ವದ ಕೆಲಸಗಳು ತ್ವರಿತವಾಗಿ ಸಾಗದು. ಮಾತಿನ ಮೇಲೆ ನಿಯಂತ್ರಣವಿರಿಸಿ. ಅಡ್ಡಮಾತುಗಳು ಮನಸ್ಸಿನ ಶಾಂತಿ ಕೆಡಿಸುವುದು. ಸಣ್ಣ ಕೈಗಾರಿಕೆಯವರಿಗೆ ಮಾರಾಟ ಹೆಚ್ಚಳ. ರಾಜಕಾರಣಿಗಳಿಗೆ ಅಪಪ್ರಚಾರದಿಂದ ಮಾನಸಿಕ ಕಿರಿಕಿರಿ.
–ಶ್ರೀ ದತ್ತಗುರು ದರ್ಶನ. ಶುಭಸಂಖ್ಯೆ–5.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ಈ ಸಪ್ತಾಹದಲ್ಲಿ ನಿಮ್ಮ ರಾಶ್ಯಾಧಿಪತಿ ಚಂದ್ರನ ಕೃಪೆಯಿಂದ ಯಶಃ, ಕೀರ್ತಿ, ಲಾಭಗಳು ನಿಮ್ಮನ್ನು ಅರಸಿ ಬರುವುದು. ಕೈಗೊಂಡ ಮಹತ್ವದ ಕೆಲಸ ಕಾರ್ಯಗಳಲ್ಲಿ ಜಯವನ್ನು ಸಾಧಿಸುವಿರಿ. 'ಮಾತು ಬಲ್ಲವ ಮಾಣಿಕ್ಯ ತಂದ' ಎಂಬಂತೆ ನಿಮ್ಮ ಶುಭವಾಣಿಯಿಂದ ಜಟಿಲ ಸಮಸ್ಯೆಯೊಂದು ಪರಿಹಾರ ಕಾಣುವುದು. ವಿದ್ಯಾ, ಟ್ಯುಟೋರಿಯಲ್ ತರಬೇತಿ ಸಂಸ್ಥೆಗಳು ವಿಶೇಷ ಗೌರವಕ್ಕೆ ಪಾತ್ರವಾಗುವುದು.
– ಶ್ರೀ ಶಾರದಾ ಸ್ತೋತ್ರ ಪಠಿಸಿ, ಶುಭಸಂಖ್ಯೆ–9.

ಮಕರ (ಬೋ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ನಾನಾ ರೀತಿಯಿಂದ ಧನಲಾಭವಾಗುವುದರಿಂದ ಸಪ್ತಾಹಕ್ಕೆ ಸ್ವಾಗತ. ಗಾರ್ಮೆಂಟ್ಸ್ ವರ್ತಕರಿಗೆ ಅಧಿಕ ವ್ಯಾಪಾರದಿಂದ ಅಧಿಕ ಲಾಭ. ವಾಹನ ಖರೀದಿ ಯೋಗವಿದೆ. ಅನಾವಶ್ಯಕ ಸಂಚಾರಗಳಿಗೆ ದೇಹಾಯಾಸ. ವಿದ್ಯಾರ್ಥಿಗಳಿಗೆ ಪರಿಶ್ರಮವಿಲ್ಲದೆ ಪ್ರತಿಫಲವಿಲ್ಲ. ಸರ್ಕಾರಿ ನೌಕರರು ಅಡ್ಡ ದಾರಿಯಲ್ಲಿ ನಡೆದರೆ ಸಂಕಷ್ಟಕ್ಕೆ ಗುರಿಯಾಗುವರು. ಸತಿ–ಸುತರು ಎದುರಾಡುವರು. ಧರ್ಮಕ್ಷೇತ್ರ ಸಂದರ್ಶನದೊಂದಿಗೆ ವಾರಕ್ಕೆ ತೆರೆ.
– ಶ್ರೀಮನ್ನಾರಾಯಣ ಮಂತ್ರ ಜಪಿಸಿ. ಶುಭಸಂಖ್ಯೆ–9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದ ಪ್ರಥಮಾರ್ಧ ಕಾರ್ಯ ಸಫಲತೆ. ಧನ–ಧಾನ್ಯ ಲಾಭ. ಅನೇಕ ರೀತಿಯ ಲೌಕಿಕ ಸುಖಗಳು ನಿಮ್ಮ ಪಾಲಿಗಿದೆ. ನಿಮ್ಮ ಆತ್ಮಶಕ್ತಿಯೇ ನಿಮ್ಮ ಬೆಸ್ಟ್ ಫ್ರೆಂಡ್. ಕುಟುಂಬ ವರ್ಗದಲ್ಲಿ ವೃದ್ಧಿ, ಆಪ್ತೇಷ್ಟರ ಮಿಲನ, ದ್ವಿತೀಯಾರ್ಧಕ್ಕೆ ದೇಹಕ್ಕೆ ಬಾಧೆ ಉಂಟಾಗುವುದು. ತಪ್ಪು ನಿರ್ಧಾರಗಳಿಂದ ಧನ ನಷ್ಟವನ್ನು ಅನುಭವಿಸಬೇಕಾದೀತು. 'ಚತುರತೆಗಿಂತ ವಿಧಿಯಾಟವೇ ಮೇಲು' ಎಂಬಂತೆ ಆಗುವುದು.
– ಶ್ರೀ ಗುರ್ವಾಷ್ಟಕ ಪಠಿಸಿ, ಶುಭಸಂಖ್ಯೆ–7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಗುರು ಕೃಪೆಯಿಂದ ಹಣಕಾಸಿನ ಕೊರತೆಯೇನೂ ಆಗದು. ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನಕ್ಕೆ ಭಾಜನರಾಗುವಿರಿ. ಸ್ಥಿರಾಸ್ತಿ, ನೂತನ ವಾಹನ ಹೊಂದಲು ಬೃಹಸ್ಪತಿಯ ಕೃಪೆ ಇದೆ. ಪುತ್ರ–ಪುತ್ರಿಯರ ಸಾಧನೆಯಿಂದ ಮನಃ ಸಂತೋಷ. ದೀರ್ಘ ಪ್ರಯಾಣಗಳನ್ನು ಮುಂದೂಡಿ. ರಾತ್ರಿ ಪ್ರಯಾಣ ಬೇಡವೇ ಬೇಡ. ಸುಲಿಗೆಕೋರರಿಂದ ಎಚ್ಚರವಿರಿ. ಸಂಧಿವಾತ ಕಾಡಿಸುತ್ತದೆ.
– ಶ್ರೀ ನಂಜುಂಡೇಶ್ವರ ದರ್ಶನ, ಶುಭಸಂಖ್ಯೆ–8.


ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಆರಂಭಕ್ಕೆ ಮಾನಸಿಕ ಒತ್ತಡಗಳು ಕಡಿಮೆ ಆಗುವುದು. ಧನಾತ್ಮಕವಾಗಿ ಚಿಂತಿಸಿದಲ್ಲಿ ಸಾಧನೆಯ ಮಾರ್ಗ ತೆರೆದುಕೊಳ್ಳುವುದು. ಸ್ವ ಸಾಮರ್ಥ್ಯದಿಂದ ಉನ್ನತ ಸ್ಥಾನ ಪ್ರಾಪ್ತಿ ಹಾಗೂ ನಿಮ್ಮ ಗೌರವ ಪ್ರತಿಷ್ಠೆಗಳು ವೃದ್ಧಿಯಾಗಲಿದೆ. ಗೃಹ ನಿರ್ಮಾಣಕ್ಕೆ ನಾಂದಿ ಹೇಳುವ ಸಮಯ ಬಂದಿದೆ. ಕೃಷಿಕರಿಗೆ ಉತ್ತಮ ಬೆಳೆ–ಬೆಲೆ ದೊರೆಯುತ್ತದೆ. ರಾಜಕೀಯದವರಿಗೆ ವಿರೋಧಿಗಳಿಂದ ಉಪಟಳ.
– ಶ್ರೀ ಸತ್ಯನಾರಾಯಣ ಸೇವೆ, ಶುಭಸಂಖ್ಯೆ–8.

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)
ಈ ಸಪ್ತಾಹದಲ್ಲಿ ಹಲವು ಗ್ರಹಗಳ ಕರುಣೆಯಿಂದ ಧನ ಸಂಚಯವಾಗುತ್ತದೆ. ಆದರೆ ಮಾನಸಿಕ ಅಸ್ಥಿರತೆ ನಿವಾರಣೆಯಾಗದು. ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ಕಾರ್ಯಸಿದ್ಧಿ. ಸ್ತ್ರೀಯರು ಫ್ಯಾಶನ್ ವಸ್ತುಗಳಿಗೆ ಧಾರಾಳ ಹಣ ವ್ಯಯಿಸುವರು. ಸತಿ–ಪತಿಯರಲ್ಲಿ ಸಾಮರಸ್ಯದ ಕೊರತೆ. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆ ಕೊರತೆ ಕಾಡಿಸುತ್ತದೆ. ಕೃಷಿಕರಿಗೆ ಸೂಕ್ತ ಬೆಲೆ ದೊರೆಯದೆ ಆತಂಕ.
– ಶ್ರೀ ಗುರು ರಾಯರ ಸೇವೆ, ಶುಭಸಂಖ್ಯೆ–1.

ಮಕ್ಕಳ ಚಿತ್ರ ಕಥೆ

"ಸುಧಾಮ ಉತ್ತರ ನೀಡಿದ್ದು ಹೀಗೆ...!"

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199

1

ಶ್ರೀ ಕೃಷ್ಣ–ಸುಧಾಮ ಒಂದು ದಿನ ವನ ಸಂಚಾರಕ್ಕೆ ಹೋಗಿ ದಾರಿತಪ್ಪಿಸಿಕೊಂಡರು. ಹಸಿವು ಬಾಯಾರಿಕೆಯಿಂದ ಒಂದು ಮರದ ಕೆಳಗೆ ಬಂದು ನಿಂತರು. ಆ ಹಣ್ಣಿನ ಮರದಲ್ಲಿ ಒಂದು ಹಣ್ಣು ನೇತಾಡುತಿತ್ತು. ಕೃಷ್ಣ ಮರವನ್ನು ಹತ್ತಿ ಆ ಹಣ್ಣನ್ನು ಕಿತ್ತುಕೊಂಡ.

2

ಕೃಷ್ಣನು ಆ ಹಣ್ಣುಗಳನ್ನು 6 ತುಂಡುಗಳನ್ನಾಗಿ ಮಾಡಿದನು. ಅಭ್ಯಾಸದ ಪ್ರಕಾರ ಮೊದಲ ತುಂಡನ್ನು ಸುಧಾಮನಿಗೆ ಕೊಟ್ಟನು. ಸುಧಾಮ ಹಣ್ಣನ್ನು ತಿಂದು "ತುಂಬಾ ಸ್ವಾಧಿಷ್ಟಕರವಾಗಿದೆ, ಇಂತಹ ಹಣ್ಣನ್ನು ಎಂದಿಗೂ ಸೇವಿಸಿಲ್ಲ....ದಯವಿಟ್ಟು ಇನ್ನೂ ಒಂದು ತುಣುಕನ್ನು ನೀಡು...!" ಎಂದನು.

3

ಎರಡನೇ ತುಣುಕು ಕೂಡ ಸುಧಾಮನಿಗೆ ಸಿಕ್ಕಿತು. ಹೀಗೆಯೇ ಸುಧಾಮ ಕೃಷ್ಣನನ್ನು ಕೇಳುತ್ತಾ ಹೋದ. ಕೃಷ್ಣ ಕೊಡುತ್ತಲೇ ಇದ್ದ. ಅದೇ ರೀತಿ ಸುಧಾಮ 5 ತುಣುಕುಗಳನ್ನು ಕೇಳುವ ಮೂಲಕ ತಿಂದುಮುಗಿಸಿದ.

4

ಅಷ್ಟಕ್ಕೇ ತೃಪ್ತನಾಗದ ಸುಧಾಮ, ಕೊನೆಯ ತುಣುಕನ್ನೂ ಕೇಳಿದ. ಆಗ ಕೃಷ್ಣನು "ಇದು ಮಿತಿಮೀರಿದೆ... ನಿನ್ನ ಹಾಗೇ ನಾನೂ ಕೂಡ ಹಸಿದಿದ್ದೇನೆ.... ನಾನು ನಿನ್ನನ್ನು ಪ್ರೀತಿಸುತ್ತೇನೆ... ಆದರೆನೀನು ನನ್ನನ್ನು ಪ್ರೀತಿಸುವುದಿಲ್ಲ!" ಎನ್ನುತ್ತಾ ಕೋಪದಿಂದ ಕಡೆಯ ಹಣ್ಣಿನ ತುಂಡನ್ನು ತನ್ನ ಬಾಯಿಯೊಳಗೆ ಹಾಕಿಕೊಂಡ

5

ಹಣ್ಣು ಅತಿಯಾದ ಕಹಿ ಇದ್ದುದರಿಂದ ಹಣ್ಣಿನ ತುಂಡನ್ನು ಕೃಷ್ಣನು ತಕ್ಷಣ ಉಗುಳಿಬಿಟ್ಟ ಕೃಷ್ಣನು ಸುಧಾಮನಿಗೆ "ನಿನಗೆ ಹುಚ್ಚು ಹಿಡಿದಿಲ್ಲಾ ತಾನೆ...? ಇಂತಹ ಕಹಿ ಹಣ್ಣನ್ನು ಹೇಗೆ ತಿಂದೆ...? ಎಂದು ಕೇಳಿದ.

6

ಆಗ ಸುಧಾಮನು, "ಕೃಷ್ಣಾ.... ನಿನ್ನ ಅಮೃತ ಹಸ್ತದಿಂದ ಸಾವಿರಸಲ ತುಂಬಾ ಸಿಹಿ ಹಣ್ಣುಗಳನ್ನು ನಾನು ತಿಂದಿದ್ದೇನೆ.... ಈಗ ಒಂದು ಸಲ ಕಹಿ ಹಣ್ಣನ್ನು ನೀಡಿದಾಕ್ಷಣ ನಾನು ನಿನ್ನನ್ನು ದೂರುವುದು ನ್ಯಾಯವಾ....? ಅದಕ್ಕೇ ನಿನಗೆ ಕಹಿ ಅನುಭವ ಆಗಬಾರದೆಂದೇ ಎಲ್ಲಾ ಹಣ್ಣಿನ ತುಣುಕುಗಳನ್ನು ನಾನೇ ತಿನ್ನಲು ಬಯಸಿದೆ...!" ಎಂದ.

ಮೈಸೂರು ಮಿತ್ರ ಭಾನುವಾರ 5 ಜೂನ್ 2022

ದಸರಾ ಬನ್ನಿಮಂಟಪದಲ್ಲೇ ಹನುಮ ಜಪ

● ಪೊಲೀಸರು, ಜಿಲ್ಲಾಡಳಿತದ ವಿರುದ್ಧ ಕಾರ್ಯಕರ್ತರ ಆಕ್ರೋಶ
● ಮೊಳಗಿದ ಶ್ರೀರಾಮ ತಾರಕ ಮಂತ್ರ, ಹನುಮ ಚಾಲೀಸ್



ಶ್ರೀರಂಗಪಟ್ಟಣ, ಜೂ.4(ವಿನಯ್ ಕಾರೇಕುರ)– ಪಟ್ಟಣದಲ್ಲಿ ಶನಿವಾರ ಭಜರಂಗದಳ, ವಿಶ್ವ ಹಿಂದೂ ಪರಿಷತ್‌ನಿಂದ ಕರೆ ನೀಡಿದ್ದ 'ಮೂಲ ಮಂದಿರ ಚಲೋ' ಜಾಥಾಕ್ಕೆ ಪೊಲೀಸರು ತಡೆಯೊಡ್ಡಿದ ಹಿನ್ನೆಲೆಯಲ್ಲಿ ಕಾರ್ಯಕರ್ತರು ಕಿರಂಗೂರಿನ ದಸರಾ ಬನ್ನಿ ಮಂಟಪದಲ್ಲಿ ಆಂಜನೇಯಸ್ವಾಮಿ ಮೂರ್ತಿ ಪ್ರತಿಷ್ಠಾಪಿಸಿ, ಶ್ರೀರಾಮ ತಾರಕ ಮಂತ್ರ ಮತ್ತು ಹನುಮಾನ್ ಚಾಲೀಸ್ ಪಠಣದೊಂದಿಗೆ ಪೂಜೆ ಸಲ್ಲಿಸಿದರು.

ಅಲ್ಲದೇ ಮಸೀದಿಯತ್ತ ತಮ್ಮನ್ನು ಬಿಡದ ಪೊಲೀಸರು ಮತ್ತು ಜಿಲ್ಲಾಡಳಿತದ ವಿರುದ್ಧ ಸಂಘಟನೆಗಳ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಭಾರತೀಯ ಪುರಾತತ್ವ ಇಲಾಖೆ ಸುಪರ್ದಿಯಲ್ಲಿರುವ ಜಾಮಿಯಾ ಮಸೀದಿಯಲ್ಲಿ ಮದರಸಾ ನಡೆಸಲು, ಮುಸ್ಲಿಮರು ಪ್ರಾರ್ಥನೆ ಸಲ್ಲಿಸಲು ಅವಕಾಶ ಇದೆ. ಅಲ್ಲಿ ಹಿಂದೂಗಳಿಗೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಬಜರಂಗದಳ ಜಿಲ್ಲಾ ಘಟಕದ ಜಿಲ್ಲಾ ಸಂಚಾಲಕ ಹೊಸ ಆನಂದೂರು ಬಸವರಾಜು, ತಾಲೂಕು ಕಾರ್ಯದರ್ಶಿ ಬೆಳಗೊಳ ಸುನೀಲ್ ಆಕ್ರೋಶ ವ್ಯಕ್ತಪಡಿಸಿದರು.

25 ದಿನಗಳ ಗಡುವು: ಇನ್ನು 25 ದಿನಗಳ ಒಳಗಾಗಿ ಜಾಮಿಯಾ ಮಸೀದಿಯ ಒಳಗೆ ನಡೆಯುತ್ತಿರುವ ಮದರಸಾವನ್ನು ತೆರವು ಮಾಡಬೇಕು. ಅಡುಗೆ ಮಾಡಿಕೊಂಡು ಊಟ ಮಾಡುತ್ತಿರುವುದನ್ನು ನಿಷೇಧಿಸಬೇಕು. ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣಾ ಸಂಸ್ಥೆ ಈ ಸ್ಮಾರಕ ಯಾಗಿ ಸೇರಿದ್ದು ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಸಂಘಟನೆಗಳ ಕಾರ್ಯಕರ್ತರು ಒತ್ತಾಯಿಸಿದರು.

ಮಸೀದಿಯ ಮಿನಾರುಗಳ ಕೆಳಗೆ ಇರುವ ಪ್ರಾಂಗಣಕ್ಕೆ ಕಟ್ಟಿರುವ ಗೋಡೆಯನ್ನು ಕೆಡವಿ ಉತ್ಖನನ ನಡೆಸಬೇಕು. ಮಸೀದಿಯಲ್ಲಿನ ಹಿಂದೂ ದೇವರ ಮೂರ್ತಿಗಳನ್ನು ವಿರೂಪಗೊಳಿಸಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗಡುವಿನ ಒಳಗೆ ನಮ್ಮ ಬೇಡಿಕೆ ಈಡೇರದಿದ್ದರೆ ಮಸೀದಿಯನ್ನು ನಮ್ಮ ಸುಪರ್ದಿಗೆ ಪಡೆಯುತ್ತೇವೆ ಎಂದು ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ಸಂಚಾಲಕ ಚಿಕ್ಕಬಳ್ಳಿ ಬಾಲಕೃಷ್ಣ ಎಚ್ಚರಿಕೆ ನೀಡಿದರು.

ಜಿಲ್ಲಾಡಳಿತಕ್ಕೆ ಎಚ್ಚರಿಕೆ: ಅಯೋಧ್ಯೆ ರಾಮ ಮಂದಿರದಂತೆ ಶ್ರೀರಂಗಪಟ್ಟಣದಲ್ಲೂ ಮೂಡಲ ಬಾಗಿಲು ಆಂಜನೇಯಸ್ವಾಮಿ ಮೂಲ ಸ್ಥಳದ ಈ ಹೋರಾಟ ಮುಂದುವರೆಸುತ್ತೇವೆ. ಇದು ಕೇವಲ ಸಾಂಕೇತಿಕ. ಇದನ್ನು ಇಲ್ಲಿಗೆ ನಿಲ್ಲಿಸೋದಿಲ್ಲ. ಮನವಿ ಕೊಟ್ಟು 20 ದಿನಗಳು ಕಳೆದರೂ ಜಿಲ್ಲಾಡಳಿತ ಪ್ರತಿಕ್ರಿಯೆ ನೀಡಿಲ್ಲ. ನಮ್ಮ ಪ್ರತಿಭಟನೆ ಹತ್ತಿಕ್ಕುವ ಕೆಲಸ ಮಾಡಿದ್ದೀರಿ. ಮುಂದೆ ಬೃಹತ್ ಹೋರಾಟ ನಡೆಯಲಿದೆ. ನಮಗೆ ಸಾಯುವ ಭಯ ಇಲ್ಲ. ಮಸೀದಿಗೆ ನುಗ್ಗುವ ತಾಕತ್ತು ನಮ್ಮಲ್ಲೂ ಇದೆ ಎಂದು ಜಿಲ್ಲಾಡಳಿತಕ್ಕೆ ಬಜರಂಗದಳ ಜಿಲ್ಲಾ ಸಂಚಾಲಕ ಹೊಸ ಆನಂದೂರು ಬಸವರಾಜು ಎಚ್ಚರಿಕೆ ನೀಡಿದರು.

ಪುರಾತತ್ವ ಇಲಾಖೆ ಅಧಿಕಾರಿಗೆ ತಾಟಿ: ಈ ವಿವಾದಿತ ಆಸ್ತಿ ಯಾರಿಗೆ ಸೇರಿದ್ದು? ಅದು ವಕ್ಫ್ ಬೋರ್ಡ್‌ಗೆ ಸೇರಿದ ಆಸ್ತಿ ಎನ್ನುತ್ತಿದ್ದಾರೆ. ಅಲ್ಲಿ ಅನಧಿಕೃತ ಮದರಸ ನಡೆಯುತ್ತಿದ್ದರೂ, ನೀವು ಯಾಕೆ ಕ್ರಮ ವಹಿಸಿಲ್ಲ? ನಿಮ್ಮ ಇಲಾಖೆ ವಶದಲ್ಲಿರುವ ಆಸ್ತಿ ಬಗ್ಗೆ ನಿಮಗೇ ಮಾಹಿತಿ ಇಲ್ಲವೆ? ಈ ಬಗ್ಗೆ ಸ್ಥಳದಲ್ಲೇ ಸ್ಪಷ್ಟನೆ ನೀಡುವಂತೆ ಪಟ್ಟು ಹಿಡಿದು ಪುರಾತತ್ವ ಇಲಾಖೆ ಸಂರಕ್ಷಣಾಧಿಕಾರಿ ಶ್ರೀಗುರು ಬಾಗಿ ಅವರನ್ನು ಕಾರ್ಯಕರ್ತರು ತರಾಟೆ ತೆಗೆದುಕೊಂಡರು.

ಇದಕ್ಕೆ ಉತ್ತರಿಸಿದ ಶ್ರೀಗುರು ಬಾಗಿ, ಅದನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ. ದೆಹಲಿಯಿಂದ ವರದಿ ಬಂದ ಬಳಿಕ ಹೇಳುತ್ತೇವೆ. ನೀವು ಹಾಗ್ಲೆ ಕೇಳುವಂತಿಲ್ಲ ಎಂದು ಹಾರಿಕೆ ಉತ್ತರ ನೀಡಿದ ಅಧಿಕಾರಿ ವಿರುದ್ಧ ಕಾರ್ಯಕರ್ತರು ಅಸಮಾಧಾನ ಹೊರ ಹಾಕಿದರು. ವರದಿ ಬರುವವರೆಗೂ ನಮಗೂ ಸಹ ಆ ಸ್ಥಳದಲ್ಲಿ ಪೂಜೆ ಮಾಡಲು ಅವಕಾಶ ಮಾಡಿಕೊಡಿ ಎಂದು ಆಗ್ರಹಿಸಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಉಪವಿಭಾಗಾಧಿಕಾರಿ ಪರಿಸ್ಥಿತಿ ತಿಳಿಗೊಳಿಸಿದರು.

ನಾಲ್ವಡಿ ಪ್ರತಿಮೆಗೆ ಮಾಲಾರ್ಪಣೆ



ಮಂಡ್ಯ, ಜೂ.4– ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಶನಿವಾರ ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರು ಕೃಷ್ಣರಾಜಸಾಗರದಲ್ಲಿರುವ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿದರು. ಈ ವೇಳೆ ಎಸಿ ಬಿ.ಎಸ್.ಶಿವಾನಂದಮೂರ್ತಿ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಸ್ಕೃತಿ, ಪರಂಪರೆ ಪ್ರತೀಕವಾಗಿರುವ ಗುಡಿ ಗೋಪುರ ಉಳಿಸಿ: ಶ್ರೀ ಪೂರ್ಣಾನಂದಪುರಿ ಸ್ವಾಮೀಜಿ



ಕೆ.ಆರ್.ಪೇಟೆ, ಜೂ.4(ಶ್ರೀನಿವಾಸ್)– ನಮ್ಮ ಸಂಸ್ಕೃತಿ, ಪರಂಪರೆಯ ಪ್ರತೀಕವಾಗಿರುವ ಗುಡಿ ಗೋಪುರಗಳನ್ನು ಉಳಿಸುವ ಕೆಲಸ ಮಾಡಬೇಕು. ಜನರು ದ್ವೇಷ, ಅಸೂಯೆ ಬಿಟ್ಟು ಸಾಮರಸ್ಯದಿಂದ ಜೀವನ ನಡೆಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ನೆಲಮಂಗಲದ ಶ್ರೀತೈಲೇಶ್ವರ ಗಾಣಿಗರ ಗುರುಪೀಠದ ಪೀಠಾಧ್ಯಕ್ಷ ಶ್ರೀಪೂರ್ಣಾನಂದಪುರಿ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಬೂಕನಕೆರೆಯಲ್ಲಿ ಶಿವಜ್ಯೋತಿಪಣ ಗಾಣಿಗರ ಸಂಘದಿಂದ ನೂತನವಾಗಿ ನಿರ್ಮಿಸಿರುವ ಶ್ರೀಲಕ್ಷ್ಮೀದೇವಿ ದೇವಾಲಯ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿಗೆ ಮೊದಲು ಬೆಳಕು ಕೊಟ್ಟ ಸಮಾಜ ಗಾಣಿಗ ಸಮಾಜ. ಶುದ್ಧ ಅಡುಗೆ ಎಣ್ಣೆಯನ್ನು ಎತ್ತಿನಗಾಣದಿಂದ ತಯಾರಿಸಿ ಆರೋಗ್ಯವಂತ ಸಮಾಜಕ್ಕೆ ಕಾರಣಕರ್ತರಾದ ಗಾಣಿಗ ಸಮುದಾಯ ಇತ್ತೀಚೆಗೆ ಔದ್ಯೋಗಿಕರಣದ ಕಾರಣ ಕುಲಕಸುಬು ಇಲ್ಲದೆ ತೊಂದರೆಗೆ ಸಿಲುಕಿದೆ. ಹಾಗಾಗಿ ಸರ್ಕಾರವು ಗಾಣಿಗ ಸಮುದಾಯ ಎಣ್ಣೆ ಗಾಣ ಸ್ಥಾಪಿಸಲು ವಿಶೇಷ ಯೋಜನೆ ರೂಪಿಸಬೇಕು. ಜೊತೆಗೆ ಗಾಣಿಗರ ಅಭಿವೃದ್ಧಿ ನಿಗಮ ಸ್ಥಾಪಿಸಿ ಸಮುದಾಯದ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕು ಎಂದರು.

ನಾನು ನನ್ನ ಪೂರ್ವಾಶ್ರಮದಲ್ಲಿ 50 ವರ್ಷಗಳ ಕಾಲ ಗಾಣಿಗ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. 3ಎ ನಲ್ಲಿ ಸೇರಿಕೊಂಡಿದ್ದ ಗಾಣಿಗ ಸಮುದಾಯವನ್ನು 2ಎ ವರ್ಗಕ್ಕೆ ಸೇರಿಸಲು ಮೀಸಲಾತಿ ಆಯೋಗದ ಮುಂದೆ ಸಮುದಾಯದ ಸ್ಥಿತಿಗತಿ ವಾದ ಮಂಡಿಸಿ ಯಶಸ್ವಿಯಾಗಿದ್ದೇನೆ. ಇದರಿಂದ ರಾಜ್ಯದ 40 ಲಕ್ಷ ಗಾಣಿಗ ಸಮುದಾಯ 2ಎ ಮೀಸಲಾತಿಯಡಿ ಶಿಕ್ಷಣ, ಉದ್ಯೋಗ ಪಡೆಯಲು ಸಾಧ್ಯವಾಗಿದೆ ಎಂದರು.

ವಿಜಯಪುರ ದಿಗಂಬರೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಯೋಗಿ ಕಲ್ಲಿನಾಥ ದೇವರು ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಶ್ರೀಲಕ್ಷ್ಮೀದೇವಿ ಗಾಣಿಗರ ಸಂಘದ ಅಧ್ಯಕ್ಷ ಹರೀಶ್ ಅಧ್ಯಕ್ಷತೆ ವಹಿಸಿದ್ದರು. ಪುನೀತ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಸಮಾಜ ಸೇವಕ ವಿಜಯ್ ರಾಮೇಗೌಡ, ತಾಪಂ ಮಾಜಿ ಅಧ್ಯಕ್ಷ ಬಿ.ಜವರಾಯಿಗೌಡ, ಮುಖಂಡರಾದ ಬಿ.ಟಿ.ವೆಂಕಟೇಶ್, ಮೀನಾಕ್ಷಿ, ಬೋಳೇಗೌಡ, ಶ್ಯಾಂ ಪ್ರಸಾದ್, ಬಿ.ಎನ್.ಪುಟ್ಟರಾಜು, ಗಾಣಿಗ ಸಮಾಜದ ರಾಜ್ಯ ಮುಖಂಡರಾದ ವಿಜಯ್‌ಕುಮಾರ್, ವೇಣುಗೋಪಾಲ್, ರಂಗರಾಜು, ತಾಲೂಕು ಅಧ್ಯಕ್ಷ ಮಹೇಶ್, ಗ್ರಾಪಂ ಸದಸ್ಯ ಶ್ರೀನಿವಾಸ್ ಸಜ್ಜನ್, ಶಿವಜ್ಯೋತಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ನಾಗರಾಜು, ಕರ್ನಾಟಕ ಪಬ್ಲಿಕ್ ಶಾಲೆ ಉಪಾಧ್ಯಕ್ಷ ವಾಸುದೇವ್, ಮೈಸೂರು ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷ ಎನ್.ಎಸ್.ಉಮೇಶ್, ಮುಖಂಡರಾದ ದೊಡ್ಡ ಸ್ವಾಮಣ್ಣ, ಶಂಭುಲಿಂಗಶೆಟ್ಟಿ, ಕೆಂಪಶೆಟ್ಟಿ, ಭದ್ರಶೆಟ್ಟಿ, ಲಕ್ಷ್ಮೀಕಾಂತ್, ನಾಗಶೆಟ್ಟಿ, ಆಟೋ ಪ್ರಕಾಶ್, ಬಿ.ಕೆ.ಯೋಗ, ಬಿ.ಆರ್.ರಘು, ಮಂಜು, ಬಿ.ಎಸ್.ಪೂರ್ಣಿಮಾ, ಯುವ ಮುಖಂಡರಾದ ಲೋಹಿತ್, ಸಂತೋಷ್, ಉಮೇಶ್, ಕುಮಾರ್, ಗಿರೀಶ್, ರಘು ಮತ್ತಿತರರಿದ್ದರು.

ಜಾಮಿಯಾ ಮಸೀದಿ ಮಂದಿರವಾಗಿ ಪರಿವರ್ತನೆಯಾಗಲಿ

ಮಂಡ್ಯ, ಜೂ.4(ಮೋಹನ್‌ರಾಜ್)– ಶ್ರೀರಂಗಪಟ್ಟಣದ ಜಾಮಿಯಾ ಮಸೀದಿ ಮಂದಿರವಾಗಿ ಪರಿವರ್ತನೆಯಾಗಬೇಕು. ಅದೇ ಜಾಗದಲ್ಲಿ ಮೂಡಲ ಬಾಗಿಲು ಶ್ರೀಆಂಜನೇಯಸ್ವಾಮಿ ಮತ್ತೆ ನೆಲೆ ನಿಲ್ಲಬೇಕು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂಧನ್ ಪ್ರತಿಪಾದಿಸಿದರು. ಜಾಮಿಯಾ ಮಸೀದಿ ಇರುವ ಜಾಗದಲ್ಲಿ ಹಿಂದೆ ಶ್ರೀ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇಗುಲವಿತ್ತು. ಅದು ಇತಿಹಾಸದ ಸತ್ಯ. ಎಲ್ಲರೂ ಅದನ್ನು ಒಪ್ಪಿಕೊಳ್ಳಬೇಕು. ಟಿಪ್ಪು ಅದನ್ನು ಮಸೀದಿಯಾಗಿ ಪರಿವರ್ತಿಸಿದನೆಂದು ಇತಿಹಾಸಕಾರರೇ ಹೇಳುತ್ತಿದ್ದಾರೆ. ಹಾಗಾಗಿ ಅದನ್ನು ಬಿಟ್ಟುಕೊಡುವಂತೆ ಕೇಳುವುದರಲ್ಲಿ ತಪ್ಪೇನಿದೆ ಎಂದು ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.



ಮೂಲ ಮಂದಿರ ಬಿಟ್ಟುಕೊಡಲು ಜಾಮಿಯಾ ಮಸೀದಿ ತೆರವುಗೊಳಿಸಬೇಕು. ಇಲ್ಲದಿದ್ದರೆ ಕಾನೂನಾತ್ಮಕ ನಡೆ ಅನುಸರಿಸಬೇಕಾಗುತ್ತದೆ. ಕಾನೂನು ಪ್ರಕಾರವೇ ದೇವಾಲಯ ಪಡೆದುಕೊಳ್ಳಲಾಗುವುದು ಎಂದರಲ್ಲದೇ, ಇದೊಂದೇ ಅಲ್ಲ. ಟಿಪ್ಪು ಅರಮನೆ ಹಿಂಭಾಗ ಪ್ರಾಚೀನ ಕಾಲದ ಈಶ್ವರನ ದೇವಸ್ಥಾನವಿತ್ತು. ಅದರ ಗೋಪುರದಿಂದ ಅರಮನೆ ಒಳಭಾಗ ಕಾಣುತ್ತದೆ ಎಂಬ ಕಾರಣಕ್ಕೆ ಆ ಗೋಪುರ ಒಡೆದು ಹಾಕಲಾಯಿತು. ಅದೇ ರೀತಿ ನಿಮಿಷಾಂಬ ದೇವಾಲಯದ ಹಿಂದೆ ಗೋಸೇಗೌಡರ ಗಲ್ಲಿಯಲ್ಲಿದ್ದ ಪುರಾತನ ಕಾಲದ ದೇವಸ್ಥಾನ ಕೆಡವಿ ಉರ್ದು ಶಾಲೆಯನ್ನಾಗಿ ಮಾಡಿಕೊಳ್ಳಲಾಗಿದೆ. ಇಂತಹ ಇತಿಹಾಸದ ಅನೇಕ ಸತ್ಯಗಳನ್ನು ಮರೆಮಾಚಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾಶಿಯ ಜ್ಞಾನವಾಪಿ, ಮಥುರಾ ಸೇರಿದಂತೆ ಒಂದು ಸಾವಿರದಷ್ಟು ದೇವಾಲಯಗಳ ಮೇಲೆ ಮಸೀದಿ ಕಟ್ಟಲಾಗಿದೆ. ಅವೆಲ್ಲವೂ ಹಿಂದೂಗಳಿಗೆ ವಾಪಸ್ ದೊರಕಬೇಕು.

ಜೈನ, ಬೌದ್ಧ ಸೇರಿದಂತೆ ಇತರೆ ಧರ್ಮದ ದೇವಾಲಯಗಳ ವಿಷಯದಲ್ಲಿ ಯಾವುದೇ ಗೊಂದಲಗಳೂ ಇಲ್ಲ. ಮಸೀದಿ ಇರುವ ಜಾಗಗಳಲ್ಲೇ ಅನುಮಾನಗಳು, ದೇಗುಲಗಳಿದ್ದ ಕುರುಹುಗಳು ಕಂಡು ಬರುತ್ತಿವೆ. ವಾಸ್ತವದಲ್ಲಿ ಅವು ಸತ್ಯವಾಗುತ್ತಿವೆ. ಈ ಸತ್ಯವನ್ನು ಒಪ್ಪಿಕೊಂಡು ಪ್ರಾಚೀನ ದೇವಾಲಯಗಳನ್ನು ಹಿಂದೂಗಳಿಗೆ ನೀಡಬೇಕಲ್ಲವೇ? ಈ ಉದಾರತೆ ಮುಸಲ್ಮಾನರಲ್ಲಿ ಬಂದಾಗ ಸಹಬಾಳ್ವೆ, ಸೌಹಾರ್ದತೆ ಸಾಧ್ಯವಾಗುತ್ತದೆ ಎಂದರು. ಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಅನುರಾಧ, ವಿವೇಕ್, ಮಲ್ಲಿಕಾರ್ಜುನ್, ಸುರೇಶ್ ಇದ್ದರು.

ಬೆಂಕಿ ಹಚ್ಚುವ ಸಾಹಿತ್ಯ ಸಮಾಜಕ್ಕೆ ಅನವಶ್ಯಕ



ಮಂಡ್ಯ, ಜೂ.4(ಮೋಹನ್‌ರಾಜ್)– ಪ್ರಸ್ತುತ ದೇಶದಲ್ಲಿ ಧರ್ಮ ಧರ್ಮಗಳ ನಡುವೆ ಸಂಘರ್ಷ ನಡೆಯುತ್ತಿದ್ದು, ಇಂಥ ಸಂದರ್ಭ ಬೆಂಕಿ ಹಚ್ಚುವ ಸಾಹಿತ್ಯ ಸಮಾಜಕ್ಕೆ ಅನವಶ್ಯಕ ಎಂದು ಮೈಸೂರು ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕ ಡಾ.ಸುಧಾಕರ್ ಹೊಸಹಳ್ಳಿ ಅಭಿಪ್ರಾಯಪಟ್ಟರು.

ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ ವತಿಯಿಂದ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ನೇಗಿಲ ಧರ್ಮ ಚಿತ್ರದ ಟೀಸರ್ ಬಿಡುಗಡೆ, ಒಡೆಯರ್, ಮಾಜಿ ಪ್ರಧಾನಿ ದೇವೇಗೌಡ, ರಾಜಮಾತೆ ವಾಣಿ ವಿಲಾಸ ಹಾಗೂ ಪುನೀತ್‌ರಾಜ್ ಕುಮಾರ್ ಪ್ರಶಸ್ತಿ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಸಾಹಿತ್ಯದ ಜೋಡಿ ಸುವಿಕೆ ತೀರಾ ತ್ರಾಸದಾಯಕವಾಗಿದೆ. ಸಾಹಿತ್ಯ ಎತ್ತಕಡೆ ಹೋಗುತ್ತಿದೆ ಎಂಬುದೇ ದೊಡ್ಡ ಸವಾಲಾಗಿದೆ. ಸಾಹಿತ್ಯದ ಮೌಲ್ಯ ಕಳೆದು ಹೋಗುತ್ತಿದ್ದು, ಅದನ್ನು ಉಳಿಸಿಕೊಳ್ಳುವ ಕೆಲಸವಾಗಬೇಕೆಂದರು.

ಬೆಳಕು ಹತ್ತಿಸುವ ಸಾಹಿತ್ಯಕ್ಕಿಂತ ಬೆಂಕಿ ಹತ್ತಿಸುವ ಸಾಹಿತ್ಯಕ್ಕೆ ಮೌಲ್ಯ ಹೆಚ್ಚಾಗಿದೆ. ಸಾಹಿತ್ಯದಲ್ಲಿ ಸ್ವಾಭಿಮಾನ ಹಾಗೂ ಬದ್ಧತೆ ಎರಡೂ ಇರಬೇಕು ಎಂದರು.

ಸಾಮಾಜಿಕ ಹಾಗೂ ಶೈಕ್ಷಣಿಕ ಸಂಘಟನೆ ಹಣ ಸಂಪಾದನೆಗಿಂತಲೂ ಕಷ್ಟ. ಆದರೆ ಸಮಾಜದಲ್ಲಿ ಹಣಕ್ಕಿಂತಲೂ ಸಾಮಾಜಿಕ ಹಾಗೂ ಶೈಕ್ಷಣಿಕ ಸಂಘಟನೆಗೆ ಒತ್ತು ಕೊಡಬೇಕು. ಆಗ ಮಾತ್ರ ಸಮಾಜದ ಶ್ರೇಯೋಭಿವೃದ್ಧಿ ಸಾಧ್ಯ ಎಂದರು.

ಹಿರಿಯ ಸಾಹಿತಿ ಡಾ.ಹೆಚ್.ಎಸ್.ಮುದ್ದೇಗೌಡ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆಗೆ ಸರ್ ಎಂ. ವಿಶ್ವೇಶ್ವರಯ್ಯ ಅವರ ಮಾರ್ಗಗಳೇ ಪ್ರೇರಕ. ಸರ್‌ಎಂವಿ ಅವರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಾಲ್ವಡಿ ಅವರು ತುಂಬಾ ಶ್ರಮ ವಹಿಸಿದರು. ಹಳೇ ಮೈಸೂರು ಭಾಗದ ಅಭಿವೃದ್ಧಿಗೆ ನಾಲ್ವಡಿ ಹಾಗೂ ಸರ್‌ಎಂವಿ ಅವರ ಸಾಧನೆ ಸಾಕ್ಷಿದೆ ಎಂದು ನುಡಿದರು.

ಇದೇ ಸಂದರ್ಭ 'ಮೈಸೂರು ಮಿತ್ರ' ಪತ್ರಿಕೆ ಪಾಂಡವಪುರ ವರದಿಗಾರ ಚಿನಕುರಳಿ ಲೋಕೇಶ್ ಸೇರಿದಂತೆ ಹಲವರಿಗೆ ವಿವಿಧ ಗಣ್ಯರ ಹೆಸರಿನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷ ಡಾ.ಡಿ. ಫ್ರಾನ್ಸಿಸ್ ಕ್ಸೇವಿಯರ್, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತೀಕೆರೆ ಜಯರಾಮ್, ಎ2 ಮ್ಯೂಸಿಕ್ ವ್ಯವಸ್ಥಾಪಕ ಕೃಷ್ಣಪ್ರಸಾದ್, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಬಿ.ಪಿ.ಪ್ರಕಾಶ್, ಕಾರ್ಯಕ್ರಮ ಆಯೋಜಕ ಹಾಗೂ ಸಾಹಿತಿ ಎಸ್.ಕೃಷ್ಣಸ್ವರ್ಣಸಂದ್ರ, ಸಮಾಜ ಸೇವಕರಾದ ಮುದ್ದನಘಟ್ಟ ಮಹಾಲಿಂಗು, ಬಸ್ ಕೃಷ್ಣೇಗೌಡ, ಅಶ್ವಿನ್ ಕುಮಾರ್, ನಟ ಮದನ್‌ಗೌಡ ಸೇರಿದಂತೆ ಇತರರಿದ್ದರು.

ಒಂದನೇ ಪುಟದಿಂದ

ಭಾರತ ವಿಶ್ವಮಾನ್ಯ

27,418 ಕೋಟಿ ರೂ., ಕೃಷಿಗೆ 19,374 ಕೋಟಿ ರೂ., ಕೃಷಿ ಸಮ್ಮಾನ್ ಯೋಜನೆಯಡಿ 47,86,000 ರೈತರಿಗೆ 8,704 ಕೋಟಿ ರೂ., ಪ್ರಧಾನಮಂತ್ರಿ ಕೃಷಿ ಕ್ರೆಡಿಟ್ ಕಾರ್ಡ್ ಯೋಜನೆಯಡಿ 19 ಸಾವಿರ ಕೋಟಿ ರೂ. ನೀಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಗೆ 3,298 ಕಿಲೋಮೀಟರ್‌ಗೆ 50,527 ಕೋಟಿ ರೂ. ಸೇರಿದಂತೆ ವಿವಿಧ ಯೋಜನೆ ಮೂಲಕ ರಾಜ್ಯಕ್ಕೆ ಮೋದಿ 1,29,776 ಲಕ್ಷ ಕೋಟಿ ರೂ. ಅನುದಾನ ನೀಡಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಮಾಹಿತಿ ನೀಡಿದರು.

ಕಾಮಧೇನು ಮೋದಿ: ಪ್ರಧಾನಿ ನರೇಂದ್ರ ಮೋದಿ ರಾಜ್ಯದ ಪಾಲಿಗೆ ಕಾಮಧೇನು ಇದ್ದಂತೆ ಎಂದ ಪ್ರತಾಪ್ ಸಿಂಹ, ಮೈಸೂರು– ಬೆಂಗಳೂರು ಹೆದ್ದಾರಿ ವಿಸ್ತರಣೆ, ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆ, ಮೈಸೂರು– ಮಡಿಕೇರಿ ರಸ್ತೆ ಅಭಿವೃದ್ಧಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗೆ 150 ಕೋಟಿ ಮೊತ್ತದ ಅತ್ಯುನ್ನತ ಅಧ್ಯಯನ ಕೇಂದ್ರ, ಪಾಸ್‌ಪೋರ್ಟ್ ಸೇವಾ ಕೇಂದ್ರ, ನೋಟು ಮುದ್ರಣ ಇಂಕ್ ಉತ್ಪಾದನಾ ಘಟಕ ಸೇರಿದಂತೆ ಸಾಕಷ್ಟು ಯೋಜನೆಗಳನ್ನು ನೀಡಿದ್ದಾರೆ. ಅದರಲ್ಲಿ ಮೈಸೂರು–ಬೆಂಗಳೂರು ನಡುವಿನ ದಶಪಥ ರಸ್ತೆ ನಿರ್ಮಾಣಕ್ಕೆ 9,551 ಕೋಟಿ ರೂ. ನೀಡಿದೆ. ಮೈಸೂರು– ಮಡಿಕೇರಿ ಹೆದ್ದಾರಿ ವಿಸ್ತರಣೆಗೆ 4 ಸಾವಿರ ಕೋಟಿ, ಆತ್ಮನಿರ್ಭರ ಭಾರತ್ ಯೋಜನೆಯಡಿ 10 ಸಾವಿರ ಫಲಾನುಭವಿಗಳಿಗೆ ತಲಾ 10 ಸಾವಿರ ರೂ. ಕೇಂದ್ರದಿಂದ ನೀಡಲಾಗುತ್ತಿದೆ. ನಾವು ಏನನ್ನೂ ಕೇಳದೆ ಎಲ್ಲವನ್ನು ಕೊಡುವ ಕಾಮಧೇನು ಪ್ರಧಾನಿ ಮೋದಿ ಎಂದು ಬಣ್ಣಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಎಲ್. ನಾಗೇಂದ್ರ, ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ, ವಕ್ತಾರ ಎಂ.ವಿ.ಮೋಹನ್, ಮೈಮುಲ್ ನಿರ್ದೇಶಕ ಎಸ್.ಸಿ.ಅಶೋಕ್ ಸೇರಿದಂತೆ ಮೊದಲಾದವರು ಹಾಜರಿದ್ದರು.

ಸಹಕಾರಿ ಕ್ಷೇತ್ರಕ್ಕೆ ಕೇಂದ್ರದಿಂದ ಸಹಕಾರ

ಮೈಸೂರು, ಜೂ.4– ರಾಜ್ಯದಲ್ಲಿ ಸಹಕಾರ ಇಲಾಖೆ ಸ್ವತಂತ್ರವಾಗಿದೆ. ಆದರೆ ಕೆಲವೊಂದು ನಿಯಮಗಳು ಕಠಿಣವಾಗಿರುವುದರಿಂದ ಅದಕ್ಕೆ ತಿದ್ದುಪಡಿ ತಂದು ಸರಳೀಕರಣಗೊಳಿಸುವ ಬಗ್ಗೆ ಕೇಂದ್ರ ಸಹಕಾರ ಸಚಿವರೊಡನೆ ಮಾತನಾಡಿದ್ದೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಕರ್ನಾಟಕದಲ್ಲಿ 5,700 ಸಹಕಾರ ಬ್ಯಾಂಕ್‌ಗಳಿವೆ. ಎಲ್ಲಾ ಬ್ಯಾಂಕ್‌ಗಳಿಗೆ ಒಂದೇ ಸಾಫ್ಟ್‌ವೇರ್ ತರಲಾಗುತ್ತಿದೆ. ಕಳೆದ ಬಾರಿ ಸಹಕಾರ ಬ್ಯಾಂಕ್‌ಗಳಿಂದ 24 ಸಾವಿರ ಕೋಟಿ ರೂ. ಸಾಲ ನೀಡಲಾಗಿತ್ತು. ಈ ಬಾರಿ 25 ಸಾವಿರ ಕೋಟಿ ಸಾಲ ನೀಡಲಾಗಿದೆ. ಸಾಲ ಪಡೆದವರ ಪೈಕಿ 33 ಲಕ್ಷ ಹಳೆ ರೈತರು, 3 ಲಕ್ಷ ಹೊಸ ರೈತರು ಇದ್ದಾರೆ. ಸಹಕಾರ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿ ರೈತರಿಗೆ ಅನುಕೂಲ ಮಾಡಿಕೊಡಲಾಗುವುದು. ಕೃಷಿಕರಿಗೆ ಸುಲಭವಾಗಿ ಸಾಲ ಸಿಗುವಂತೆ ಮಾಡುವುದು ನಮ್ಮ ಉದ್ದೇಶವಾಗಿದೆ ಎಂದರು.

ಮೋದಿಯವರದ್ದೂ ನಾಲ್ವಡಿ ವಿಷನ್!

ಮೈಸೂರಲ್ಲಿ ನೋಟ್ ಮುದ್ರಣಕ್ಕೆ ಬೇಕಾಗುವ ಇಂಕ್ ತಯಾರಿಕಾ ಘಟಕ ಸ್ಥಾಪನೆಗೆ 1600 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಕೇಂದ್ರದ ಪ್ರಸಾದ ಯೋಜನೆಯಡಿ ಮೈಸೂರಿನ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಮೊದಲ ಹಂತದಲ್ಲಿ 50 ಕೋಟಿ ರೂ. ನೀಡಿದ್ದಾರೆ. ಎರಡನೇ ಹಂತದಲ್ಲಿ ಇನ್ನೂ 50 ಕೋಟಿ ರೂ. ನೀಡಲಿದ್ದಾರೆ. ಇದಕ್ಕಾಗಿ ಡಿಪಿಆರ್ ತಯಾರು ಮಾಡಿ ಕಳುಹಿಸಲಾಗುತ್ತದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ದೇಶದಲ್ಲಿ 5 ಕೋಟಿ ವಸತಿಹೀನರಿಗೆ ಮನೆ ನಿರ್ಮಿಸಿ ಕೊಡುತ್ತಿದ್ದಾರೆ. 2023ರ ವೇಳೆಗೆ ದೇಶದ ಎಲ್ಲರಿಗೂ ಮನೆ ಕಲ್ಪಿಸುವ ಗುರಿಯನ್ನು ಅವರು ಹೊಂದಿದ್ದಾರೆ. ಮನೆ ನಿರ್ಮಿಸುವಲ್ಲಿ ಕರ್ನಾಟಕ 4ನೇ ಸ್ಥಾನದಲ್ಲಿದೆ. ಆರೋಗ್ಯ ಕ್ಷೇತ್ರದಲ್ಲಿ ಎಲ್ಲಾ ಬಡಜನರಿಗೂ ಎಲ್ಲಾ ಬಗೆಯ ಔಷಧ ಕಡಿಮೆ ಬೆಲೆಗೆ ಸಿಗಬೇಕೆಂಬ ನಿಟ್ಟಿನಲ್ಲಿ ಜನೌಷಧ ಕೇಂದ್ರ ಸ್ಥಾಪಿಸಿದರು. ಜನೌಷದ ಯೋಜನೆ ಜಾರಿಯಲ್ಲಿ ಕರ್ನಾಟಕ ದೇಶದಲ್ಲಿ 2ನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ 7 ಸಾವಿರ ಜನೌಷಧ ಕೇಂದ್ರಗಳಿವೆ. ಅದರಲ್ಲೂ ಅತೀ ಹೆಚ್ಚು ಜನೌಷಧ ಕೇಂದ್ರ ಇರುವುದು ಮೈಸೂರಲ್ಲೇ ಎನ್ನುವುದು ಹೆಮ್ಮೆಪಡುವ ಸಂಗತಿ. ಕೇಂದ್ರದ ಯೋಜನೆಗಳನ್ನು ಮೈಸೂರಿಗೆ ಅನುಷ್ಠಾನ ಗೊಳಿಸುವ ನಿಟ್ಟಿನಲ್ಲಿ ಸಂಸದ ಪ್ರತಾಪ ಸಿಂಹರ ಶ್ರಮ ಹೆಚ್ಚಾಗಿದೆ ಎಂದು ಹೇಳಿದರು.

ಇಂದು ಗೀತ್ ಗಾತಾ ಚಲ್: ವೈದ್ಯರ ಸಂಗೀತ ರಸಸಂಜೆ ಕಾರ್ಯಕ್ರಮ


ಡಾ.ಉಮೇಶ್ ಕಾಮತ್


ಕುಸುಮಾ ಶೆಣೈ ಮತ್ತು ಡಾ.ಎಂ.ಜಗನ್ನಾಥ್ ಶೆಣೈ


ಡಾ.ಪಿ.ಎ. ಕುಶಾಲಪ್ಪ



ಡಾ. ಕರ್ನಲ್ ಎಂ. ದಯಾನಂದ್



ಶ್ಯಾಮ್ ಚೆರಿಯನ್


ಡಾ. ಎಂ.ಎ. ಶೇಖರ್

ಮೈಸೂರು, ಜೂ 4– ಗೀತ್ ಗಾತಾ ಚಲ್... ವೈದ್ಯರು ಮತ್ತು ಅವರ ಕುಟುಂಬದವರ ಜನಪ್ರಿಯ ಸಂಗೀತ ರಸಸಂಜೆ ಕಾರ್ಯಕ್ರಮವು ಸಾಂಸ್ಕೃತಿಕ ನಗರಿ ಮೈಸೂರಿನ ಸಂಗೀತಪ್ರಿಯರಿಗೆ 20 ವರ್ಷಗಳಿಂದಲೂ ಮನರಂಜನೆ ನೀಡುತ್ತಾ ಬಂದಿದೆ. ಈ ಬಾರಿಯ ಅಂದರೆ 20ನೇ ಆವೃತ್ತಿಯ ಸಂಗೀತ ರಸ ಸಂಜೆ ಕಾರ್ಯಕ್ರಮವನ್ನು ನಾಳೆ (ಜೂ.5) ಹುಣಸೂರು ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕೈಗಾರಿಕೋದ್ಯಮಿ ಡಾ.ಎಂ. ಜಗನ್ನಾಥ್ ಶೆಣೈ ಮತ್ತು ಇಪ್ಪು ವರ್ಷಗಳ ಕಾಲ, ಕಾರ್ಯಕ್ರಮ ಪೋಷಿಸಿ, ಪ್ರಾಯೋಜಿಸುತ್ತಾ ಬಂದಿರುವ ದಾನಿಗಳಾದ ಕುಸುಮಾ ಶೆಣೈ ಅವರು ಸ್ಥಾಪಕ ಪೋಷಕರಾದ ಡಾ.ಸಿ. ಉಮೇಶ್ ಕಾಮತ್ ಅವರೊಂದಿಗೆ ಈ ವೇಳೆ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಕರ್ನಲ್ ಎಂ. ದಯಾನಂದ್ ಭಾಗವಹಿಸುವರು. ಗೌರವ ಅತಿಥಿಗಳಾಗಿ ಚೆವರನ್ ಲ್ಯಾಬೋರೇಟರೀಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ಯಾಮ್ ಚೆರಿಯನ್ ಭಾಗವಹಿಸುವರು. ಇದೇ ವೇಳೆ ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎಂ.ಎ. ಶೇಖರ್ ಅವರನ್ನು ಸನ್ಮಾನಿಸಲಾಗುವುದು.


ಶ್ವೇತಾ


ದೀಕ್ಷಾ

ಡಾ.ಪಿ.ಎ.ಕುಶಾಲಪ್ಪ ಅವರು ಕಾರ್ಯಕ್ರಮದ ಸಂಘಟನಾ ಅಧ್ಯಕ್ಷರಾಗಿದ್ದಾರೆ. ಸೈಯದ್ ಅಫ್ತಾಬ್ ಅಹಮದ್ ಕಾರ್ಯಕ್ರಮ ನಿರೂಪಣೆ ಮಾಡುವರು.


ಸುವರ್ಣ ಯುಗದ ಚಲನಚಿತ್ರಗಳಿಂದ ಇಲ್ಲಿಯವರೆಗಿನ ಜನಪ್ರಿಯ ಮಧುರ ಕನ್ನಡ ಮತ್ತು ಹಿಂದಿ ಚಲನಚಿತ್ರ ಗೀತೆಗಳನ್ನು ಈ ಕೆಳಗಿನ ಗಾಯಕರು ಪ್ರಸ್ತುತಪಡಿಸಿ, ಸಭಿಕರನ್ನು ರಂಜಿಸಲಿದ್ದಾರೆ.


ಡಾ.ಎಂ.ಎಸ್.ನಟಶೇಖರ್, ಡಾ. ಎ.ಎಲ್. ಹೇಮಲತಾ, ಡಾ.ಪಿ.ಎ. ಕುಶಾಲಪ್ಪ, ಡಾ.ಯು. ಗಣೇಶ್ ರಾವ್, ಡಾ. ಯು.ಜಿ. ಶೆಣೈ, ಡಾ. ಶಿವಾನಿ ನಾಯಕ್, ಡಾ. ಸುಷ್ಮಾ ಕೃಷ್ಣಮೂರ್ತಿ, ಡಾ. ಸೀತಾಲಕ್ಷ್ಮಿ ಸೋಮನಾಥ್, ಡಾ. ಶ್ಯಾಮ್ ಪ್ರಸಾದ್, ಅಪೂರ್ವ ನಟಶೇಖರ್, ಡಾ.ಪ್ರೀತಿ ಪ್ರಭು, ರಂಜಿತಾ, ಡಾ.ಜಿ.ಡಿ. ರವಿಕುಮಾರ್, ಸ್ಪರ್ಶ ಶೆಣೈ, ಆರ್.ಎಲ್. ವರ್ಷ, ಡಾ. ಸೋಮನಾಥ್ ವಾಸುದೇವ್, ಡಾ.ಸ್ನೇಹಶ್ರೀ ಮತ್ತು ಪೃಥ್ವಿ ಶಂಕರ್.


ಹೆಚ್ಚಿನ ಆಕರ್ಷಣೆಯಾಗಿ ಶ್ವೇತಾ, ಸ್ಪರ್ಶ ಶೆಣೈ ಮತ್ತು ದೀಕ್ಷಾ ಅವರ ನೃತ್ಯ ಪ್ರದರ್ಶನವಿದೆ. ಕಾರ್ಯಕ್ರಮವು ಸಮಯಕ್ಕೆ ಸರಿಯಾಗಿ ಅಂದರೆ 4.45ಕ್ಕೆ ಆರಂಭವಾಗುವುದರಿಂದ ಪ್ರೇಕ್ಷಕರು ಸಂಜೆ 4.30 ರೊಳಗೆ ಆಸೀನರಾಗಬೇಕೆಂದು ಕೋರಲಾಗಿದೆ. ಪ್ರವೇಶ ಉಚಿತ.


ಡಾ.ನಟಶೇಖರ್


ಡಾ.ಹೇಮಲತಾ


ಡಾ.ಗಣೇಶ್ ರಾವ್


ಡಾ.ಯು.ಜಿ. ಶೆಣೈ


ಡಾ. ಸ್ನೇಹಶ್ರೀ


ಡಾ. ಸುಷ್ಮಾ


ಡಾ. ಸೀತಾಲಕ್ಷ್ಮಿ


ಡಾ. ಸೋಮನಾಥ್


ಅಪೂರ್ವ


ಡಾ.ಪ್ರೀತಿ ಪ್ರಭು


ಸ್ಪರ್ಶ


ಡಾ. ರವಿಕುಮಾರ್


ಆರ್.ಎಲ್.ವರ್ಷ


ಡಾ. ಶ್ಯಾಮ್


ಡಾ.ಶಿವಾನಿ


ರಂಜಿತಾ


ಪೃಥ್ವಿ


ಅಫ್ತಾಬ್

ತಾಲೂಕು ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡ್ತಿದ್ದವರಿಗೆ ಎಕಾನಮಿ ಬಗ್ಗೆ ಏನ್ರೀ ಗೊತ್ತು...

ಸಿದ್ದರಾಮಯ್ಯ ಬಗ್ಗೆ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ

ಮೈಸೂರು, ಜೂ.4(ಎಂಟಿವೈ)–ಬಿಎ, ಎಲ್‌ಎಲ್‌ಬಿ ಮಾಡಿಕೊಂಡು ಯಾವುದೋ ಒಂದು ತಾಲೂಕು ನ್ಯಾಯಾಲಯದಲ್ಲಿ ವಕೀಲಗಿರಿ (ಪ್ರಾಕ್ಟೀಸ್)ಮಾಡಿಕೊಂಡಿದ್ದ ಸಿದ್ದರಾಮಯ್ಯಗೆ ದೇಶದ ಆರ್ಥಿಕತೆ ಬಗ್ಗೆ ಹೇಗೆ ಗೊತ್ತಾಗಬೇಕು? ಎಂದು ಸಂಸದ ಪ್ರತಾಪಸಿಂಹ ವಾಗ್ದಾಳಿ ನಡೆಸಿದ್ದಾರೆ.



ಮೈಸೂರಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಅರ್ಥ ವ್ಯವಸ್ಥೆ ಬಗ್ಗೆ ಸಿದ್ದರಾಮಯ್ಯ ಅವರಿಗೆ ಏನ್ ಗೊತ್ತಿದೆ. ಹದಿಮೂರು ಬಾರಿ ಬಜೆಟ್ ಮಂಡಿಸಿರುವುದಾಗಿ ಹೇಳಿಕೊಳ್ಳುವ ಸಿದ್ದರಾಮಯ್ಯ ಅವರಿಗೆ ತೆರಿಗೆ ವ್ಯವಸ್ಥೆಯ ಕುರಿತು ಕನಿಷ್ಠ ಜ್ಞಾನ ಇಲ್ಲದೆ ಹೀಗೆ ಮಾತನಾಡುತ್ತಿದ್ದಾರೆ. ಕೆಂಗಲ್ ಹನುಮಂತಯ್ಯ ಅವರಿಂದ ಹಿಡಿದು ಜಗದೀಶ್ ಶೆಟ್ಟರ್‌ವರೆಗೆ ಎಲ್ಲಾ ಮುಖ್ಯಮಂತ್ರಿಗಳು ಸಾಲ ಮಾಡಿದ್ದ ಎರಡು ಪಟ್ಟನ್ನು ಸಿದ್ದರಾಮಯ್ಯ ಒಬ್ಬರೇ ಮಾಡಿದ್ದಾರೆ. ತಾಲೂಕು ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡ್ತಿದ್ದವರಿಗೆ ದೇಶದ ಎಕಾನಮಿ ಬಗ್ಗೆ ಏನ್ರೀ ಗೊತ್ತು ಎಂದು ಕಿಡಿಕಾರಿದರು.

ದೇವರಾಜ ಮಾರುಕಟ್ಟೆ ನಿರ್ಮಾಣದ ವಿಚಾರದಲ್ಲಿ ಮಹಾರಾಜರ ಬಗ್ಗೆ ಮಾತನಾಡಿದ್ದರು. ದಲಿತರ ಸಾಲ ಮನ್ನಾ ಮಾಡುತ್ತೇನೆಂದು ಹೇಳಿರುವ ಅವರು ಹೊಲದಲ್ಲಿ ದುಡಿದು ಸಂಪಾದನೆ ಮಾಡಿಕೊಂಡು ತರುತ್ತಾರೆಯೇ? ಈ ರೀತಿ ಅಸಂಬದ್ಧವಾಗಿ ಮಾತನಾಡುವುದನ್ನು ಮೊದಲು ಬಿಡಬೇಕು ಎಂದು ಹೇಳಿದರು.

ಈ ಹಿಂದೆ ತಾವೇ ಮುಖ್ಯಮಂತ್ರಿಯಾಗಿದ್ದಾಗ ಪುಕ್ಕಟ್ಟೆ ಅಕ್ಕಿ ಕೊಟ್ಟಿದ್ದೇನೆಂದು ಹೇಳುವ ಅವರು ದುಡಿದು ತಂದು 1 ರೂಪಾಯಿಗೆ ಅಕ್ಕಿ ಕೊಟ್ಟಿದ್ರಾ. ಕೇಂದ್ರ ಸರ್ಕಾರ 29 ರೂ. ಕಡಿತಗೊಳಿಸಿ 3 ರೂಪಾಯಿಗೆ ಅಕ್ಕಿ ನೀಡಿದರೆ, ಅದರಲ್ಲಿ 2 ರೂಪಾಯಿ ಕಡಿತಗೊಳಿಸಿ 1 ರೂಪಾಯಿಗೆ ಅಕ್ಕಿ ಕೊಟ್ಟೆ, ಉಪ್ಪು ಕೊಟ್ಟೆ,ಎಣ್ಣೆ ಕೊಟ್ಟೆ ಎಂದು ಬೋರ್ಡು ಹಾಕಿಕೊಂಡಿದ್ದ ಸಿದ್ದರಾಮಯ್ಯನವರೇ ಉಳಿಕೆ 29 ರೂಪಾಯಿ ಕೊಟ್ಟಿದ್ದು ಯಾರು? ಕೇಂದ್ರ ಸರ್ಕಾರ, ಅದು ಜನರ ತೆರಿಗೆ ಹಣ ಅಲ್ಲವೇ? ಮೈಸೂರಿನಿಂದ ಆಯ್ಕೆಯಾದ ನೀವು ನೀಡುತ್ತಿರುವ ಹೇಳಿಕೆಯನ್ನು ನೋಡಿದರೆ ನಾಚಿಕೆ ಆಗುತ್ತದೆ ಎಂದರು.

ಪಿರಿಯಾಪಟ್ಟಣ ತಾಲೂಕು ಆರೋಗ್ಯಾಧಿಕಾರಿ ವಿರುದ್ಧ ಕೊಲೆ ಬೆದರಿಕೆ ಆರೋಪ

ಕೋಮಲಾಪುರ ಸರ್ಕಾರಿ ವೈದ್ಯಾಧಿಕಾರಿಯಿಂದ ಕೇಸ್ ದಾಖಲು

ಪಿರಿಯಾಪಟ್ಟಣ, ಜೂ.4– ತಾಲೂಕು ಆರೋಗ್ಯಾಧಿಕಾರಿಗಳು ತಮ್ಮ ಮೇಲೆ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯೊಬ್ಬರು ಪೊಲೀಸರಿಗೆ ತಡವಾಗಿ ದೂರು ಸಲ್ಲಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕು ಆರೋಗ್ಯಾಧಿಕಾರಿ ಡಾ.ಶರತ್ ಬಾಬು ಆರೋಪಕ್ಕೆ ಗುರಿಯಾದವರಾಗಿದ್ದು, ಇವರ ವಿರುದ್ಧ ಪಿರಿಯಾಪಟ್ಟಣ ತಾಲೂಕು ಕೋಮಲಾಪುರ ಸರ್ಕಾರಿ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ವೈ.ವಿ.ಪ್ರಕಾಶ್ ದೂರು ಸಲ್ಲಿಸಿದ್ದಾರೆ.

ವಿವರ: ಕಳೆದ ಮೇ 26 ರಂದು ಮಧ್ಯಾಹ್ನ 1.45ರ ವೇಳೆಯಲ್ಲಿ ಕೋಮಲಾಪುರ ಗ್ರಾಮದ ಶಿವಣ್ಣ ಎಂಬುವರು ಅಪಘಾತದಿಂದ ಗಾಯಗೊಂಡು ಆಸ್ಪತ್ರೆಗೆ ಬಂದಿದ್ದರು. ನಾನು ಅವರಿಗೆ ಓಡಿಪಿ ವಿಭಾಗದಲ್ಲಿ ಚಿಕಿತ್ಸೆ ನೀಡುತ್ತಿದ್ದಾಗ ತಾಲೂಕು ಆಡಳಿತಾಧಿಕಾರಿ ಡಾ.ಶರತ್ ಬಾಬು ಆಸ್ಪತ್ರೆಗೆ ಬಂದಿದ್ದು, ನಾನು ರೋಗಿಗೆ ಚಿಕಿತ್ಸೆ ನೀಡುತ್ತಿದ್ದ ಕಾರಣ ಅವರನ್ನು ಸ್ವಾಗತಿಸಲು ಸಾಧ್ಯವಾಗಲಿಲ್ಲ ಎಂದು ದೂರಿನಲ್ಲಿ ಡಾ.ಪ್ರಕಾಶ್ ತಿಳಿಸಿದ್ದಾರೆ.

ತನ್ನನ್ನು ಸ್ವಾಗತಿಸಲಿಲ್ಲ ಎಂಬ ಕಾರಣಕ್ಕಾಗಿ ತಾಲೂಕು ಆರೋಗ್ಯಾಧಿಕಾರಿಗಳು ತನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ನಡೆಸಿದ್ದಾರೆ. ಈ ವೇಳೆ ಕೋಮಲಾಪುರ ಗ್ರಾಮದ ಪಟೇಲ್ ನಾಗೇಶ್ ಎಂಬುವರು ತನ್ನನ್ನು ರಕ್ಷಿಸಿದ್ದು, ಆಸ್ಪತ್ರೆಯಿಂದ ಹೊರ ಹೋಗುವಾಗ ಡಾ.ಶರತ್ ಬಾಬು ನನಗೆ ಕೊಲೆ ಬೆದರಿಕೆ ಹಾಕಿದ್ದಾರೆ. ಅವರ ಹಲ್ಲೆಯಿಂದ ಗಾಯಗೊಂಡಿದ್ದ ನಾನು ಆಸ್ಪತ್ರೆಯ ಸ್ಟಾಫ್ ನರ್ಸ್ ಸುಮಿತ್ರಾ ಅವರ ಸಹಾಯದಿಂದ ಸ್ವಯಂ ಚಿಕಿತ್ಸೆ ಮಾಡಿಕೊಂಡಿದ್ದೇನೆ. ಮೇಲಧಿಕಾರಿಗಳಿಗೆ ಮಾಹಿತಿ ನೀಡಿ, ತಡವಾಗಿ ದೂರು ಸಲ್ಲಿಸುತ್ತಿದ್ದೇನೆ ಎಂದು ಡಾ.ಪ್ರಕಾಶ್ ನೀಡಿದ ದೂರನ್ನು ಭಾರತೀಯ ದಂಡ ಸಂಹಿತೆ 504, 341, 323, 506 ರಡಿ ದಾಖಲಿಸಿಕೊಂಡಿರುವ ಪಿರಿಯಾಪಟ್ಟಣ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ

ಕುಂಭಾಭಿಷೇಕ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ







ಚಾಮರಾಜನಗರ, ಜೂ. 4(ಎಸ್‌ಎಸ್)– ನಗರದ ಐತಿಹಾಸಿಕ ಚಾಮರಾಜೇಶ್ವರ ಸ್ವಾಮಿ ದೇವಾಲಯದಲ್ಲಿ ರಾಜಗೋಪುರ, ವಿಮಾನ ಗೋಪುರ ಕಳಶ, ಕುಂಭಾಭಿಷೇಕ ಮಹೋತ್ಸವಕ್ಕೆ ಶನಿವಾರ ರಾತ್ರಿ ವಿವಿಧ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ವಿಧ್ಯುಕ್ತ ಚಾಲನೆ ದೊರೆಯಿತು.

ನಂಜನಗೂಡಿನ ಶ್ರೀಕಂಠಸ್ವಾಮಿ ದೇವಸ್ಥಾನದ ಆಗಮಿಕ ಜೆ.ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ 25ಕ್ಕೂ ಹೆಚ್ಚು ವೈದಿಕರು ಪೂಜಾ ವಿಧಿ–ವಿಧಾನ ಆರಂಭಿಸಿದರು.

ಸಂಜೆ ನಗರದ ಕೊಳದ ಬೀದಿಯಲ್ಲಿರುವ ಕನ್ನಿಕಾಪರಮೇಶ್ವರಿ ದೇವಾಲಯದ ಬಳಿಯಿಂದ ವೈದಿಕರನ್ನು ಮೆರವಣಿಗೆಯ ಮೂಲಕ ದೇವಾಲಯಕ್ಕೆ ಕರೆತರಲಾಯಿತು.

ಬಳಿಕ ಪಂಚಮಿ ಪುಷ್ಯ ನಕ್ಷತ್ರ ಸಂಜೆ 5.30ಕ್ಕೆ ದೀಪಬೆಳಗಿಸಿ ಮೂಲ ದೇವತಾ ಪ್ರಾರ್ಥನೆ ಮಾಡಿ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ನಂತರದಲ್ಲಿ ಗಣಪತಿ ಪೂಜೆ, ಪುಣ್ಯಾಹ, ಪಂಚಗವ್ಯ, ಋತ್ವಿಕ್ ವರುಣ ರಾಕ್ಷೋಘ್ನ ಪೂಜಾ ಹೋಮ ಮತ್ತು ವಾಸ್ತು ಪೂಜೆ ಹೋಮ, ಪರಿಯುಘ್ನಕರಣ, ಅಂಕುರಾರ್ಪಣೆ ನಡೆಯಿತು.

ದೇವಾಲಯದಲ್ಲಿ ಮೂರು ದಿನಗಳ ಕಾಲ ಶ್ರೀಚಂಡಿಕೇಶ್ವರಸ್ವಾಮಿ ವಿಗ್ರಹ ಮತ್ತು ಭಕ್ತ ವಿಗ್ರಹಗಳ ಪ್ರತಿಷ್ಠೆ, ಕುಂಭಾಭಿಷೇಕ ಮಹೋತ್ಸವ ಹಾಗೂ ನೂತನ ರಥ ಪ್ರತಿಷ್ಠೆ ಕಾರ್ಯಕ್ರಮಗಳು ಜರುಗಲಿವೆ.

ಭಾನುವಾರ (ಜೂ.5) ಬೆಳಗ್ಗೆ 8.30ಕ್ಕೆ ಗಂಟೆಗೆ ಬಿಂಬಶುದ್ಧಿ, ನೂತನ ವಿಗ್ರಹಗಳ ನೇತ್ರೋನ್ಮಿಲನ, ಜಲಾಧಿವಾಸ, ಕಳಶ ಸ್ಥಾಪನೆ, ಅಗ್ನಿ ಪ್ರತಿಷ್ಠಾಪನೆ, ಮೂಲ ಮಂತ್ರ ಹೋಮ, ನಡೆಯಲಿದೆ. ರಾತ್ರಿ ಧಾನ್ಯಾಧಿವಾಸ, ಶಯ್ಯಾದಿವಾಸ ಅಧಿವಾಸ ಹೋಮಗಳು, ಸ್ಪರ್ಶ ಹೋಮ, ಪೂರ್ವಕ, ಅಷ್ಟಬಂಧನ ಜರುಗಲಿವೆ. ಪೂಜಾ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಬಸವರಾಜು, ದೇವಾಲಯದ ಆಡಳಿತಾಧಿಕಾರಿ ರಾಜಣ್ಣ, ಎಲ್ಲಾ ಸಮುದಾಯದ ಮುಖಂಡರಿದ್ದರು.

ವಿಶೇಷ ಅಲಂಕಾರ: ಕುಂಭಾಭಿಷೇಕದ ಅಂಗವಾಗಿ ದೇವಾಲಯಕ್ಕೆ ವಿಶೇಷ ಅಲಂಕಾರ ಮಾಡಲಾಗಿದ್ದು, ವಿದ್ಯುತ್ ದೀಪಗಳು ಹಾಗೂ ತಳಿರು ತೋರಣಗಳಿಂದ ಕಂಗೊಳಿಸುತ್ತಿದೆ.

ಚಾಮುಲ್ ಚುನಾವಣೆ; ಬಿಜೆಪಿ ಬೆಂಬಲಿತರ ಪಟ್ಟಿ ಬಿಡುಗಡೆ

ಇಂದು ಹನೂರು ತಾಲೂಕು, ಮಹಿಳಾ ಕ್ಷೇತ್ರಕ್ಕೆ ಅಭ್ಯರ್ಥಿ ಆಯ್ಕೆ

ಚಾಮುಲ್ ನಿರ್ದೇಶಕ ಸ್ಥಾನಕ್ಕೆ ತಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಚಸಲು ಭಾರೀ ಪೈಪೋಟಿ ಎದುರಾಗಿದೆ. ಪಕ್ಷದ ಅನೇಕ ಮುಖಂಡರು ಈಗಾಗಲೇ ನಾಮಪತ್ರ ಸಲ್ಲಿಸಿದ್ದಾರೆ. ಅವರ ಮನವೊಲಿಸುವ ಕೆಲಸ ನಡೆಯುತ್ತಿದೆ.

–ಆರ್.ಸುಂದರ್,
ಚಾ.ನಗರ ಬಿಜೆಪಿ ಜಿಲ್ಲಾ ಅಧ್ಯಕ್ಷ.

ಚಾಮರಾಜನಗರ, ಜೂ.4(ಎಸ್‌ಎಸ್)– ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ(ಚಾಮುಲ್) ಆಡಳಿತ ಮಂಡಳಿಯ 9 ನಿರ್ದೇಶಕ ಸಾನಕ್ಕೆ ಜೂ.14ರಂದು ಚುನಾವಣೆ ನಡೆಯಲಿದ್ದು, ಬಿಜೆಪಿ ತನ್ನ ಬೆಂಬಲಿತ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಚಾಮರಾಜನರ ತಾಲೂಕಿನ 2 ಸ್ಥಾನ ಗಳಿಗೆ ತನ್ನ ಪಕ್ಷದ ಬೆಂಬಲಿತ ಅಭ್ಯರ್ಥಿಗಳಾದ ವಿ.ಸಿ.ಹೊಸೂರು ಗ್ರಾಮದ ಮೈಸೂರು ಮಾಜಿ ನಿರ್ದೇಶಕ ಹೆಚ್.ಎಸ್.ಬಸವರಾಜು ಹಾಗೂ ಚಾಮುಲ್ ಹಾಲಿ ನಿರ್ದೇಶಕ ಕಿಲಗೆರೆ ಕೆ.ಆರ್.ಬಸವರಾಜು ಅವರನ್ನು ಕಣಕ್ಕೆ ಇಳಿಸಿದೆ. ಇವರಿಬ್ಬರೂ ಈಗಾಗಲೇ ನಾಮಪತ್ರ ಸಲ್ಲಿಸಲಾಗಿದೆ.

ಚಾಮುಲ್ ಹಾಲಿ ನಿರ್ದೇಶಕ ಮಲೆಯೂರು ರವಿಶಂಕರ್, ಬಿಜೆಪಿ ಮುಖಂಡರಾಗಿರುವ ಕೋಡಿಮೋಳೆ ರಾಜಶೇಖರ್ ಹಾಗೂ ತಾಪಂ ಮಾಜಿ ಸದಸ್ಯ ಕೆ.ಎಲ್.ರವಿಕುಮಾರ್ ಅವರೂ ಸಹ ಈಗಾಗಲೇ ಉಮೇದುವಾರಿಕೆ ಸಲ್ಲಿಸಿದ್ದಾರೆ. ಸದ್ಯ ಬಿಜೆಪಿ ತನ್ನ ಬೆಂಬಲಿತರ ಪಟ್ಟಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿರು ಮೂಲಕ ನಿರ್ಧಾರ ಕುತೂಹಲ ಕೆರಳಿಸಿದೆ. ಗುಂಡ್ಲುಪೇಟೆ ತಾಲೂಕಿನ 2 ಕ್ಷೇತ್ರ ಗಳಿಗೆ ಬಿಜೆಪಿಯಿಂದ ಡಿ.ಮಾದಪ್ಪ ಉ॥ಸ್ವಾಮಿ ಹಾಗೂ ಎಂ.ಸುಜೇಂದ್ರ ಅವರಿಗೆ ತಮ್ಮ ಬೆಂಬಲ ಎಂದು ಘೋಷಿಸಿದೆ. ಕೊಳ್ಳೇಗಲ ತಾಲೂಕಿನ 1 ಕ್ಷೇತ್ರಕ್ಕೆ ಎಂ.ಪುಟ್ಟಣ್ಣ, ಯಳಂದೂರು ತಾಲೂಕಿನ 1 ಕ್ಷೇತ್ರಕ್ಕೆ ವೈ.ಸಿ.ನಾಗೇಂದ್ರ ಅವನನ್ನು ಬೆಂಬಲಿಸಿ ಬಿಜೆಪಿ ಕಣಕ್ಕೆ ಇಳಿಸಿದೆ. ಇನ್ನು ಹನೂರು ತಾಲೂಕಿನ 2 ಕ್ಷೇತ್ರಕ್ಕೆ ಹಾಗೂ ಜಿಲ್ಲೆಯ ಎಲ್ಲಾ ಮಹಿಳಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಕ್ಷೇತ್ರಕ್ಕೆ ತನ್ನ ಬೆಂಬಲಿತ ಅಭ್ಯರ್ಥಿಯನ್ನು ನಾಳೆ (ಭಾನುವಾರ) ಪ್ರಕಟಿಸುವುದಾಗಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಅಧ್ಯಕ್ಷ ಆರ್.ಸುಂದರ 'ಮೈಸೂರುಮಿತ್ರ'ನಿಗೆ ತಿಳಿಸಿದ್ದಾರೆ. ಜೂ.6ರಂದು ನಾಮಪತ್ರ ಸಲ್ಲಿಸಲು ಕೊನೆ ದಿನವಾಗಿದೆ. ನಾಳೆ(ಭಾನುವಾರ) ಸರ್ಕಾರಿ ರಜೆ ಇರುವ ಕಾರಣ ನಾಮಪತ್ರ ಸಲ್ಲಿಸಲು ಸೋಮವಾರವೇ ಕಡೇ ದಿನವಾಗಿದೆ.

ಚಾಮುಲ್ ಬಿಜೆಪಿ ಬೆಂಬಲಿತ ಪರ ಶಾಸಕ ಸಿ.ಎಸ್.ನಿರಂಜನಕುಮಾರ್ ಮತಯಾಚನೆ



ಗುಂಡ್ಲುಪೇಟೆ, ಜೂ.4(ಸೋಮ್.ಜಿ)–ಇದೇ ತಿಂಗಳ 14ರಂದು ನಡೆಯಲಿರುವ ಚಾಮರಾಜನಗರ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಚುನಾವಣೆಗೆ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳ ಪರವಾಗಿ ಶಾಸಕ ಸಿ.ಎಸ್.ನಿರಂಜನಕುಮಾರ್ ಬಿರುಸಿನ ಪ್ರಚಾರ ಕೈಗೊಂಡರು. ತಾಲೂಕಿನ ಯಡವನಹಳ್ಳಿ, ಅರೇಪುರ, ಸೋಮಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಹಾಲು ಉತ್ಪಾದಕ ಪ್ರತಿನಿಧಿಗಳನ್ನು ಭೇಟಿಯಾಗಿ ಮತಯಾಚಿಸಿದರು.

ರೈತರ ಬಗ್ಗೆ ಕಾಳಜಿ ಹೊಂದಿರುವ ಬಿಜೆಪಿ ಸರ್ಕಾರವು ಅನೇಕ ಕಾರ್ಯಕ್ರಮವನ್ನು ಅವರಿಗಾಗಿ ಜಾರಿಗೊಳಿಸಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಅಭ್ಯರ್ಥಿಗಳಿಗೆ ಮತ ನೀಡಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು.

ಈ ವೇಳೆ ಅಭ್ಯರ್ಥಿಗಳಾದ ಸ್ವಾಮಿ, ಸುಜೇಂದ್ರ ಸೇರಿದಂತೆ ಮುಖಂಡರಾದ ನಾಗರಾಜಪ್ಪ, ರವಿ, ಪ್ರಣಾಯ್, ಜಗದೀಶ್, ಕೆ.ಆರ್.ಲೋಕೇಶ್, ಮಹೇಶ್, ಮಲ್ಲಿಕಾರ್ಜುನಸ್ವಾಮಿ, ಮಂಜು, ಕೃಷ್ಣ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿದ್ದರು.

ಕೊಳ್ಳೇಗಾಲದಲ್ಲಿ ನ್ಯಾಯಾಧೀಶರಿಂದ ತಾಲೂಕು ಆಸ್ಪತ್ರೆ ಪರಿಶೀಲನೆ

ಚಾಮರಾಜನಗರ, ಜೂ.4– ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಎಂ.ಶ್ರೀಧರ ಅವರು ಕೊಳ್ಳೇಗಾಲ ತಾಲೂಕಿನ ಸರ್ಕಾರಿ ಆಸ್ಪತ್ರೆಗೆ ಇಂದು ದಿಢೀರ್ ಭೇಟಿ ನೀಡಿ, ಪರಿಶೀಲಿಸಿದರು.

ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳಿಗೆ ದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಪರಿಶೀಲಿಸಿದರು. ಒಳ ಮತ್ತು ಹೊರರೋಗಿಗಳಿಗೆ ವೈದ್ಯಕೀಯ ಚಿಕಿತ್ಸೆ ಹಾಗೂ ಔಷಧಿಗಳನ್ನು ನೀಡುತ್ತಿರುವ ಬಗ್ಗೆ ವ್ಯಾಪಕವಾಗಿ ವೀಕ್ಷಿಸಿದರಲ್ಲದೆ, ಪೌಷ್ಟಿಕ ಆಹಾರವನ್ನು ಸಕಾಲದಲ್ಲಿ ನೀಡುವಂತೆ ಸೂಚಿಸಿದರು.



ಆಸ್ಪತ್ರೆಯ ಎಲ್ಲಾ ವಾರ್ಡ್‌ಗಳಿಗೂ ಭೇಟಿ ನೀಡಿ, ನೈರ್ಮಲ್ಯ ನಿರ್ವಹಣೆ ಕುರಿತು ಪರಿಶೀಲಿಸಿ, ರೋಗಿಗಳಿಂದ ಕುಂದು –ಕೊರತೆಗಳ ಬಗ್ಗೆ ಮಾಹಿತಿ ಪಡೆದರು. ಆಸ್ಪತ್ರೆಯ ವೈದ್ಯಾಧಿಕಾರಿಗಳು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ ಎಂದು ರೋಗಿಗಳು ತಿಳಿಸಿದರು.

ಹಿರಿಯ ನಾಗರಿಕರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ತುರ್ತು ಸಂದರ್ಭಗಳಲ್ಲಿ ಮಾನವೀಯತೆಯಿಂದ ಶೀಘ್ರವಾಗಿ ಸ್ಪಂದಿಸಬೇಕು. ಆಸ್ಪತ್ರೆಗೆ ಬರುವ ಸಾರ್ವಜನಿಕರನ್ನು ಸಹನೆ, ಮಾನವೀಯತೆ ದೃಷ್ಟಿಯಿಂದ ಕಂಡು ಕೂಡಲೇ ಚಿಕಿತ್ಸಾ ಕ್ರಮಗಳಿಗೆ ಮುಂದಾಗಬೇಕು ಎಂದು ನ್ಯಾಯಾಧೀಶರು ಸಲಹೆ ನೀಡಿದರು.

ಚಿಕಿತ್ಸೆ ಪಡೆಯಲು ಬರುವ ಸಾರ್ವಜನಿಕರಿಗೆ ಹಾಗೂ ರೋಗಿಗಳಿಗೆ ಕಾನೂನಿನ ಸಲಹೆ ಮತ್ತು ನೆರವು ಅಗತ್ಯವಿದ್ದಲ್ಲಿ ತಾಲೂಕು ಮಟ್ಟದಲ್ಲಿರುವ ತಾಲೂಕು ಕಾನೂನು ಸೇವಾ ಸಮಿತಿ ಅಥವಾ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಬಹುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ ಅವರು ಇದೇ ವೇಳೆ ತಿಳಿಸಿದರು. ಆಸ್ಪತ್ರೆಯ ವೈದ್ಯರಾದ ಡಾ.ರಾಜಶೇಖರ, ಡಾ.ಪ್ರಮುಲ್ಲಾದೇವಿ, ರಾಜು, ಬಸವರಾಜು, ಚೇತನ, ವೇಣುಗೋಪಾಲ್, ಕಾವ್ಯ, ರವೀಂದ್ರ, ನಿಕೇತನ್ ಹಾಗೂ ಆಸ್ಪತ್ರೆ ಫಾರ್ಮಸಿಸ್ಟ್ ಅಭಿಜಿತ್ ಹಾಜರಿದ್ದರು.

ಪ್ರತ್ಯೇಕ ಅಪಘಾತ; ಇಬ್ಬರು ಸಾವು

ಚಾಮರಾಜನಗರ, ಜೂ.4(ಎಸ್‌ಎಸ್)– ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿರುವ ಘಟನೆ ಚಾಮರಾಜನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ತಾಲೂಕಿನ ವೆಂಕಟಯ್ಯನ ಛತ್ರದ ಗೇಟ್ ಬಳಿ ಅಪರಿಚಿತ ಕಾರು ಡಿಕ್ಕಿ ಹೊಡೆದು ವೆಂಕಟಯ್ಯನ ಛತ್ರ ಗ್ರಾಮದ ಮಹೇಶ್(25) ಸಾವನ್ನಪ್ಪಿದ್ದಾರೆ. ಚಾಮರಾಜನಗರದಿಂದ ತಮಿಳುನಾಡು ಕಡೆಗೆ ಹೋಗುತ್ತಿದ್ದ ಕಾರು ವೆಂಕಟಯ್ಯನ ಛತ್ರದ ಗೇಟ್ ಬಳಿ ನಡೆದುಕೊಂಡು ಹೋಗುತ್ತಿದ್ದ ಮಹೇಶ್‌ಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಇದರಿಂದ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದ ಬಳಿಕ ಕಾರು ಚಾಲಕ ಕಾರನ್ನು ನಿಲ್ಲಿಸದೆ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ರಸ್ತೆತಡೆ: ಘಟನೆಯನ್ನು ಖಂಡಿಸಿ ಸ್ಥಳೀಯರು ವೆಂಕಟಯ್ಯನಛತ್ರ ಗೇಟ್ ಬಳಿ ರಸ್ತೆತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕೆಲ ಕಾಲ ರಸ್ತೆ ಸಂಚಾರ ಅಸ್ತವ್ಯಸ್ತವಾಯಿತು. ವಿಷಯ ತಿಳಿದು ಸಂಚಾರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ನಂದೀಶ್‌ಕುಮಾರ್, ಇನ್ಸ್‌ಪೆಕ್ಟರ್ ತಿಮ್ಮರಾಜು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ತಿಳಿ ಗೊಳಿಸಿದರು.

ಬೈಕ್ ಸವಾರ ಸಾವು: ಮತ್ತೊಂದು ಪ್ರಕರಣದಲ್ಲಿ ಬೈಕ್‌ಗೆ ಅಡ್ಡ ಬಂದ ನಾಯಿಗೆ ಡಿಕ್ಕಿ ಹೊಡೆದ ಪರಿಣಾಮ ಆಯತಪ್ಪಿ ಬಿದ್ದು ಸವಾರ ಸಾವನ್ನಪ್ಪಿದ್ದಾರೆ. ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ನಿವಾಸಿ ಶಿವಮಲ್ಲು ಮೃತಪಟ್ಟವರು. ಇವರು ತಮ್ಮ ಬೈಕ್‌ನಲ್ಲಿ ಚಾಮರಾಜನಗರದಿಂದ ಸ್ವಗ್ರಾಮ ಹೆಡತಲೆಗೆ ತೆರಳುತ್ತಿದ್ದಾಗ ಬದನಗುಪ್ಪೆ ಬಳಿ ನಾಯಿ ಅಡ್ಡ ಬಂದಿದೆ. ನಿಯಂತ್ರಣ ತಪ್ಪಿದ ಬೈಕ್ ನಾಯಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಘಟನೆ ಸಂಭವಿಸಿದೆ. ಮೃತದೇಹವನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿದೆ. ಅಪಘಾತದಿಂದ ನಾಯಿಯೂ ಸಾವನ್ನಪ್ಪಿದೆ. ಈ ಅಪಘಾತಗಳ ಸಂಬಂಧ ಚಾಮರಾಜನಗರ ಸಂಚಾರಿ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದೆ.

ಕೊನೆ ಕ್ಷಣದಲ್ಲಿ ಮದುವೆಗೆ ನಿರಾಕರಿಸಿದ ವಧು, ಬೇರೊಬ್ಬ ಯುವತಿಯ ಕೈಹಿಡಿದ ವರ

ಸುಂಟಿಕೊಪ್ಪ ಬಳಿ ಘಟನೆ

ಕೊಡಗು, ಜೂ.4– ಸಾಮಾನ್ಯವಾಗಿ ಸಿನಿಮಾಗಳಲ್ಲಿ ಇನ್ನೇನು ವರ ತಾಳಿ ಕಟ್ಟಬೇಕು ಅಂತಾದಾಗ ವಧು ತಾನು ಮದುವೆಯಾಗುವುದಿಲ್ಲ ಎಂದು ಹೇಳುವುದನ್ನು ನೋಡಬಹುದು. ಆದರೆ, ಸುಂಟಿಕೊಪ್ಪದಲ್ಲೂ ಇಂಥದ್ದೇ ಘಟನೆ ನಡೆದಿದ್ದು, ಮದುವೆಗೆ ಎರಡು ದಿನವಿದ್ದಾಗ ಮದುವೆಗೆ ವಧು ನಿರಾಕರಿಸಿದ್ದು ಅದೇ ಮುಹೂರ್ತದಲ್ಲಿ ವರ ಬೇರೊಂದು ಯುವತಿಯನ್ನು ವಿವಾಹವಾಗಿದ್ದಾನೆ.

ಸುಂಟಿಕೊಪ್ಪದ ಸಮೀಪದ ತೋಟದ ಮನೆಯೊಂದರಲ್ಲಿ ಜೂ.1ರಂದು ಯುವಕನ ಮದುವೆಯನ್ನು ಮಡಿಕೇರಿಯ ಯುವತಿಯೊಂದಿಗೆ ನಿಶ್ಚಯಿಸಲಾಗಿತ್ತು. ಜೂನ್ 5 ರಂದು ಸುಂಟಿಕೊಪ್ಪದಲ್ಲಿ ಆರತಕ್ಷತೆಯನ್ನು ನಿಗದಿಪಡಿಸಲಾಗಿತ್ತು. ಆದರೆ, ಮದುವೆಗೆ ಎರಡು ದಿನ ಇರಬೇಕೆನ್ನುವಷ್ಟರಲ್ಲಿ ಯುವತಿ ಮದುವೆಗೆ ನಿರಾಕರಿಸಿದ್ದಾಳೆ. ಯುವತಿಯ ಬದಲಾದ ದಿಢೀರ್ ನಿರ್ಧಾರದಿಂದಾಗಿ ಕುಟುಂಬಸ್ಥರು ತಬ್ಬಿಬ್ಬಾಗಿದ್ದಾರೆ. ಯುವತಿಗೆ ಎಷ್ಟೇ ತಿಳಿ ಹೇಳಿದರೂ ತನ್ನ ಪಟ್ಟು ಬಿಡದ ಆಕೆ, ನಿಗದಿಯಾಗಿದ್ದ ಯುವಕನೊಂದಿಗೆ ಮದುವೆಗೆ ನಿರಾಕರಿಸಿದ್ದಾಳೆ.

ನಂತರ ಈ ಪ್ರಕರಣ ಸುಂಟಿಕೊಪ್ಪ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ. ಈ ವೇಳೆ ರಾಜಿ ಪಂಚಾಯಿತಿ ನಡೆಸಲಾಗಿದೆ ಅಲ್ಲಿಯೂ ಯುವತಿ ಮಾತ್ರ ತನ್ನ ಹಠ ಬಿಟ್ಟಿಲ್ಲ. ತಾನು ಆತನನ್ನು ಮದುವೆಯಾಗುವುದೇ ಇಲ್ಲ ಎಂದು ಪಟ್ಟು ಹಿಡಿದು ಕೂತಿದ್ದಾಳೆ. ನಂತರ ಈಗಾಗಲೇ ಮದುವೆಗಾಗಿ ಮಾಡಿದ್ದ ಸುಮಾರು 8 ಲಕ್ಷ ರೂ. ಹೆಣ್ಣಿನ ಮನೆಯವರು ಯುವಕನ ಮನೆಯವರಿಗೆ ನೀಡಬೇಕು ಎಂದು ಒಪ್ಪಂದವಾಗಿದೆ.

ನಂತರ ಈಗಾಗಲೇ ಮದುವೆಗೆ ಸಿದ್ಧತೆ ನಡೆಸಿದ್ದ ಯುವಕನ ಕಡೆಯವರು ತಮಿಳುನಾಡಿನಲ್ಲಿರುವ ಸಂಬಂಧಿಕರೊಬ್ಬರ ಪುತ್ರಿಯನ್ನು ವಿವಾಹಕ್ಕೆ ಒಪ್ಪಿಸಿ, ಮಡಿಕೇರಿಯ ದೇವಾಲಯವೊಂದರಲ್ಲಿ ಅದೇ ಮುಹೂರ್ತದಲ್ಲಿ ವಿವಾಹವಾಗಿದ್ದಾರೆ.

ಪ್ರಜಾಪ್ರಭುತ್ವದ ಆಡಳಿತ ನಡೆಸಿದ ನಾಲ್ವಡಿ ಕೃಷ್ಣರಾಜ ಒಡೆಯರ್

ಮಡಿಕೇರಿ, ಜೂ.4– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1884ರ ಜೂ.4 ರಂದು ಜನಿಸಿದರು. ಸುಮಾರು 38 ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಕೇವಲ ಒಬ್ಬ ನಾಯಕನಾಗಿ ಆಡಳಿತ ನಡೆಸದೆ, ಮುತ್ಸದ್ದಿ ತನದಿಂದ ಪ್ರಜಾಪ್ರಭುತ್ವ ಮಾದರಿಯಲ್ಲಿ ಆಡಳಿತ ನಡೆಸಿದ್ದಾರೆ ಎಂದು ಸುಬ್ರಾಯ ಸಂಪಾಜೆ ಅವರು ಗುಣಗಾನ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪವೃತ್ತದ ಬಳಿ ಇರುವ ಎಸ್‌ಜೆಎಸ್‌ವೈ ಸಭಾಂಗಣದಲ್ಲಿ ಶನಿವಾರ ನಡೆದ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೂರದರ್ಶಿತ್ವ, ವಿವೇಕಶಾಲಿಯಾಗಿ ತಮ್ಮ ಆಡಳಿತವನ್ನು ನಡೆಸಿದ್ದಾರೆ. ವಿಜಯನಗರ ಪತನದ ನಂತರ ಮೈಸೂರು ಸಂಸ್ಥಾನದಲ್ಲಿ ಆಡಳಿತ ಮಾಡಿದ ಪ್ರಮುಖರಲ್ಲಿ ಚಿಕ್ಕ ವೀರ ರಾಜೇಂದ್ರ ಒಡೆಯರ್, ಮುಮ್ಮಡಿ ಕೃಷ್ಣರಾಜ ಒಡೆಯರ್, ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ ಪ್ರಮುಖವಾಗಿದೆ ಎಂದು ತಿಳಿಸಿದರು.

ಮೈಸೂರು ಸಂಸ್ಥಾನದ ಒಡೆಯರ್ ರಾಜವಂಶಸ್ಥರು ಸುಮಾರು 1399 ರಿಂದ 1950 ರವರೆಗೆ ಮೈಸೂರಿನ ಸಾಮ್ರಾಜ್ಯವನ್ನು ಆಳಿದ ಭಾರತೀಯ ರಾಜವಂಶಸ್ಥರಾಗಿದ್ದಾರೆ. ಭಾಷೆ, ಸಾಹಿತ್ಯ, ಸಾಂಸ್ಕೃತಿಕ ವಿಷಯದಲ್ಲಿ ಜಾಗೃತಿಯನ್ನು ಮೂಡಿಸಿದರು ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಎಚ್.ಎಸ್.ಚೇತನ್ ಅವರು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನವನ್ನು ಎಲ್ಲೆಡೆ ಹಬ್ಬದ ರೀತಿಯಲ್ಲಿ ಆಚರಿಸುವಂತಾಗಬೇಕು ಎಂದು ಕರೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಅವರು ಮಾತನಾಡಿ ಸ್ವಾತಂತ್ರ್ಯ ಮುಂಚೆ ಯುದ್ಧ ಮಾಡುವ ಮೂಲಕ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದರು. ಆದರೆ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಶೈಕ್ಷಣಿಕ, ವೈದ್ಯಕೀಯ ಹಾಗೂ ಸಾಮಾಜಿಕ ಸುಧಾರಣೆಗೆ ಶ್ರಮಿಸಿದ್ದಾರೆ ಎಂದು ಅವರು ಕೊಂಡಾಡಿದರು. ಕ್ರಾಂತಿಕಾರಿ, ಸಮಾಜ ಸುಧಾರಕ ಬಸವಣ್ಣ 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸುವ ಮೂಲಕ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಬಿತ್ತಿದ್ದರೋ, ಅದೇ ರೀತಿಯಲ್ಲಿ ಮೈಸೂರು ರಾಜರೂ ಸಹ ಪ್ರಜಾಪ್ರಭುತ್ವ ಮಾದರಿಯ ಆಡಳಿತ ನಡೆಸಿದರು ಎಂದು ಕೊಂಡಾಡಿದರು.

ಕಸಾಪ ಮಾಜಿ ಜಿಲ್ಲಾಧ್ಯಕ್ಷ ಟಿ.ಪಿ.ರಮೇಶ್, ತಾಲೂಕು ಘಟಕದ ಅಧ್ಯಕ್ಷರಾದ ಅಂಬೆಕಲ್ಲು ನವೀನ್(ಮಡಿಕೇರಿ), ಕೆ.ಎಸ್.ಮೂರ್ತಿ (ಕುಶಾಲನಗರ), ವಿಜೇತ್ (ಸೋಮವಾರಪೇಟೆ), ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಇತರರು ಇದ್ದರು.

ಕಡ್ಲೇರ ತುಳಸಿ ಮೋಹನ್, ರೇವತಿ ರಮೇಶ್ ಮತ್ತು ರಮ್ಯ ಅವರು ನಾಡಗೀತೆ ಹಾಡಿದರು, ರೇವತಿ ರಮೇಶ್ ಸ್ವಾಗತಿಸಿದರು. ಕಸಾಪ ಜಿಲ್ಲಾ ಘಟಕದ ಗೌರವ ಕಾರ್ಯದರ್ಶಿ ಮುನೀರ್ ಅಹ್ಮದ್ ನಿರೂಪಿಸಿದರು, ಅಂಬೆಕಲ್ಲು ನವೀನ್ ವಂದಿಸಿದರು.

ಕೊಳೆತ ಸ್ಥಿತಿಯಲ್ಲಿ ಅಪರಿಚಿತ ಶವ ಪತ್ತೆ

ಮಡಿಕೇರಿ, ಜೂ.4– ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಂಡಂಗೇರಿ ಗ್ರಾಮದಿಂದ ಅಮ್ಮತ್ತಿ ಕಡೆಗೆ ಹೋಗುವ ಮುಖ್ಯ ರಸ್ತೆ ಬಳಿ ಅಪರಿಚಿತ ವ್ಯಕ್ತಿಯ ಮೃತ ದೇಹವು ಸಂಪೂರ್ಣ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಅಂದಾಜು 45ರಿಂದ 50 ವಯಸ್ಸಿನ ಪುರುಷ ಮೃತದೇಹವಾಗಿದ್ದು, ಒಂದುವಾರದ ಹಿಂದೆ ಮೃತಪಟ್ಟಿರುವುದಾಗಿ ಶಂಕಿಸಲಾಗಿದೆ. ಮೃತದೇಹದೊಂದಿಗೆ ಸಿಮ್ ಇಲ್ಲದೆ ಇರುವ ನೊಕಿಯಾ ಮೊಬೈಲ್, ಕೆಂಪು ಬಣ್ಣದ ಟಾರ್ಚ್, ಎರಡು ಲೈಟರ್‌ಗಳು ದೊರಕಿದೆ. ಯಾರಾದರೂ ವಾರುಸುದಾರರು ಕಂಡು ಬಂದಲ್ಲಿ ಸಿದ್ದಾಪುರ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ 9480804950, 08274258333, 7259433933 ಸಂಪರ್ಕಿಸಬಹುದಾಗಿದೆ.

ತಾಯಿ–ಮಗಳ ಮೃತದೇಹ ಪತ್ತೆ

ಸುಂಟಿಕೊಪ್ಪ,ಜೂ.4– ಅಸ್ಸಾಂ ಮೂಲದ ಅಪರಿಚಿತ ತಾಯಿ ಮಗಳು ಕಾಫಿ ತೋಟವೊಂದರಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಮೃತ ದೇಹ ದೊರೆತಿದೆ. ಸುಂಟಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಮ್ಮೆಗುಂಡಿ ರಾಕೇಶ್ ಎಂಬವರಿಗೆ ಸೇರಿದ ಕಾಫಿ ತೋಟದಲ್ಲಿ ಅಸ್ಸಾಂ ಮೂಲದ ಕಾರ್ಮಿಕರಾದ ತಾಯಿ ಹಾಗೂ ಮಗಳು ಅಂದಾಜು 2 ದಿನಗಳ ಹಿಂದೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಶನಿವಾರ ಮೃತ ದೇಹಗಳು ಪತ್ತೆಯಾಗಿದೆ ಸುಂಟಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಸ್ಥಳಕ್ಕೆ ತೆರಳಿ ಮಹಜರು ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಜೂ.8 ರಂದು ತಲಕಾವೇರಿ ದೇವಾಲಯಕ್ಕೆ ಭಕ್ತರಿಗೆ ಪ್ರವೇಶವಿಲ್ಲ

ಮಡಿಕೇರಿ, ಜೂ.4– ಮಡಿಕೇರಿ ತಾಲೂಕು ತಲಕಾವೇರಿಯ ಶ್ರೀ ತಲಕಾವೇರಿ ದೇವಾಲಯದಲ್ಲಿ ಜೂ.8 ರಂದು ಮಧ್ಯಾಹ್ನ 2 ಗಂಟೆಯ ನಂತರ ಸ್ವಚ್ಛತಾ ಕಾರ್ಯ ಹಮ್ಮಿಕೊಂಡಿರುವುದರಿಂದ ಶ್ರೀ ತಲಕಾವೇರಿ ದೇವಾಲಯಕ್ಕೆ ಪ್ರವೇಶ ಇರುವುದಿಲ್ಲ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು ಸಹಕರಿಸಬೇಕಾಗಿ ಶ್ರೀಭಗಂಡೇಶ್ವರ–ತಲಕಾವೇರಿ ಮತ್ತು ಸಮೂಹ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಅವರು ತಿಳಿಸಿದ್ದಾರೆ.

ಪೊರಾಡು ಗ್ರಾಮದಲ್ಲಿ ಕಳವು ಮಾಡಿದ್ದ ಆರೋಪಿ ಬಂಧನ

ಕೇವಲ ಐದೇ ದಿನದಲ್ಲಿ ಪ್ರಕರಣ ಭೇದಿಸಿದ ಪೊಲೀಸರು



● **ತೋಟದ ಮನೆಯಲ್ಲಿ ಕೆಲಸ ಮಾಡುತ್ತಿದ್ದವನೇ ಆರೋಪಿ**

ಶ್ರೀಮಂಗಲ, ಜೂ.4–ಬಿರುನಾಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೊರಾಡು ಗ್ರಾಮದ ತೋಟದ ಮಧ್ಯ ಇರುವ ಒಂಟಿ ಮನೆಗೆ ನುಗ್ಗಿ ನಗದು ಹಾಗೂ ಆಭರಣ ಕಳವು ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಐದೇ ದಿನದಲ್ಲಿ ಶ್ರೀಮಂಗಲ ಪೊಲೀಸರು ಕೇರಳ ರಾಜ್ಯದ ಕಣ್ಣೂರಿನಲ್ಲಿ ಪತ್ತೆ ಹಚ್ಚಿ ಬಂಧಿಸಿದ್ದಾರೆ.

ಕಾಸರಗೋಡು ಜಿಲ್ಲೆಯ ಪೊಡಮಕಲ್ ಗ್ರಾಮದ ಸಜೇಶ್ ಕೃಷ್ಣ ಎಂಬಾತನೇ ಬಂಧಿತ ಆರೋಪಿ. ಈತ ಮೇ 29 ರಂದು ಪೊರಾಡು ಗ್ರಾಮದ ಅಣ್ಣೀರ ಎಂ.ಲೋಕೇಶ್ ಹಾಗೂ ಅವರ ಕುಟುಂಬ ತಮ್ಮ ಸಂಬಂಧಿಕರ ಮನೆಗೆ ಹೋಗಿರುವುದನ್ನು ಅರಿತು ರಾತ್ರಿ ಮನೆಯ ಹಿಂಬಾಗಿಲು ಹಾಗೂ ಭಾವಣಿಯನ್ನು ಮುರಿದು ಒಳನುಗ್ಗಿ 14 ಗ್ರಾಂನ ಚಿನ್ನ, 48 ಸಾವಿರ ರೂ. ನಗದು ಮತ್ತು ಪೀಚೆಕತ್ತಿಯ ಬೆಳ್ಳಿಯ ಸರವನ್ನು ಕಳ್ಳತನ ಮಾಡಿ ಪರಾರಿಯಾಗಿದ್ದ. ಸುತ್ತಿಗೆ ಹಾಗೂ ಕಬ್ಬಿಣದ ರಾಡ್ ಬಳಸಿ ಕಬ್ಬಿಣದ ಬೀರುವನ್ನು ಮುರಿದು ಕಳ್ಳತನ ಮಾಡಿದ್ದ.

ಕಳುವಿನ ನಂತರ ರಾತ್ರಿಯೇ ಗ್ರಾಮದಿಂದ ಮುಂಜಾನೆ ಬಸ್ ಮೂಲಕ ಕೇರಳದ ಕಣ್ಣೂರಿಗೆ ತೆರಳಿ ಅಲ್ಲಿ ಆಭರಣವನ್ನು ಮಾರಾಟ ಮಾಡಿ ಹಾಗೂ ನಗದು ಬಳಸಿ ರೂ.16 ಸಾವಿರದ ಮೊಬೈಲ್ ಹಾಗೂ ರೂ.50 ಸಾವಿರದ ಬೈಕ್ ಖರೀದಿಸಿದ್ದ. ಆರೋಪಿ ಬೆಳೆಗಾರ ಅಣ್ಣೀರ ಲೋಕೇಶ್ ಅವರ ಮನೆಯಲ್ಲಿ ಕಾರ್ಮಿಕನಾಗಿದ್ದ ಮನೆಯ ಸಮೀಪದ ಲೈನ್ ಮನೆಯಲ್ಲಿ ವಾಸವಾಗಿದ್ದ ಆರೋಪಿ ಮನೆಯವರು ಕುಟುಂಬ ಸಮೇತ ಸಂಬಂಧಿಕರ ಮನೆಗೆ ಹೋಗಿರುವುದನ್ನು ಅರಿತು ಕಳವು ಮಾಡಿದ್ದ.

ಕಳವು ಮಾಡಿ ನಾಪತ್ತೆಯಾಗಿದ್ದ ಕಾರ್ಮಿಕ ಸಜೇಶ್ ಕೃಷ್ಣ ಬಗ್ಗೆ ಸಂಶಯ ವ್ಯಕ್ತಪಡಿಸಿ ಬೆಳೆಗಾರ ಲೋಕೇಶ್ ಪೊಲೀಸರಿಗೆ ದೂರು ನೀಡಿದ್ದರು. ಶ್ರೀಮಂಗಲ ಪೊಲೀಸರೊಂದಿಗೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಆಗಮಿಸಿ ಅಗತ್ಯ ಸಾಕ್ಷ್ಯಾಧಾರ ಕಲೆ ಹಾಕಿದ್ದರು. ಪೊಲೀಸ್ ಶ್ವಾನವು ಆರೋಪಿ ತಂಗಿದ್ದ ಲೈನ್ ಮನೆಗೆ ನುಗ್ಗಿ, ಆರೋಪಿ ಬದಲಿಸಿದ್ದ ಶರ್ಟನ್ನು ಹೊರತಂದಿತ್ತು ಹಾಗೂ ಆರೋಪಿ ತೆರಳಿದ್ದ ರಸ್ತೆಯ ಕುರುಹು ನೀಡಿತ್ತು.

ಆರೋಪಿಯ ಜಾಡು ಹಿಡಿದು ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿ ಕಳ್ಳತನ ಹಣ ಹಾಗೂ ಆಭರಣ ಮಾರಿ ಖರೀದಿಸಿದ್ದ ಬೈಕ್, ಖರ್ಚಾಗದೇ ಉಳಿದಿದ್ದ ನಗದು ಹಣ ಮತ್ತು ಮೊಬೈಲ್‌ನ್ನು ವಶಪಡಿಸಿಕೊಂಡಿದ್ದಾರೆ. ಪೊಲೀಸರು ಕೇವಲ ಐದೇ ದಿನದಲ್ಲಿ ಆರೋಪಿಯನ್ನು ಕೇರಳಕ್ಕೆ ತೆರಳಿ ಬಂಧಿಸಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗಿದೆ.

ಕಾರ್ಯಾಚರಣೆ ತಂಡದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ ಅಯ್ಯಪ್ಪ ಅವರ ನಿರ್ದೇಶನದಂತೆ ಡಿವೈಎಸ್ಪಿ ನಿರಂಜನ್‌ರಾವ್ ಅರಸ್ ಮತ್ತು ಕುಟ್ಟ ವೃತ್ತ ನಿರೀಕ್ಷಕ ಮಂಜಪ್ಪ ಅವರ ಮಾರ್ಗದರ್ಶನದಲ್ಲಿ ಶ್ರೀಮಂಗಲ ಉಪನಿರೀಕ್ಷಕ ಕೆ.ಆರ್.ರವಿಶಂಕರ್ ಸಿಬ್ಬಂದಿಗಳಾದ ಬಿ.ಟಿ.ಮಂಜುನಾಥ್, ಖಾಲಿದ್, ಶಿವು, ರಘು ಸುಬ್ರಮಣಿ, ಚಂದ್ರಶೇಖರ್, ಚಾಲಕ ರಾಮಲಿಂಗ ಅವರು ಪಾಲ್ಗೊಂಡಿದ್ದರು.

ನಾಳೆ ಕೊಡವ ನ್ಯಾಷನಲ್ ಕೌನ್ಸಿಲ್ ಧರಣಿ



ಮಡಿಕೇರಿ,ಜೂ.4– ಸಂವಿಧಾನ ಪರಾಮರ್ಶೆ ಆಯೋಗ ವರದಿಯನ್ವಯ ಕೊಡವ ಭೂ ರಾಜಕೀಯ ಸ್ವಾಯತ್ತತೆ ಕಲ್ಪಿಸಬೇಕು ಮತ್ತು ಸಂವಿಧಾನದ 338ನೇ ವಿಧಿಯನ್ನು ಆವಾಹಿಸಲು ರಾಷ್ಟ್ರೀಯ ಬುಡಕಟ್ಟು ಆಯೋಗಕ್ಕೆ ನಿರ್ದೇಶಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಜೂ.6ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸುವುದಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ. ಪತ್ರಿಕಾ ಹೇಳಿಕೆ ನೀಡಿರುವ ಅವರು ಸೋಮವಾರ ಬೆಳಗ್ಗೆ 10.30 ಗಂಟೆಗೆ ಶಾಂತಿಯುತ ಧರಣಿಯನ್ನು ನಡೆಸಿ ಜಿಲ್ಲಾಡಳಿತದ ಮೂಲಕ ಯುಜಿಒಐ ಹಾಗೂ ಜಿಒಕೆಗೆ ಮನವಿ ಪತ್ರ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ಕೊಡವ ಭೂರಾಜಕೀಯ ಸ್ವಾಯತ್ತೆ ಕಲ್ಪಿಸಬೇಕು, ಕೊಡವ ಜನಾಂಗಕ್ಕೆ ಎಸ್‌ಟಿ ಟ್ಯಾಗ್ ನೀಡಬೇಕು, ಕೊಡವ 'ಜನಾಂಗೀಯ ಸಂಸ್ಕಾರ ಗನ್' ಅನ್ನು ಸಂವಿಧಾನದ 25 ಮತ್ತು 26ನೇ ವಿಧಿಗಳಲ್ಲಿ ಅಳವಡಿಸಬೇಕು. ಈ ನಿಟ್ಟಿನಲ್ಲಿ ಸಂವಿಧಾನ ತಿದ್ದುಪಡಿಗೆ ಮುಂದಾಗಬೇಕೆಂದು ಸಿಎನ್‌ಸಿ ಒತ್ತಾಯಿಸಲಿದೆ ಎಂದು ನಾಚಪ್ಪ ತಿಳಿಸಿದ್ದಾರೆ.

ರಂಗಸ್ವಾಮಿಗೆ 'ಅನ್ ಸಂಗ್ ಹೀರೋ' ಪ್ರಶಸ್ತಿ



ಮಡಿಕೇರಿ, ಜೂ.4– ರೋಟರಿ ಜಿಲ್ಲೆ 3181ರಿಂದ ನೀಡಲಾಗುವ ಪ್ರತಿಷ್ಠಿತ 'ಅನ್ ಸಂಗ್ ಹೀರೋ' ಪ್ರಶಸ್ತಿಯನ್ನು ಈ ವರ್ಷ ಕುಶಾಲನಗರ ರೋಟರಿ ಕ್ಲಬ್ ಅಧ್ಯಕ್ಷ ಎಂ.ಡಿ. ರಂಗಸ್ವಾಮಿ ಪಡೆದುಕೊಂಡಿದ್ದಾರೆ. ಮೈಸೂರಿನಲ್ಲಿ ನಡೆದ ರೋಟರಿ ಜಿಲ್ಲೆಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರೋಟರಿ ಜಿಲ್ಲಾ ರಾಜ್ಯಪಾಲ ರವೀಂದ್ರ ಭಟ್, ಕಲಾವಿದೆ ಪ್ರಿಯಾಂಕ, ಮಾಜಿ ರಾಜ್ಯಪಾಲ ರಂಗನಾಥ ಭಟ್. ರೋಟರಿ ವಲಯ ಉಪ ರಾಜ್ಯಪಾಲ ಅನಿಲ್ ಹೆಚ್.ಟಿ. ವಲಯ ಕಾರ್ಯದರ್ಶಿ ವಸಂತ ಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು.

ರಂಗಸ್ವಾಮಿ ಅವರು ಕೂಡಿಗೆ ವ್ಯಾಪ್ತಿಯ ಕೂಡು ಮಂಗಳೂರು ಗ್ರಾಮದಲ್ಲಿ ಕಳೆದ ವರ್ಷ ಬಾರೀ ಮಳೆಯಿಂದಾಗಿ ಮನೆ ಕಳೆದುಕೊಂಡಿದ್ದ ಆದಿವಾಸಿ ಕುಟುಂಬಕ್ಕೆ ರೋಟರಿ ಸಹಯೋಗದೊಂದಿಗೆ ಸ್ವಂತ ಖರ್ಚಿನಲ್ಲಿ 3 ಲಕ್ಷ ರೂಪಾಯಿ ವೆಚ್ಚದಲ್ಲಿ ಮನೆ ನಿರ್ಮಿಸಿ ಕೊಟ್ಟಿದ್ದರು. ಈ ಕಾರ್ಯಕ್ಕಾಗಿ ರೋಟರಿ ವತಿಯಿಂದ ಅನ್ ಸಂಗ್ ಹೀರೋ ಪ್ರಶಸ್ತಿಯನ್ನು ರಂಗಸ್ವಾಮಿ ಅವರಿಗೆ ನೀಡಲಾಗಿದೆ.

ಕೊಳಕೇರಿ ವಿವಿಧೋದ್ದೇಶ ಸಂಘಕ್ಕೆ ಅಧ್ಯಕ್ಷರ ಆಯ್ಕೆ

ನಾಪೋಕ್ಲು, ಜೂ.4(ದುಗ್ಗಳ)– ಕೊಳಕೇರಿ ಗ್ರಾಮದ ವಿವಿಧೋದ್ದೇಶ ಸಂಘದ ನೂತನ ಅಧ್ಯಕ್ಷರಾಗಿ ಬಿದ್ದಾಟಂಡ ರೋಜಿ ಚಿಣ್ಣಪ್ಪ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಸಂಘದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಉಪಾಧ್ಯಕ್ಷರಾಗಿ ಕುಂಡ್ಯೋಳಂಡ ವಿಶು ಪೂವಯ್ಯ, ಪ್ರಧಾನ ಕಾರ್ಯದರ್ಶಿಯಾಗಿ ಕಾಂಡಂಡ ಪೊನ್ನಣ್ಣ, ನಿರ್ದೇಶಕರಾಗಿ ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಕಾಂಡಂಡ ಅಶೋಕ್ ತಿಮ್ಮಯ್ಯ, ನಿಡುಮಂಡ ಕೃತಿ ಉತ್ತಯ್ಯ, ಕೇಟೋಳಿರ ಸದಾ ಬಿದ್ದಪ್ಪ ಮಲ್ಲೆರ ಸುಮ ಸುಬ್ಬಯ್ಯ ಮತ್ತು ಮಹಿಳಾ ನಿರ್ದೇಶಕರಾಗಿ ಚಂಗುಲಂಡ ಬಿಲ್ಲಿ ಸಾವಿತ್ರಿ, ಕಾಂಡಂಡ ಪ್ರತಿಭಾ ಅಚ್ಚಪ್ಪ ಅವರುಗಳನ್ನು ನೇಮಕ ಮಾಡಲಾಗಿದೆ.

ಒಂದನೇ ಪುಟದಿಂದ

ಪಠ್ಯ ರದ್ದು ಮಾಡಿ

ಅವರನ್ನು ಗೇಲಿ ಮಾಡಿರುವ, ಸಮಾಜ ಸುಧಾರಕರಾದ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಬಸವಣ್ಣನವರನ್ನು ಅವಮಾನಿಸಿರುವ ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪರಿಷ್ಕರಣಾ ಸಮಿತಿ ಅಧ್ಯಕ್ಷ ಸ್ಥಾನದಿಂದ ಮಾತ್ರವಲ್ಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದಲೂ ಕಿತ್ತುಹಾಕಬೇಕು? ಎಂದು ಅವರು ಹೇಳಿದ್ದಾರೆ. ವಿಸರ್ಜನೆ ಮಾಡಬೇಕಾಗಿರುವುದು ಪರಿಷ್ಕೃತ ಪಠ್ಯವನ್ನು. ಈಗಾಗಲೇ ಅವಧಿ ಮುಗಿದಿರುವ ಪಠ್ಯಪುಸ್ತಕ ಪರಿಶೀಲನಾ ಸಮಿತಿಯನ್ನಲ್ಲ. ಪೂರ್ವಗ್ರಹ ಪೀಡಿತ ಅಧ್ಯಕ್ಷನನ್ನು ಕಿತ್ತುಹಾಕಿದ ಮೇಲೆ ಆ ಸಮಿತಿ ಶಿಫಾರಸು ಮಾಡಿರುವ ಪಠ್ಯವನ್ನು ಹೇಗೆ ಒಪ್ಪಿಕೊಳ್ಳಲು ಸಾಧ್ಯ ಎಂದು ಅವರು ಪ್ರಶ್ನಿಸಿದ್ದಾರೆ.

ಜನತೆಯಲ್ಲಿ ಮೂಡಿರುವ ಗೊಂದಲವನ್ನು ಪರಿಹರಿಸುವಂತಹ ಸ್ಪಷ್ಟತೆ ರಾಜ್ಯದ ಮುಖ್ಯಮಂತ್ರಿಗಳ ಮಾತಿನಲ್ಲಿ ಇರಬೇಕು. ಇವರ ಮಾತು ಇನ್ನಷ್ಟು ಗೊಂದಲಗಳನ್ನು ಸೃಷ್ಟಿಸಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರು ಬೋಧಿಸಲಿರುವುದು ಹಳೆಯ ಪಠ್ಯವೇ ಪರಿಷ್ಕೃತ ಪಠ್ಯವೇ ಎಂದು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಬಸವಣ್ಣನವರ ವಿಚಾರವೂ ಸೇರಿದಂತೆ ಆಕ್ಷೇಪ ವ್ಯಕ್ತವಾಗಿರುವ ಅಂಶಗಳನ್ನು ಪರಿಷ್ಕರಿಸಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗಿದ್ದರೆ ಈಗಿನ ಪರಿಷ್ಕೃತ ಪಠ್ಯವನ್ನು ಕೈಬಿಡಲಾಗುವುದೇ ಇದನ್ನು ಮುಖ್ಯಮಂತ್ರಿ ಬೊಮ್ಮಾಯಿ ಸ್ಪಷ್ಟಪಡಿಸಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ನಾಡಿನ ಹಲವಾರು ಹಿರಿಯ ಸಾಹಿತಿಗಳು ಪರಿಷ್ಕೃತ ಪಠ್ಯಪುಸ್ತಕಗಳಲ್ಲಿ ಸೇರಿಸಲಾಗಿರುವ ತಮ್ಮ ಕೃತಿಗಳನ್ನು ವಾಪಸು ಪಡೆದಿದ್ದಾರೆ. ಬಿಜೆಪಿ ಸರ್ಕಾರ ತಮ್ಮ ಅಭಿಪ್ರಾಯವನ್ನು ಧಿಕ್ಕರಿಸಿದರೆ ಕಾನೂನು ಹೋರಾಟ ಮಾಡುವುದಾಗಿ ಈ ಸಾಹಿತಿಗಳು ಎಚ್ಚರಿಕೆ ನೀಡಿದ್ದಾರೆ. ಇಂತಹ ವಿವಾದಾತ್ಮಕ ಪಠ್ಯವನ್ನು ಬೋಧಿಸಲು ಹೇಗೆ ಸಾಧ್ಯ ಎಂದು ಅವರು ಪ್ರಶ್ನಿಸಿದ್ದಾರೆ. ಪಠ್ಯ ಪರಿಷ್ಕರಣಾ ಸಮಿತಿಗೆ ಅನರ್ಹರ ನೇಮಕ ಮತ್ತು ಅದರಿಂದ ಸೃಷ್ಟಿಯಾಗಿರುವ ವಿವಾದಕ್ಕೆ ವಿದ್ಯಾರ್ಥಿಗಳು ಬಲಿಯಾಗಿದ್ದಾರೆ. ಯಾವ ಪಠ್ಯವನ್ನು ಓದಬೇಕೆಂಬ ಬಗ್ಗೆ ವಿದ್ಯಾರ್ಥಿಗಳು, ಯಾವುದನ್ನು ಬೋಧಿಸಬೇಕೆಂದು ಶಿಕ್ಷಕರು ಗೊಂದಲಕ್ಕೀಡಾಗಿದ್ದಾರೆ. ಇದಕ್ಕೆ ಏನು ಪರಿಹಾರ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಈಗಿನ ಗೊಂದಲಗಳಿಗೆ ಇರುವ ಏಕೈಕ ಪರಿಹಾರವೆಂದರೆ ನಾಡದ್ರೋಹಿ ಅಧ್ಯಕ್ಷನ ಸಮಿತಿ ಪರಿಷ್ಕರಿಸಿರುವ ಪಠ್ಯವನ್ನು ರದ್ದುಮಾಡಿ, ನೂತನ ಪರಿಷ್ಕೃತ ಪಠ್ಯ ರಚನೆಯಾಗುವವರೆಗೆ ಹಳೆಯ ಪಠ್ಯವನ್ನೇ ಮುಂದುವರಿಸುವುದು. ಮುಖ್ಯಮಂತ್ರಿಗಳು ಜಿದ್ದಿಗೆ ಬೀಳದೆ ಈ ನಿರ್ಧಾರ ಕೈಗೊಳ್ಳಬೇಕು ಎಂದು ಸಿದ್ದರಾಮಯ್ಯ ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಮೊದಲ ಹಂತದ ಯೋಗ ತಾಲೀಮು

ನಿರ್ಧರಿಸಲಾಗಿದೆ. ಈ ಸಂಬಂಧ ಸಚಿವರು ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಿದ್ದಾರೆ ಎಂದರು. ವಿಶ್ವ ಪರಿಸರ ದಿನವಾದ ನಾಳೆ(ಜೂ.5) ಮೊದಲ ಹಂತದ ಪೂರ್ವಭಾವಿ ಯೋಗ ತಾಲೀಮು ನಡೆಯಲಿದ್ದು, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಉದ್ಘಾಟನೆ ನೆರವೇರಿಸಿ, ಆಶೀರ್ವದಿಸಲಿದ್ದಾರೆ. ಶ್ರೀ ಭಾಷ್ಯಂ ಸ್ವಾಮೀಜಿ ಇನ್ನಿತರ ಮಹನೀಯರು ಭಾಗವಹಿಸಲಿದ್ದಾರೆ. ಚಾಮುಂಡಿ ವಿಹಾರ ಕ್ರೀಡಾಂಗಣದಿಂದ ಬೆಳಗ್ಗೆ 5.30ಕ್ಕೆ ಕ್ರೀಡಾಪಟುಗಳು ವಾಕಾಥಾನ್ ಮೂಲಕ ಅರಮನೆ ಆವರಣ ಪ್ರವೇಶಿಸಲಿದ್ದಾರೆ. ಮೈಸೂರು ಯೋಗ ಫೆಡರೇಶನ್ ಹಾಗೂ ವಿವಿಧ ಯೋಗ ಕೇಂದ್ರದ ಯೋಗಪಟುಗಳು ಸೇರಿದಂತೆ ಮಕ್ಕಳಾದಿ ವೃದ್ಧರವರೆಗೂ ಸುಮಾರು 20 ಸಾವಿರ ಮಂದಿ ಯೋಗ ಪ್ರದರ್ಶಿಸುವ ನಿರೀಕ್ಷೆ ಇದೆ. ಅದೇ ವೇಳೆ ಯೋಗ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಗುವುದು ಎಂದರು.

ಮತ್ತೆರಡು ತಾಲೀಮು: ಮುಂದಿನ ಭಾನುವಾರ(ಜೂ.12) ಎರಡನೇ ಯೋಗ ತಾಲೀಮು ನಡೆಯಲಿದ್ದು, ಅಂದು ಸುತ್ತೂರು ಶ್ರೀಗಳು ಭಾಗವಹಿಸಲಿದ್ದಾರೆ. ಜೂ.19ರಂದು 3ನೇ ಹಾಗೂ ಕಡೆಯ ಯೋಗ ತಾಲೀಮು ಆಯೋಜಿಸಲಾಗುತ್ತದೆ. ಜೂ.10ರ ನಂತರ ಕೇಂದ್ರದಿಂದ ಎಸ್‌ಪಿಜಿ ತಂಡ ಮೈಸೂರಿಗೆ ಆಗಮಿಸುವ ಸಾಧ್ಯತೆ ಇದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಭೆಯಲ್ಲಿ ಮೇಯರ್ ಸುನಂದಾ ಪಾಲನೇತ್ರ, ಶಾಸಕ ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಯೋಗ ಫೆಡರೇಶನ್ ಅಧ್ಯಕ್ಷ ಶ್ರೀಹರಿ ಸೇರಿದಂತೆ ನಗರ ಪಾಲಿಕೆ ಹಾಗೂ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು.

ಮತ್ತೊಂದು ರಗಳೆ: ಚಡ್ಡಿಗೆ ಬೆಂಕಿ

ಈ ಹಿನ್ನೆಲೆಯಲ್ಲಿ ಕೆರಳಿದ ವಿಪಕ್ಷ ನಾಯಕ ಸಿದ್ದರಾಮಯ್ಯ ನಿನ್ನೆ, ಪ್ರಜಾಪ್ರಭುತ್ವದ ಹಕ್ಕು ಪ್ರತಿಭಟನೆ. ಇಂತಹ ಸಂದರ್ಭದಲ್ಲಿ ಒಂದು ಚಡ್ಡಿ ಸುಟ್ಟದ್ದಕ್ಕೆ 22 ಮಂದಿ ವಿರುದ್ಧ ಕೇಸ್ ಹಾಕಿ, ಬಂಧಿಸಿದ್ದಾರೆ. ಅವರ ಮೇಲಿನ ಕೇಸ್ ಹಿಂಪಡೆದು ಬಿಡುಗಡೆ ಮಾಡದಿದ್ದರೆ ಹಾಗೂ ಎನ್‌ಎಸ್‌ಯುಐ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಗೂಂಡಾಗಳನ್ನು ಬಂಧಿಸದಿದ್ದರೆ ರಾಜ್ಯಾದ್ಯಂತ ಚಡ್ಡಿ ಸುಡುವ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಗುಡುಗಿದ್ದರು. ಸಿದ್ದರಾಮಯ್ಯನವರ ಹೇಳಿಕೆಗೆ ಇಂದು ಪ್ರತಿಕ್ರಿಯಿಸಿದ ಕೆ.ಎಸ್.ಈಶ್ವರಪ್ಪ, 'ಸಿದ್ದರಾಮಯ್ಯನವರೇ ಚಡ್ಡಿಗೆ ಬೆಂಕಿ ಹಚ್ಚಿ ನೋಡಿ, ನಿಮ್ಮ ಬುಡವೇ ಬೆಂದು ಬೂದಿಯಾಗತ್ತದೆ. ರಾವಣ ಹನುಮನ ಬಾಲಕ್ಕೆ ಬೆಂಕಿ ಹಚ್ಚಿದ. ಲಂಕೆಯೇ ಸುಟ್ಟು ಹೋಯಿತು ಎಂದು ಟ್ವೀಟ್ ಮಾಡಿದ್ದರು.

ಇತ್ತ ಈಶ್ವರಪ್ಪನವರಿಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ಚಡ್ಡಿಗೆ ಬೆಂಕಿ ಬಿದ್ದರೆ ಈಶ್ವರಪ್ಪನವರ ಬುಡ ಸಿಡಿಯುದೇಕೆ? ಈಶ್ವರಪ್ಪನವರ ಭ್ರಷ್ಟಾಚಾರ ಬೆಂಕಿ ರಾಜ್ಯವನ್ನಷ್ಟೇ ಅಲ್ಲ ಗುತ್ತಿಗೆದಾರರ ಬದುಕನ್ನೇ ಸುಟ್ಟಿದೆ. ಚಡ್ಡಿ ಎಂದರೆ ಬಿಜೆಪಿಗರಿಗೆ ಯಾಕಿಷ್ಟು ಅಮರ ಪ್ರೇಮ? ಚಡ್ಡಿಗೆ ಬಿಜೆಪಿ ಪೇಟೆಂಟ್ ಇದೆಯಾ? ಅಥವಾ ಚಡ್ಡಿಯನ್ನು ಬಿಜೆಪಿ ಧ್ವಜವನ್ನಾಗಿ ಸ್ವೀಕರಿಸಿದೆಯಾ?' ಎಂದು ಟ್ವೀಟ್ ಮಾಡುವ ಮೂಲಕ ಲೇವಡಿ ಮಾಡಿದೆ.

ಬೆಂಗಳೂರಿಗೆ ದೌಡು

ಕೇವಲ ಯಡಿಯೂರಪ್ಪನವರಿಗಷ್ಟೇ ಅಸಮಾಧಾನವಿಲ್ಲ. ವಿವಿಧ ಕಾರಣಗಳಿಗೆ ಸಚಿವ ಶ್ರೀರಾಮುಲು ಹಾಗೂ ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಪಕ್ಷದ ಮುಖಂಡರ ವಿರುದ್ಧ ಅಸಮಾಧಾನಗೊಂಡಿದ್ದಾರೆ. ಇವರಿಬ್ಬರಿಗೂ ತಮ್ಮದೇ ಆದ ಶಾಸಕರ ಬೆಂಬಲ ವಿದೆ. ಅಸಮಾಧಾನವನ್ನು ರಾಜ್ಯಸಭಾ ಹಾಗೂ ಪದವೀಧರ ಶಿಕ್ಷಕರ ಕ್ಷೇತ್ರದಲ್ಲಿ ಪರೋಕ್ಷವಾಗಿ ವ್ಯಕ್ತಪಡಿಸಿದರೆ, ಪಕ್ಷದ ಅಭ್ಯರ್ಥಿಗಳಿಗೆ ಹಿನ್ನಡೆಯಾಗುತ್ತದೆ ಎಂಬ ಮಾಹಿತಿ ವರಿಷ್ಠರಿಗೆ ತಲುಪಿದೆ. ಇದರ ಹಿನ್ನೆಲೆಯಲ್ಲಿ ಅರುಣ್‌ಸಿಂಗ್ ಹಠಾತ್ತನೆ ಬೆಂಗಳೂರಿಗೆ ಬಂದು ಎಲ್ಲರನ್ನು ಸಂತೈಸುವ, ಅದರಲ್ಲೂ ಯಡಿಯೂರಪ್ಪನವರನ್ನು ಮನವೊಲಿಸಿ, ಪರಿಷತ್ ಚುನಾವಣೆಯಲ್ಲಿ ಸಕ್ರಿಯವಾಗಿ ಬಳಸಿಕೊಳ್ಳಲು ಮುಂದಾಗಿದ್ದಾರೆ. ಜೂನ್ 10ರಂದು ನಡೆಯುತ್ತಿರುವ ರಾಜ್ಯಸಭಾ ಚುನಾವಣೆಯಲ್ಲಿ ಎರಡು ಸ್ಥಾನಗಳು ಸುಲಭವಾಗಿ ಬಿಜೆಪಿಗೆ ಮೊದಲ ಪ್ರಾಶಸ್ತ್ಯದಲ್ಲೇ ದೊರೆಯಲಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಮೂರು ಮಂದಿಯನ್ನು ಕಣಕ್ಕಿಳಿಸಿರುವ ಬಿಜೆಪಿ ತನ್ನ ಎಲ್ಲ ಅಭ್ಯರ್ಥಿಗಳನ್ನು ರಾಜ್ಯಸಭೆಗೆ ಕಳುಹಿಸಲು ಆಂತರಿಕ ಕಸರತ್ತು ನಡೆಸಿದೆ. ಕಾಂಗ್ರೆಸ್-ಜೆಡಿಎಸ್‌ನ ಕಿತ್ತಾಟದಿಂದ ತನ್ನದಲ್ಲದ ನಾಲ್ಕನೇ ಸ್ಥಾನವನ್ನು ಬಿಜೆಪಿ ಕಸಿದುಕೊಳ್ಳಬಹುದಾಗಿದೆ. ಇಂತಹ ಸನ್ನಿವೇಶದಲ್ಲಿ ಎಲ್ಲಿಯಾದರೂ, ಪಕ್ಷದಲ್ಲಿಯೇ ಅಸಮಾಧಾನಿತ ನಾಯಕರು ಹಾಗೂ ಶಾಸಕರು ತಿರುಗಿ ಬಿದ್ದರೆ ಅಭ್ಯರ್ಥಿಗಳು ಸೋಲುವ ಸ್ಥಿತಿ ಬರುತ್ತದೆ. ಇದನ್ನು ತಪ್ಪಿಸಲೆಂದೇ ಅರುಣ್‌ಸಿಂಗ್ ಹಠಾತ್ತನೆ ಬೆಂಗಳೂರಿಗೆ ಧಾವಿಸುತ್ತಿದ್ದಾರೆ.

ಮೂಲ ಮಂದಿರ ಚಲೋಗೆ ತಡೆ

ತಡೆದು ನಿಲ್ಲಿಸಿದರು. ಕಿರಂಗೂರು ವೃತ್ತದಿಂದ ಮುಂದೆ ಸಾಗದಂತೆ ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬ್ಯಾರಿಕೇಡ್ ಹಾಕಲಾಗಿತ್ತು. ಜೊತೆಗೆ ಕಾರ್ಯಕರ್ತರನ್ನು ಹಗ್ಗದ ಮೂಲಕ ನಿಯಂತ್ರಿಸಿದರು. ಬೈಕ್‌ನಲ್ಲಿ ಬಂದ ಯುವಕ ನೊಬ್ಬ ಜೈ ಶ್ರೀರಾಂ ಘೋಷಣೆ ಕೂಗುತ್ತಾ ಪಟ್ಟಣದ ಕಡೆಗೆ ಸಾಗಲು ಯತ್ನಿಸಿದ. ಎಚ್ಚೆತ್ತ ಪೊಲೀಸರು ಆತನನ್ನು ಬೆನ್ನತ್ತಿ ಹಿಡಿದರು. ಹೆದ್ದಾರಿ ಪಕ್ಕದ ಬನ್ನಿ ಮಂಟಪದತ್ತ ಪ್ರತಿಭಟನಾಕಾರರನ್ನು ಕರೆದೊಯ್ಯುವಲ್ಲಿ ಪೊಲೀಸರು ಯಶಸ್ವಿಯಾದರು. ಬನ್ನಿಮಂಟಪದಲ್ಲಿ ಬ್ಯಾರಿಕೇಡ್ ಅಳವಡಿಸಿ ಅತ್ತಿತ್ತ ಸುಳಿಯದಂತೆ ನಾಕಾಬಂಧಿ ಹಾಕಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಸ್ಥಳದಲ್ಲೇ ಮೊಕ್ಕಾಂ ಹೂಡಿ ಭದ್ರತೆ ಮೇಲ್ವಿಚಾರಣೆ ನಡೆಸಿದರು. ಪಟ್ಟಣದ ಕುವೆಂಪು ವೃತ್ತದಿಂದ ಜಾಮಿಯಾ ಮಸೀದಿಗೆ ಸಂಪರ್ಕ ಕಲ್ಪಿಸುವ ಮಾರ್ಗವನ್ನು ಬಂದ್ ಮಾಡಲಾಗಿತ್ತು. ವೆಲ್ಲೆಸ್ಲಿ ಸೇತುವೆಯಿಂದ ಮಸೀದಿಗೆ ತೆರಳುವ ಮಾರ್ಗವನ್ನು ಮುಚ್ಚಲಾಗಿತ್ತು. ಪಟ್ಟಣದ ಪೂರ್ವ ಕೋಟೆ ದ್ವಾರ, ಕೋಟೆ ಮತ್ತು ಬುರುಜುಗಳ ಮೇಲೆ ಪೊಲೀಸರನ್ನು ಕಾವಲಿರಿಸಲಾಗಿತ್ತು. ಅನುಮಾನ ಬಂದವರನ್ನು ತಡೆದು ವಾಪಸ್ ಕಳುಹಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಜಿಲ್ಲಾಡಳಿತ ಮತ್ತು ಪೊಲೀಸರು ಮೂಡಲಬಾಗಿಲು ಆಂಜನೇಯಸ್ವಾಮಿಯ ಮೂಲ ಸ್ಥಳವಾದ ಜಾಮಿಯಾ ಮಸೀದಿಯತ್ತ ತೆರಳಲು ನಮ್ಮನ್ನು ಬಿಟ್ಟಿಲ್ಲ. ಆದರೆ ಕಾನೂನು ಹೋರಾಟದ ಮೂಲಕ ಮೂಲ ಮಂದಿರವನ್ನು ನಮ್ಮ ಸುಪರ್ದಿಗೆ ಪಡೆದೇ ತೀರುತ್ತೇವೆ ಎಂದು ಬಜರಂಗಸೇನೆ ರಾಜ್ಯ ಸಂಚಾಲಕ ಬಿ.ಮಂಜುನಾಥ್ ಹೇಳಿದರು.

ಪ್ರತಿಭಟನಾಕಾರರ ಅಹವಾಲು ಆಲಿಸಿದ ಉಪ ವಿಭಾಗಾಧಿಕಾರಿ ಬಿ.ಸಿ. ಶಿವಾನಂದ ಮೂರ್ತಿ ಸಂಘಟನೆಗಳ ಬೇಡಿಕೆಗಳ ಕುರಿತು ಕಾನೂನಿನ ವ್ಯಾಪ್ತಿಯಲ್ಲಿ ಪರಿಶೀಲಿಸಲಾಗುವುದು. ಸ್ಮಾರಕದ ವಾರಸುದಾರಿಕೆ ಮತ್ತು ಅದರ ಐತಿಹ್ಯ ಕುರಿತು ಸಂಬಂಧಿಸಿದ ಇಲಾಖೆ ಜತೆಗೂ ಚರ್ಚಿಸಿ ಅಗತ್ಯ ಮಾಹಿತಿ ಪಡೆಯಲಾಗುವುದು ಎಂದು ಭರವಸೆ ನೀಡಿದರು. ತಹಶೀಲ್ದಾರ್ ಶ್ವೇತಾ ಎನ್.ರವೀಂದ್ರ ಹಾಜರಿದ್ದರು.

ಸಂಚಾರ ಅಸ್ತವ್ಯಸ್ತ: ಮೂಲ ಮಂದಿರ ಚಲೋ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ ಅಡ್ಡಿಪಡಿಸಿದ ಹಿನ್ನಲೆಯಲ್ಲಿ ಮಂಡ್ಯ, ಮೈಸೂರು ವಿವಿಧೆಡೆಗಳಿಂದ ಆಗಮಿಸಿದ ಹಿಂದೂಪರ ಕಾರ್ಯಕರ್ತರು ಕಿರಂಗೂರು ವೃತ್ತದ ಬಳಿ ಜಮಾಯಿಸಿದ್ದರಿಂದ ಕೆಲಕಾಲ ಮೈಸೂರು-ಬೆಂಗಳೂರು ಹೆದ್ದಾರಿ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಜಾಥಾ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಪೊಲೀಸರು ಸರ್ಪಗಾವಲು ಹಾಕಿದ್ದರು. ಅಲ್ಲದೇ ಪಟ್ಟಣ ಪ್ರವೇಶಿಸುವ ಎಲ್ಲಾ ರಸ್ತೆಗಳನ್ನು ಬಂದ್ ಮಾಡಿದ ಪರಿಣಾಮ ಹಾಗೂ ಮತ್ತೊಂದೆಡೆ ಹೆದ್ದಾರಿ ಸಂಚಾರ ಅಸ್ತವ್ಯಸ್ತವಾಗಿದ್ದರಿಂದ ಸಾರ್ವಜನಿಕರು ತಮ್ಮ ದೈನಂದಿನ ಕಾರ್ಯಗಳಿಗೆ ತೆರಳಲು ಪರದಾಡುವಂತಾಯಿತು. ಅಲ್ಲದೇ ರೈತರು ಕಷ್ಟಪಟ್ಟು ಬೆಳೆದ ಹಣ್ಣು ತರಕಾರಿ, ದವಸ ಧಾನ್ಯ ಮಾರಾಟಕ್ಕೆ ತೊಂದರೆಯಾಯಿತು.

ಮೈಸೂರು ಕೆಆರ್ ವೃತ್ತದ ನಾಲ್ವಡಿ ಪ್ರತಿಮೆಗೆ ಪುಷ್ಪ ನಮನ

- ಆಧುನಿಕ ಮೈಸೂರು ನಿರ್ಮಾತೃ ಸ್ಮರಿಸಿದ ಮೈಸೂರು ಜಿಲ್ಲಾಡಳಿತ, ವಿವಿಧ ಸಂಘ-ಸಂಸ್ಥೆಗಳು
- ನೂರಾರು ಜನಪರ ಯೋಜನೆ ಕೊಟ್ಟ ಶ್ರೇಯಸ್ಸು ಸಲ್ಲುತ್ತದೆ ; ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್



ಮೈಸೂರಿನ ಕೆಆರ್ ವೃತ್ತದಲ್ಲಿ ನಾಲ್ವಡಿ ಪ್ರತಿಮೆಗೆ ಶನಿವಾರ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ನೇತೃತ್ವದಲ್ಲಿ ಅಧಿಕಾರಿ ವರ್ಗ ಪುಷ್ಪ ನಮನ ಸಲ್ಲಿಸಿತು.



ಮೈಸೂರು ಅರಮನೆಯ ಆವರಣದಲ್ಲಿ ಅರಮನೆ ಮಂಡಳಿ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ನಾಲ್ವಡಿ ಜಯಂತಿಯಲ್ಲಿ ನಾಲ್ವಡಿ ಪುತ್ಥಳಿಗೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಹಾಗೂ ಸಿಬ್ಬಂದಿ ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಜೂ.4(ಪಿಎಂ)-ಆಧುನಿಕ ಮೈಸೂರು ನಿರ್ಮಾತೃ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜಯಂತಿ ಶನಿವಾರ ಮೈಸೂರಿನಲ್ಲಿ ಜಿಲ್ಲಾಡಳಿತದ ವತಿಯಿಂದ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲ್ಪಟ್ಟಿತು. ಜೊತೆಗೆ ವಿವಿಧ ಸಂಘ-ಸಂಸ್ಥೆಗಳು ನಾಲ್ವಡಿಯವರ ಜಯಂತಿ ಆಚರಿಸಿ, ಅವರ ಕೊಡುಗೆಗಳನ್ನು ಸ್ಮರಿಸಿದವು.

ನಾಲ್ವಡಿ ಜಯಂತಿ ಹಿನ್ನೆಲೆಯಲ್ಲಿ ಅವರ ಹೆಸರಿನ ಕೆಆರ್ ವೃತ್ತದಲ್ಲಿರುವ ನಾಲ್ವಡಿ ಪ್ರತಿಮೆಗೆ ಜಿಲ್ಲಾಡಳಿತ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ವತಿಯಿಂದ ಪುಷ್ಪ ನಮನ ಸಲ್ಲಿಸಿ, ಗೌರವ ಅರ್ಪಿಸಲಾಯಿತು. ಜಿಲ್ಲಾಡಳಿತದ ವತಿಯಿಂದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ನೇತೃತ್ವದಲ್ಲಿ ಅಧಿಕಾರಿ ವರ್ಗ, ನಾಲ್ವಡಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿತು. ಈ ವೇಳೆ ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಚೆನ್ನಪ್ಪ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಜರಿದ್ದರು.

ಗೌರವ ಸಲ್ಲಿಸಿದ ಸಚಿವರು: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೇರಿದಂತೆ ಜನಪ್ರತಿನಿಧಿಗಳು, ಮುಖಂಡರು ನಾಲ್ವಡಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಎಸ್.ಟಿ.ಸೋಮಶೇಖರ್, ರಾಜ್ಯದ ಆರೂವರೆ ಕೋಟಿ ಜನ ನೆನಪಿಸಿಕೊಳ್ಳಲೇಬೇಕಾದ ಮೇರು ವ್ಯಕ್ತಿತ್ವ ನಾಲ್ವಡಿಯವರು. ಕೆಆರ್‌ಎಸ್ ನಿರ್ಮಾಣ, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ ಸೇರಿದಂತೆ ನೂರಾರು ಜನಪರ ಯೋಜನೆಗಳನ್ನು ಕೊಟ್ಟ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ ಎಂದು ಸ್ಮರಿಸಿದರು.

ಇಂದಿನ ಸರ್ಕಾರಗಳು ಮಾಡಲಾಗದ ಜನಪರ ಕೆಲಸ-ಕಾರ್ಯಗಳನ್ನು ನಾಲ್ವಡಿ ಮಾಡಿ ತೋರಿಸಿದ್ದಾರೆ. ಆ ಮೂಲಕ ಅಭಿವೃದ್ಧಿಯ ಪರ್ವ ಸೃಷ್ಟಿಸಿದ್ದಾರೆ. ಅವರ ಜನಪರ ಕಾರ್ಯಗಳು ಸ್ಮರಣೀಯ ಎಂದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಶಾಸಕ ತನ್ವೀರ್‌ಸೇಠ್, ಅಂದಿನ ಮೈಸೂರು ಸಂಸ್ಥಾನದ ಅತ್ಯಂತ ಯಶಸ್ವಿ ದೊರೆ ನಾಲ್ವಡಿಯವರು. ಶೈಕ್ಷಣಿಕ, ಸಾಮಾಜಿಕ, ಆರೋಗ್ಯ ಸೇರಿದಂತೆ ಮೊದಲಾದ ಕ್ಷೇತ್ರಗಳಲ್ಲಿ ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಉತ್ತಮ ಆಡಳಿತ ನೀಡಿದ್ದಾರೆ ಎಂದು ಸ್ಮರಿಸಿದರು.

ಅವರ ಇಂದಿನ 138ನೇ ಜಯಂತಿಯಲ್ಲಿ ಅವರನ್ನು ಸ್ಮರಿಸುವ ಜೊತೆಗೆ ಸಾರ್ವಜನಿಕ ಸೇವೆಯಲ್ಲಿರುವ ನಮ್ಮಂತಹವರಿಗೆ ಅವರು ಮಾದರಿಯಾಗಬೇಕು. ಈಗ ಇರುವ ಅಥವಾ ಮುಂದೆ ಬರುವ ಯಾವುದೇ ಸರ್ಕಾರಗಳು ಅವರ ಹಾದಿಯಲ್ಲಿ ಸಾಗುವ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಬೇಕು ಎಂದು ಹೇಳಿದರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಸ್.ಎಸ್.ರಾಮದಾಸ್, ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಮತ್ತಿತರರು ಹಾಜರಿದ್ದರು.



ನಾಲ್ವಡಿ ಗೀತ ಗಾಯನ: ಕೆಆರ್ ವೃತ್ತದ ನಾಲ್ವಡಿ ಪ್ರತಿಮೆ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ನಾಲ್ವಡಿ ಸ್ಮರಣೆಯ ಗೀತ ಗಾಯನ ಕಾರ್ಯಕ್ರಮದಲ್ಲಿ ಪದ್ಮಪಾಣಿ ಲಲಿತಕಲಾ ಅಕಾಡೆಮಿ ತಂಡದಿಂದ ಗೀತೆಗಳನ್ನು ಸಾದರಪಡಿಸಲಾಯಿತು. ಜಯಶಂಕರ ಮೇಸ್ತ್ರಿ, ನಾರಾಯಣಸ್ವಾಮಿ, ಸಿಂಚನಾ, ವಿಶ್ವನಾಥ್, ಸಿದ್ದೇಶ್, ಡಾ.ನಿಂಗರಾಜು ಅವರ ತಂಡವು ನಾಲ್ವಡಿ ಗೀತೆಗಳನ್ನು ಸಾದರಪಡಿಸಿತು.

ಅರಮನೆ ಮಂಡಳಿ: ಮೈಸೂರು ಅರಮನೆಯ ಆವರಣದಲ್ಲಿ ಅರಮನೆ ಮಂಡಳಿ ವತಿಯಿಂದ ನಾಲ್ವಡಿ ಜಯಂತಿ ಆಚರಿಸಲಾಯಿತು. ನಾಲ್ವಡಿಯವರ ಪುತ್ಥಳಿಗೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ನೇತೃತ್ವದಲ್ಲಿ ಮಂಡಳಿಯ ಸಿಬ್ಬಂದಿಯಿಂದ ಪುಷ್ಪನಮನ ಸಲ್ಲಿಸಲಾಯಿತು. ಪ್ರತಿ ವರ್ಷದಂತೆ ಈ ವರ್ಷವೂ ಜಯಂತಿ ಆಚರಿಸಿ, ಸಿಹಿ ವಿತರಣೆ ಮಾಡಲಾಯಿತು. ತಳಿರು-ತೋರಣಗಳಿಂದ ಶೃಂಗಾರಗೊಂಡ ಆವರಣದಲ್ಲಿ ನಾಲ್ವಡಿ ಪುತ್ಥಳಿಗೆ ಪೂಜೆ ಸಲ್ಲಿಸಿ, ಮಂಗಳಾರತಿಯೊಂದಿಗೆ ವಿಶೇಷ ಗೌರವ ಸಲ್ಲಿಸಲಾಯಿತು. ಮಂಡಳಿಯ ಇಂಜಿನಿಯರ್‌ಗಳಾದ ವಿನೋದ್, ಶಿವಕುಮಾರ್, ಸಿಬ್ಬಂದಿಯಾದ ಗಂಗಾಧರ ಸ್ವಾಮಿ, ರಾಜೇಶ್ ಸೇರಿದಂತೆ ಇನ್ನಿತರ ಸಿಬ್ಬಂದಿ ಹಾಜರಿದ್ದರು.

ಆರೋಗ್ಯ, ಶಿಕ್ಷಣ, ಕೈಗಾರಿಕೆಗೆ ನಾಲ್ವಡಿ ಕೊಡುಗೆ ಅಪಾರ



ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಶನಿವಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಿಸಲಾಯಿತು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪ್ರಿನ್ಸಿಪಾಲ್ ಡಾ.ಕೆ. ದಾಕ್ಷಾಯಿಣಿ, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ನಂಜುಂಡಸ್ವಾಮಿ, ಸ್ಥಾನಿಕ ವೈದ್ಯಾಧಿಕಾರಿ ಡಾ. ರಾಜೇಶ್, ಮಕ್ಕಳ ತಜ್ಞಡಾ. ಬ್ರಹ್ಮೇಂದ್ರ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.4(ಆರ್‌ಕೆ)- ಆರೋಗ್ಯ, ಶಿಕ್ಷಣ, ಕೈಗಾರಿಕೆ, ಕೃಷಿ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರ ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪ್ರಾಂಶುಪಾಲರಾದ ಡಾ.ಕೆ.ಆರ್. ದಾಕ್ಷಾಯಿಣಿ ಹೇಳಿದರು.

ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಇಂದು ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಡವರಿಗೆ ಉಚಿತವಾಗಿ ಆರೋಗ್ಯ ಸೇವೆ ಒದಗಿಸಲೆಂದು ಕೆಆರ್, ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆಗಳನ್ನು ನಿರ್ಮಿಸಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಿರುವುದರಿಂದ ಈಗಲೂ ಲಕ್ಷಾಂತರ ಮಂದಿಗೆ ವೈದ್ಯಕೀಯ ಚಿಕಿತ್ಸೆ ಲಭ್ಯವಾಗುತ್ತಿದೆ ಎಂದು ಅವರು ನಾಲ್ವಡಿ ಅವರ ಸೇವೆಯನ್ನು ಸ್ಮರಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಸ್ಥಾಪಿಸಿ ಸಾಮಾನ್ಯ ವರ್ಗದವರಿಗೂ ವೈದ್ಯಕೀಯ ಶಿಕ್ಷಣ ನೀಡಿದ ನಾಲ್ವಡಿ ಅವರು, ಅದಕ್ಕೆ ಪೂರಕವಾಗಿ ಬೋಧನೆ ಮತ್ತು ಚಿಕಿತ್ಸೆಗೆ ಅನುಕೂಲವಾಗಲೆಂದು ಕೆಆರ್, ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆಗಳನ್ನು ಆರಂಭಿಸಿದ್ದರಿಂದ ಈ ನಾಡಿನ ರೋಗಿಗಳಿಗೆ ವರದಾನವಾಗಿದೆ ಎಂದು ನುಡಿದರು.

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ, ಮೈಸೂರು ಬ್ಯಾಂಕ್, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಶಿವನಸಮುದ್ರದ ವಿದ್ಯುತ್ ಉತ್ಪಾದನಾ ಘಟಕ, ಕೃಷ್ಣರಾಜಸಾಗರ ಅಣೆಕಟ್ಟೆ ಸೇರಿದಂತೆ ಹಲವು ಮಹತ್ವದ ಯೋಜನೆಗಳನ್ನು ನೀಡಿದ ಕೃಷ್ಣರಾಜ ಒಡೆಯರ್, ಇಡೀ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ್ದರು ಎಂದು ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಎಸ್. ನಂಜುಂಡಸ್ವಾಮಿ ನುಡಿದರು.

ಸ್ಥಾನಿಕ ವೈದ್ಯಾಧಿಕಾರಿ ಡಾ. ರಾಜೇಶ್ ಮಾತನಾಡಿ, ತಮ್ಮ ಆಳ್ವಿಕೆಯಲ್ಲಿ ಪ್ರಜೆಗಳ ಆಶೋತ್ತರಗಳಿಗೆ ಮನ್ನಣೆ ನೀಡಿ ಅನುಕೂಲ ಮಾಡಿಕೊಡುತ್ತಿದ್ದ ದೊರೆಯಾಗಿದ್ದ ನಾಲ್ವಡಿಯವರು ನಾಡಿನ ಜನರು ಸದಾ ನೆನಪಿನಲ್ಲಿರಿಸಿಕೊಳ್ಳುವಂತಹ ಕೊಡುಗೆ ನೀಡಿದ್ದಾರೆ. ಅವರು ಸ್ಥಾಪಿಸಿರುವ ಜನೋಪಯೋಗಿ ಸಂಸ್ಥೆಗಳನ್ನು ಉಳಿಸಿ ಸಂರಕ್ಷಿಸುವ ಅಗತ್ಯವಿದೆ ಎಂದು ತಿಳಿಸಿದರು.

ಮಕ್ಕಳ ತಜ್ಞಡಾ. ಬ್ರಹ್ಮೇಂದ್ರ ಕೆಆರ್. ಆಸ್ಪತ್ರೆ ಭದ್ರತಾ ಮೇಲ್ವಿಚಾರಕರಾದ ಎಂ. ಮಹದೇವು, ಎಲ್. ಮಹದೇವಸ್ವಾಮಿ, ಮಂಗಳಗೌರಿ, ಜಗದೀಶ್, ಆದಿಲಕ್ಷ್ಮಿ, ನರ್ಸಿಂಗ್ ಸೂಪರಿಂಟೆಂಡೆಂಟ್ ಮತ್ತು ಸಿಬ್ಬಂದಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು. ಚೆಲುವಾಂಬ, ಪಿಕೆಟಿಬಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವಿದ್ಯಾರ್ಥಿನಿಲಯಗಳಲ್ಲೂ ನಾಲ್ವಡಿಯವರ ಜಯಂತಿ ಆಚರಿಸಲಾಯಿತು.



ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 138ನೇ ಜನ್ಮದಿನಾಚರಣೆ ಅಂಗವಾಗಿ ಮೈಸೂರಿನ ಕೆ.ಆರ್.ವೃತ್ತದಲ್ಲಿರುವ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಪುಷ್ಪಾರ್ಚನೆ ಮಾಡಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಎಸ್.ಎನ್.ರಾಜೇಶ್, ಲೋಹಿತ್, ಕೃಷ್ಣರಾಜ ಯುವ ಬಳಗ ಅಧ್ಯಕ್ಷ ನವೀನ್ ಕೆಂಪಿ, ಮಹೇಂದ್ರ ಎಂ ಶೈವ, ರಂಗನಾಥ್, ಚಕ್ರಪಾಣಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು

ಮೈಸೂರು ವಿವಿ ಇತಿಹಾಸ ವಿಭಾಗ, ನಾಲ್ವಡಿ ಸಾಮಾಜಿಕ ಅಭಿವೃದ್ಧಿ ಅಧ್ಯಯನ ಕೇಂದ್ರದಿಂದ ನಾಲ್ವಡಿ ಜನ್ಮದಿನಾಚರಣೆ

ನಾಲ್ವಡಿಯವರ ಸಾಮಾಜಿಕ ನ್ಯಾಯದಿಂದ ಅಂದಿನ ಮೈಸೂರು 'ಮಾದರಿ ಸಂಸ್ಥಾನ'

ಕೇಂದ್ರದ ತಜ್ಞರ ಸಮಿತಿ ಸದಸ್ಯ ಡಾ.ಎಸ್.ನರೇಂದ್ರ ಪ್ರಸಾದ್



ಮೈಸೂರಿನ ಮಾನಸ ಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಶನಿವಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನಾಚರಣೆ ನಡೆಯಿತು.

ಮೈಸೂರು,ಜೂ.4(ಪಿಎಂ)- ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಆಡಳಿತದ ಜೊತೆಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯ ಎತ್ತಿ ಹಿಡಿದ ಹಿನ್ನೆಲೆಯಲ್ಲಿ ಅಂದು ಮೈಸೂರು 'ಮಾದರಿ ಸಂಸ್ಥಾನ'ವಾಗಿ ಹೊರಹೊಮ್ಮಿತು ಎಂದು ಮೈಸೂರು ವಿವಿಯ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಭಿವೃದ್ಧಿ ಅಧ್ಯಯನ ಕೇಂದ್ರದ ತಜ್ಞರ ಸಮಿತಿ ಸದಸ್ಯ ಡಾ.ಎಸ್.ನರೇಂದ್ರ ಪ್ರಸಾದ್ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿಯ ಮೈಸೂರು ವಿವಿಯ ಇತಿಹಾಸ ಅಧ್ಯಯನ ವಿಭಾಗದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ವಿಭಾಗ ಮತ್ತು ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಭಿವೃದ್ಧಿ ಅಧ್ಯಯನ ಕೇಂದ್ರದ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ನಾಲ್ವಡಿಯವರ 138ನೇ ಜನ್ಮದಿನಾಚರಣೆಯಲ್ಲಿ ನಾಲ್ವಡಿಯವರ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ನಾಲ್ವಡಿಯವರು ಪ್ರತಿಯೊಂದು ಸಮುದಾಯಕ್ಕೂ ಪ್ರಾಥಮಿಕ, ಪ್ರೌಢ, ಉನ್ನತ ಶಿಕ್ಷಣ ದೊರೆಯುವಂತೆ ಕಾರ್ಯಯೋಜನೆ ರೂಪಿಸಿ, ಅನುಷ್ಠಾನಗೊಳಿಸಿದರು. ಶೋಷಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ಶಿಕ್ಷಣದಿಂದ ವಂಚಿತವಾಗಿದ್ದ ಸಮುದಾಯಗಳಿಗೆ ಶಿಕ್ಷಣ ಪಡೆಯುವಂತೆ ಉತ್ತೇಜಿಸಿದರು. ಅದಕ್ಕಾಗಿ ದತ್ತಿನಿಧಿ, ವಿದ್ಯಾನಿಧಿ ಸ್ಥಾಪಿಸಿದರು. ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿಸಿ, ತಾಂತ್ರಿಕ ಶಾಲೆಗಳನ್ನು ತೆರೆದರು. ನಾಲ್ವಡಿಯವರ ಶೈಕ್ಷಣಿಕ ಕ್ರಾಂತಿಯೇ ಮುಂದೆ ಕೈಗಾರಿಕಾ ಕ್ರಾಂತಿಗೂ ದಾರಿ ಮಾಡಿತು ಎಂದರು.

ಶೋಷಿತ ಸಮುದಾಯಕ್ಕೆ 1919ರಲ್ಲೇ ಎಲ್ಲಾ ಶಾಲೆಗಳಲ್ಲಿ ಪ್ರವೇಶಾತಿ ನೀಡಬೇಕೆಂದು ನಿಯಮ ಜಾರಿಗೊಳಿಸಿದರು. ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಮಿಲ್ಲರ್ ಸಮಿತಿ ರಚಿಸಿ, ಅದರ ಶಿಫಾರಸ್ಸಿನಂತೆ ಶೋಷಿತ ಮತ್ತು ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ ಜಾರಿಗೊಳಿಸಿದರು. ಆಡಳಿತದಲ್ಲಿ ಖಾಲಿಯಿದ್ದ ಹುದ್ದೆಗಳನ್ನು ಹಿಂದುಳಿದ, ಶೋಷಿತ ಸಮುದಾಯದ ಅರ್ಹ ಅಭ್ಯರ್ಥಿಗಳಿಗೆ ನೀಡಿದರು ಎಂದು ತಿಳಿಸಿದರು. ಇತಿಹಾಸ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಕೆ.ಸದಾಶಿವ, ಪ್ರಾಧ್ಯಾಪಕ ಪ್ರೊ.ವೈ.ಹೆಚ್.ನಾಯಕವಾಡಿ ಮತ್ತಿತರರು ಹಾಜರಿದ್ದರು.

ಅರಸು ಮಂಡಳಿ ಸಂಘದಿಂದ ನಾಲ್ವಡಿ ಜಯಂತಿ

ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಹೆಸರು ನಾಮಕರಣ

ಪ್ರಧಾನಿ ಮೋದಿಯವರೇ ಘೋಷಿಸುವ ಸಾಧ್ಯತೆ : ಶಾಸಕ ಎಸ್.ಎ.ರಾಮದಾಸ್ ಮಾಹಿತಿ

ಮೈಸೂರು,ಜೂ.4(ಪಿಎಂ)- ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ ಮಾಡುವ ಸಂಬಂಧ ಪ್ರಧಾನಿ ನರೇಂದ್ರ ಮೋದಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಜೂ.21ರಂದು ಮೈಸೂರಿನಲ್ಲಿ ನಡೆಯುವ ಯೋಗ ದಿನಾಚರಣೆಯಲ್ಲಿ ಇದನ್ನು ಅವರೇ ಘೋಷಣೆ ಮಾಡುವ ಸಾಧ್ಯತೆ ಇದೆ ಎಂದು ಮಾಜಿ ಸಚಿವರೂ ಆದ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಅರಸು ಮಂಡಳಿ ಸಂಘದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಭವನದಲ್ಲಿ 'ನಾಡನ್ನಾಳಿದ ಮಹಾಪ್ರಭು ರಾಜರ್ಷಿ' ಶೀರ್ಷಿಕೆಯಡಿ ಸಂಘದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ನಾಲ್ವಡಿಯವರ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ನಾಮಕರಣ ಮಾಡಬೇಕೆಂಬುದು ಹಲವು ವರ್ಷಗಳ ಬೇಡಿಕೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೈಸೂರಿಗೆ ಆಗಮಿಸುತ್ತಿರುವ ಪ್ರಧಾನಿಗಳು, ಇದೇ ವೇಳೆ ನಿಲ್ದಾಣಕ್ಕೆ ನಾಲ್ವಡಿ ಹೆಸರು ನಾಮಕರಣ ವಿಚಾರವನ್ನು ಅವರೇ ಘೋಷಿಸುವ ಸಾಧ್ಯತೆ ಇದೆ ಎಂದರು.

ದೂರದರ್ಶಿತ್ವ ಹೊಂದಿದ್ದ ನಾಲ್ವಡಿಯವರು ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಿದರು. ಶಿಂಷಾದಿಂದ ಕೆಜಿಎಫ್‌ವರೆಗೂ ಅತೀ ಉದ್ದದ, ಕಡಿಮೆ ಖರ್ಚಿನ ವಿದ್ಯುತ್ ವಿತರಣಾ ಜಾಲ ಸ್ಥಾಪನೆ ಮಾಡಿದರು. ಮೈಸೂರು ಬ್ಯಾಂಕ್, ರೇಷ್ಮೆ ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆ ಸ್ಥಾಪನೆ ಸೇರಿದಂತೆ ನೂರಾರು ಅಭಿವೃದ್ಧಿ ಕಾರ್ಯಗಳಿಗೆ ನಾಂದಿ ಹಾಡಿದರು. ನಮ್ಮ ನಾಡನ್ನು ಆಳಿದ ಮಹಾರಾಜರಲ್ಲಿ ಅವರು ಅಗ್ರಸ್ಥಾನದಲ್ಲಿದ್ದಾರೆ ಎಂದು ಸ್ಮರಿಸಿದರು.

ಶೋಷಿತರು, ಹಿಂದುಳಿದವರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿದ ನಾಲ್ವಡಿ, ತಮ್ಮ ಸಾಮಾಜಿಕ ಕಳಕಳಿ ಮೆರೆದಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಎಲ್ಲಾ ವರ್ಗದ ಜನರ ಶ್ರೇಯೋಭಿವೃದ್ಧಿ ಆಗಬೇಕು. ಸಮಾಜದಲ್ಲಿ ಸಮಾನತೆ ಮೂಡಬೇಕು ಎಂಬ ಉದಾತ್ತ ಚಿಂತನೆ ಹೊಂದಿದ್ದರು. ಅಂತಹ ಮಹನೀಯರ ಸ್ಮರಣೆಯು ಕೇವಲ ಒಂದು ದಿನದ ಜಯಂತಿಗೆ ಸೀಮಿತವಾಗಬಾರದು ಎಂದರು.

ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷರಾದ ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಮುಖಂಡ ಎಂ.ಜಿ.ಆರ್.ಅರಸ್, ಸಂಘದ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಉಪಾಧ್ಯಕ್ಷರಾದ ಜಯದೇವ ರಾಜೇಅರಸ್, ಶ್ರೀಕಾಂತರಾಜೇಅರಸ್, ಕಾರ್ಯದರ್ಶಿ ಸುಮಾಅರಸ್ ಮತ್ತಿತರರು ಹಾಜರಿದ್ದರು.



ಸಾರೋಟಿನಲ್ಲಿ ನಾಲ್ವಡಿ ಚಿತ್ರಪಟ ಮೆರವಣಿಗೆ

ಅರಸು ಮಂಡಳಿ ಸಂಘದ ವತಿಯಿಂದ ಸಭಾ ಕಾರ್ಯಕ್ರಮದ ಬಳಿಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಚಿತ್ರಪಟದ ಮೆರವಣಿಗೆ ನಡೆಯಿತು. ನಾಲ್ವಡಿಯವರ ಚಿತ್ರಪಟವಿದ್ದ ಸಾರೋಟು ವಿವಿಧ ಜಾನಪದ ಕಲಾತಂಡಗಳ ನಡುವೆ ಸಾಗಿತು. ಸಂಘದ ಎದುರು ಆರಂಭಗೊಂಡ ಮೆರವಣಿಗೆಯು, ತ್ಯಾಗರಾಜ ರಸ್ತೆ, ಅಗ್ರಹಾರ ವೃತ್ತ, ಸಯ್ಯಾಜಿರಾವ್ ರಸ್ತೆಯಲ್ಲಿ ಸಾಗಿ, ಕೆಆರ್ ವೃತ್ತದಲ್ಲಿ ಸಮಾಪ್ತಿಗೊಂಡಿತು. ಬಳಿಕ ಇಲ್ಲಿನ ನಾಲ್ವಡಿ ಪ್ರತಿಮೆಗೆ ಪುಷ್ಪ ನಮನದ ಗೌರವ ಸಲ್ಲಿಸಲಾಯಿತು.

ಜಯಂತಿಗೆ ಸಾರ್ವತ್ರಿಕ ರಜೆ ಘೋಷಿಸಬೇಕು

ಸರ್ಕಾರ ನಾಲ್ವಡಿ ಜನ್ಮದಿನದಂದು ಸಾರ್ವತ್ರಿಕ ರಜೆ ಘೋಷಿಸಬೇಕು. ಜೊತೆಗೆ ಸರ್ಕಾರದ ವತಿಯಿಂದಲೇ ನಾಡಿನಾದ್ಯಂತ ಅವರ ಜಯಂತಿ ಆಚರಣೆಗೆ ಕ್ರಮ ವಹಿಸಬೇಕು. ಇದಕ್ಕಾಗಿ ಎಲ್ಲರೂ ಸರ್ಕಾರಕ್ಕೆ ಮನವಿ ಸಲ್ಲಿಸುವ ಅಗತ್ಯವಿದೆ.

-ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ

ಮೈಸೂರು ಮಿತ್ರ ಭಾನುವಾರ 5 ಜೂನ್ 2022

ತಿ.ನರಸೀಪುರದಲ್ಲಿ ವಿಜೃಂಭಣೆಯ ಹನುಮ ಜಯಂತಿ

● ಪಟ್ಟಣದೆಲ್ಲೆಡೆ ಮೊಳಗಿದ ಜೈ ಭಜರಂಗಿ... ಘೋಷಣೆ ● ಆಂಜನೇಯಸ್ವಾಮಿಗೆ ಭಕ್ತರಿಂದ ವಿಶೇಷ ಪೂಜೆ ಸಲ್ಲಿಕೆ ● ಅದ್ಧೂರಿ ಮೆರವಣಿಗೆ; ಜಾನಪದ ಕಲಾತಂಡಗಳು ಭಾಗಿ ● ಬಿಗಿ ಪೊಲೀಸ್ ಬಂದೋಬಸ್ತ್

ತಿ.ನರಸೀಪುರ, ಜೂ.4(ಎಸ್‌ಕೆ)– ಪಟ್ಟಣದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ ಶ್ರೀವೀರಾಂಜನೇಯ ಧರ್ಮ ಜಾಗೃತಿ ಬಳಗ ಶನಿವಾರ ಆಯೋಜಿಸಿದ್ದ ಹನುಮ ಜಯಂತಿ ಉತ್ಸವಕ್ಕೆ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಮುಂಭಾಗ ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ಅಶ್ವಿನ್‌ಕುಮಾರ್ ಚಾಲನೆ ನೀಡಿದರು.

ಉತ್ಸವದ ಮೆರವಣಿಗೆಗೆ ಪೂಜಾ ಕುಣಿತ, ವೀರಗಾಸೆ, ಡೊಳ್ಳು ಕುಣಿತ, ದೇವರ ಕುಣಿತ ಸೇರಿದಂತೆ ವಿವಿಧ ಜಾನಪದ ಪ್ರಕಾರಗಳು ಕಳೆ ತಂದವು. ಹನುಮನ ಉತ್ಸವ ಮೂರ್ತಿ ಮೆರವಣಿಗೆ ಪಟ್ಟಣದ ವಿಶ್ವಕರ್ಮ ಬೀದಿ, ಭಗವಾನ್ ವೃತ್ತ, ಪುರಸಭಾ ರಸ್ತೆ, ತಾಲೂಕು ಕಚೇರಿ ರಸ್ತೆ, ವಿದ್ಯೋದಯ ಸರ್ಕಲ್, ಜೋಡಿ ರಸ್ತೆ, ಖಾಸಗಿ ಬಸ್ ನಿಲ್ದಾಣ, ಲಿಂಕ್ ರಸ್ತೆ ಮೂಲಕ ಸಾಗಿ ಗುಂಜಾ ನರಸಿಂಹಸ್ವಾಮಿ ದೇವಾಲಯಕ್ಕೆ ವಾಪಾಸಾಗುವ ಮೂಲಕ ಕೊನೆಗೊಂಡಿತು.

ವಿಶೇಷ ಪೂಜೆ: ಇದಕ್ಕೂ ಮುನ್ನ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ಪಂಡಿತ್ ಪವನ್ ಕುಮಾರ್ ನೇತೃತ್ವದಲ್ಲಿ ತಾರಕ



ಹೋಮ ನಡೆಯಿತು. ಭಕ್ತರು ವಿವಿಧ ಧಾರ್ಮಿಕ ಕೈಂಕರ್ಯಗಳೊಂದಿಗೆ ಸಂಕಲ್ಪ ಸೇವೆ ಕೈಗೊಂಡರು.

ಬಿಗಿ ಬಂದೋಬಸ್ತ್: ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್ ಮಾರ್ಗದರ್ಶನದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್, ಕೆ.ಆರ್.ನಗರ ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಆರ್.ಲವ, ನಂಜನಗೂಡು ಡಿವೈಎಸ್‌ಪಿ ಗೋವಿಂದರಾಜು, ತಿ.ನರಸೀಪುರ ಠಾಣೆ ಇನ್ಸ್‌ಪೆಕ್ಟರ್ ಕೃಷ್ಣಪ್ಪ, ಎಸ್‌ಐ ತಿರುಮಲೇಶ್ ನೇತೃತ್ವದಲ್ಲಿ 150 ಮಂದಿ ಪೊಲೀಸರು ಹಾಗೂ ಕೆಎಸ್‌ಆರ್‌ಪಿ ತುಕುಡಿ ನಿಯೋಜಿಸುವ ಮೂಲಕ ಪಟ್ಟಣದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಈ ವೇಳೆ ವೀರಾಂಜನೇಯ ಧರ್ಮ ಜಾಗೃತಿ ಬಳಗದ ರಾಮಾನುಜ, ಬೇಕರಿ ಚೇತನ್, ಚೇತನ್‌ಶೆಟ್ಟಿ, ಮೋಹನ್ ಕುಮಾರ್, ಗೋಪಾಲ್, ಪುರಸಭಾ ಸದಸ್ಯ ಕಿರಣ್, ಗ್ರಾಪಂ ಸದಸ್ಯ ಮಹದೇವಸ್ವಾಮಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ತೋಟದಪ್ಪ ಬಸವರಾಜು, ಆಲಗೂಡು ವೆಂಕಟರಮಣ ಶೆಟ್ಟಿ, ಶಿವಕುಮಾರ್ (ಬಡ್ಡು) ಕೆಬ್ಬೆಹುಂಡಿ ಶಿವಕುಮಾರ್, ಶಿವು, ಸಿ.ಬಿ.ಹುಂಡಿ ಸಿದ್ದು ಸೇರಿದಂತೆ ಸಾವಿರಾರು ಭಕ್ತರು ಇದ್ದರು.

ಕುಣಿದು ಕುಪ್ಪಳಿಸಿದ ಯುವಕರು

ಮೆರವಣಿಗೆ ವೇಳೆ ನೂರಾರು ಯುವಕರು ಕೇಸರಿ ಬಣ್ಣದ ಟೀ–ಷರ್ಟ್ ಧರಿಸಿ, ಡೋಲು, ಡೊಳ್ಳಿನ ಸದ್ದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಮೆರವಣಿಗೆಯುದ್ದಕ್ಕೂ ಜೈ ಶ್ರೀರಾಮ್, ಜೈ ಭಜರಂಗಿ ಎಂಬಿತ್ಯಾದಿ ಘೋಷಣೆ ಕೂಗುವ ಮೂಲಕ ಕುಣಿದು ಕುಪ್ಪಳಿಸಿದರು. ಹನುಮ ಜಯಂತಿ ಅಂಗವಾಗಿ ಪಟ್ಟಣದಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಮೆರವಣಿಗೆ ಸಾಗುವ ರಸ್ತೆಗಳನ್ನು ಕೇಸರಿ ಬಣ್ಣದ ಬಂಟಿಂಗ್ಸ್, ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಭಕ್ತರು ಶ್ರದ್ಧಾಭಕ್ತಿಯಿಂದ ಆಂಜನೇಯ ಮೂರ್ತಿಗೆ ಪೂಜೆ ಸಲ್ಲಿಸಿ ಭಕ್ತಿಭಾವ ಮೆರೆದರು.



ಸರಗೂರು ತಾಲೂಕಿನ ಬಿದರಹಳ್ಳಿ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ರಕ್ಷಣಾ ಸೇವಾ ಟ್ರಸ್ಟ್‌ನ ಸಂಸ್ಥಾಪಕರಾದ ಚಂದ್ರಿಕಾ ದೊರೆಸ್ವಾಮಿ ಅವರು ನೋಟ್‌ಬುಕ್, ಪೆನ್ ವಿತರಿಸಿದರು. ಈ ವೇಳೆ ಗ್ರಾಪಂ ಸದಸ್ಯ ವಿಜಯ್‌ಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಪ್ರಕಾಶ್, ಸದಸ್ಯರಾದ ರಾಜು, ನಾಗೇಂದ್ರ, ಚಿಕ್ಕಣ್ಣ, ಮಹದೇವ, ಸೃಷ್ಟಿ, ಮುಖ್ಯ ಶಿಕ್ಷಕ ಎಸ್.ಶಂಕರ್, ಶಿಕ್ಷಕರಾದ ವಿನುತಾ, ಮೀನಾಕ್ಷಿ, ಚಂದನಾ, ಆಶಾ, ಕಲಾವಿದ ಕುಮಾರ್, ಅಜಯ್‌ಕುಮಾರ್, ಗ್ರಾಮಸ್ಥರು ಇದ್ದರು.

ಬನ್ನಮ್ಮನ ಕೆರೆಗೆ ಬಾಗಿನ ಅರ್ಪಣೆ



ಹುಣಸೂರು, ಜೂ.4 (ಕೆಕೆ)– ತಾಲೂಕಿನ ಬನ್ನಿಕುಪ್ಪೆಯಲ್ಲಿನ ಬನ್ನಮ್ಮನ ಕೆರೆಗೆ ತುಂಬಿದ ಕಾರಣ ಶನಿವಾರ ಗ್ರಾಮದ ಮುಖಂಡರು ಮತ್ತು ಗ್ರಾಮಸ್ಥರು ಬಾಗಿನ ಅರ್ಪಿಸಿದರು. ಕಾರ್ಯಕ್ರಮದಲ್ಲಿ 7 ಹಳ್ಳಿಯ ಯಜಮಾನರಾದ ಕೂಸಪ್ಪ, ಗ್ರಾಪಂ ಅಧ್ಯಕ್ಷೆ ಹೆಚ್.ಕೆ.ಬೇಬಿ, ಸದಸ್ಯರಾದ ನಿಂಗೇಗೌಡ, ಎಂ.ಎನ್.ಬಸವರಾಜು, ಕಾಂಗ್ರೆಸ್ ಮುಖಂಡ ಲೋಕೇಶ್ ನಾಯಕ್, ಸುತ್ತು 7 ಹಳ್ಳಿಯ ಯಜಮಾನರು ಗ್ರಾಮಸ್ಥರು ಇದ್ದರು.

ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಬೆಂಬಲಿಸಿ: ಸಿ.ಎನ್.ಮಂಜೇಗೌಡ ಮನವಿ

ಹೆಚ್.ಡಿ.ಕೋಟೆ, ಜೂ.4(ಮಂಜು)– ಪದವೀಧರರು, ಶಿಕ್ಷಕರ ಅಭಿವೃದ್ಧಿ ವಿಚಾರದಲ್ಲಿ ಉತ್ತಮ ಕೆಲಸಗಳನ್ನು ಮಾಡುವಂತ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಮೊದಲ ಪ್ರಾಶಸ್ತ್ಯದ ಮತನೀಡಿ ಬೆಂಬಲಿಸಬೇಕು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮನವಿ ಮಾಡಿದರು.

ಪಟ್ಟಣದ ತಾಲೂಕು ಪತ್ರಕರ್ತರ ಸಂಘದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 5ನೇ ಮತ್ತು 6ನೇ ವೇತನ ಆಯೋಗದಲ್ಲಿ 28 ಪರ್ಸೆಂಟ್ ವೇತನ ಹೆಚ್ಚಿಸುವ ವಿಚಾರದಲ್ಲಿ ಹೆಚ್.ಕೆ.ರಾಮು ಅವರು ಅತಿ ಹೆಚ್ಚುಶ್ರಮವಹಿಸಿದ್ದಾರೆ ಎಂದರು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದು, ಭರ್ತಿ ಮಾಡುವುದರಲ್ಲಿ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದರೆ ವಿದ್ಯಾವಂತ ನಿರುದ್ಯೋಗಿ ಪದವೀಧರರಿಗೆ 10ಸಾವಿರ ಗೌರವಧನ ನೀಡಲಾಗುತ್ತದೆ. ಹಾಗಾಗಿ ಪಕ್ಷದ ಅಭ್ಯರ್ಥಿ ಹೆಚ್.ಕೆ.ರಾಮು ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.



ಬಿಜೆಪಿ ಸರ್ಕಾರದಲ್ಲಿ ಸರ್ಕಾರಿ ನೌಕರ ನೇಮಕಾತಿ ಮಾಡಿಕೊಳ್ಳುವ ವಿಚಾರದಲ್ಲಿ ಬಾರಿ ಹಗರಣ ನಡೆದಿದೆ. ಮುಂದಿನ ದಿನಗಳಲ್ಲಿ ನಿರುದ್ಯೋಗಿ ಪದವೀಧರರಿಗೆ, ಶಿಕ್ಷಕರಿಗೆ ಯಾವ ಮಟ್ಟದಲ್ಲಿ ಅನುಕೂಲ ಮಾಡಿ ಕೊಡುತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಯಾವುದೇ ಹಕ್ಕನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಹೋರಾಟ ಮಾಡಿದರೆ, ಅದನ್ನು ಕಿತ್ತುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಜಾತಿ–ಜಾತಿಗಳ ನಡುವೆ ಹಾಗೂ ಪಕ್ಷಗಳ ಮಧ್ಯೆ ಹೊಡೆದಾಟ ಮಾಡಿಸುವ ಕೆಲಸದಲ್ಲಿ ಸರ್ಕಾರ ಮುಂದಾಗಿದೆ ಎಂದ ದೂರಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಜಿಲ್ಲಾ ಅಧ್ಯಕ್ಷೆ ಬೃಂದಾ ಕೃಷ್ಣೇಗೌಡ, ಜೆಡಿಎಸ್ ತಾಲೂಕು ಅಧ್ಯಕ್ಷ ರಾಜೇಂದ್ರ, ಗೋಪಾಲಸ್ವಾಮಿ, ಯುವ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಟಿ.ಕುಮಾರ್, ಜೆಡಿಎಸ್ ಮುಖಂಡ ಕುಮಾರಸ್ವಾಮಿ, ತಾಲೂಕು ಮಹಿಳಾ ಘಟಕದ ಅಧ್ಯಕ್ಷರಾದ ಗಾಯತ್ರಿ, ಸವಿತಾ ಇತರರಿದ್ದರು.

> “ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷನಾಗಿ, ನೌಕರರ ಪರವಾಗಿ ಉತ್ತಮ ಕೆಲಸಗಳನ್ನು ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಪದವೀಧರ ಮತ್ತು ಶಿಕ್ಷಕರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲು ಪದವೀಧರರು ಮೊದಲ ಪ್ರಾಶಸ್ತ್ಯ ಮತವನ್ನು ನನಗೆ ನೀಡಬೇಕು.
> -**ಹೆಚ್.ಕೆ.ರಾಮು**, ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

ಶಿಕ್ಷಕರು, ಉಪನ್ಯಾಸಕರ ಸಮಸ್ಯೆಗಳ ಬಗ್ಗೆ ಅರಿವಿರುವ

ಜಿ.ಎಂ.ಮಧು ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ

ಶಾಸಕ ಯತೀಂದ್ರ ಸಿದ್ದರಾಮಯ್ಯ ಮನವಿ



ತಿ.ನರಸೀಪುರ, ಜೂ.4(ಎಸ್‌ಕೆ)– ಗ್ರಾಮೀಣ ಲಕ್ಷಾಂತರ ಬಡ ಮಕ್ಕಳಿಗೆ ತಮ್ಮ ಶಿಕ್ಷಣ ಸಂಸ್ಥೆ ಮೂಲಕ ಶಿಕ್ಷಣ ನೀಡುತ್ತಾ ಶಿಕ್ಷಕರು, ಉಪನ್ಯಾಸಕರ ಸಮಸ್ಯೆಗಳ ಬಗ್ಗೆ ಅರಿವಿರುವ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಅವರ ಗೆಲುವಿಗೆ ಮುನ್ನುಡಿ ಬರೆಯುವಂತೆ ಶಾಸಕ ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿದರು.

ಪಟ್ಟಣದ ಭೈರಾಪುರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ವಿದ್ಯೋದಯ ಪದವಿಪೂರ್ವ ಕಾಲೇಜು, ಸಂತೇಮಾಳದ ಸರ್ಕಾರಿ ಪದವಿ ಪೂರ್ವ ಕಾಲೇಜು, ಪಿಆರ್‌ಎಂ ಹಾಗೂ ಗರ್ಗೇಶ್ವರಿ ಹಿಲಾಲ್ ಪದವಿ ಪೂರ್ವ ಕಾಲೇಜುಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಪದವೀಧರ ಮತದಾರರಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ರೈತ ಹೋರಾಟಗಾರ ಜಿ.ಮಾದೇಗೌಡರ ಪುತ್ರರಾಗಿರುವ ಮಧು ಜಿ.ಮಾದೇಗೌಡರು ತಮ್ಮ ತಂದೆ ತೆರೆದ ಶಿಕ್ಷಣ ಸಂಸ್ಥೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿರುವುದರಿಂದ ಅವರಿಗೆ ಶಿಕ್ಷಕರು, ಉಪನ್ಯಾಸಕರು ಹಾಗೂ ಪದವೀಧರರ ಸಮಸ್ಯೆಗಳ ಬಗ್ಗೆ ಬಗ್ಗೆ ಅರಿವಿದೆ. ಹಾಗಾಗಿ ಈ ಬಾರಿಯ ಚುನಾವಣೆಯಲ್ಲಿ ಇವರನ್ನು ಗೆಲ್ಲಿಸಿದರೆ ಪದವೀಧರರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಹಿತಾಸಕ್ತಿ ಕಾಪಾಡುವ ಕೆಲಸ ಮಾಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಂತರ ಗರ್ಗೇಶ್ವರಿ ಎ.ಜೆ.ಫಂಕ್ಷನ್ ಹಾಲ್‌ನಲ್ಲಿ ನಡೆದ ಮತದಾರರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಪಕ್ಷದ ಅಭ್ಯರ್ಥಿ ಪರ ಮತಯಾಚಿಸಿದರು. ಈ ವೇಳೆ ಪುರಸಭಾ ಅಧ್ಯಕ್ಷ ಎಸ್.ಮದನ್ ರಾಜ್, ಮಾಜಿ ಅಧ್ಯಕ್ಷ ಸೋಮು, ಸದಸ್ಯರಾದ ನಂಜುಂಡಸ್ವಾಮಿ, ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಜಿಪಂ ಮಾಜಿ ಸದಸ್ಯ ಮಹದೇವು, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ರಮೇಶ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವಕ್ತಾರ ಹುಣಸೂರು ಬಸವಣ್ಣ, ಮೂಗೂರು ಕುಮಾರಸ್ವಾಮಿ, ಪುಟ್ಟಬುದ್ದಿ, ಅಮ್ಜದ್ ಖಾನ್, ಸ್ವಾಮಿ, ಅಮಾಸೆ ನಿಂಗರಾಜು, ಆಲಗೂಡು ನಾಗರಾಜು ಮತ್ತಿತರರಿದ್ದರು.

ಬಿಜೆಪಿ ಅಭ್ಯರ್ಥಿ ಪರ ರಘು ಕೌಟಿಲ್ಯ ಮತಯಾಚನೆ



ಹೆಚ್.ಡಿ.ಕೋಟೆ, ಜೂ.4– ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ತಾಲೂಕಿನ ಚಂದ್ರಮೌಳೇಶ್ವರ ಶಾಲೆ ಸೇರಿದಂತೆ ವಿವಿಧೆಡೆ ಶನಿವಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ನಿಕಟಪೂರ್ವ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಮತಯಾಚಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಹಂಚೀಪುರ ಗುರುಸ್ವಾಮಿ, ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ಎಸ್.ಸಿ.ಮೋರ್ಚಾ ಅಧ್ಯಕ್ಷ ರಾಜು, ರಾಜ್ಯ ಮಹಿಳಾ ಮೋರ್ಚಾ ಕಾರ್ಯದರ್ಶಿ ನಂದಿತಾ ಶರ್ಮ, ಓಬಿಸಿ ಮೋರ್ಚಾ ಅಧ್ಯಕ್ಷ ಸೋಮಾಚಾರ್, ಮುಖಂಡರಾದ ದೀಪು, ಚಂದ್ರಮೌಳಿ, ಮಾದೇಶ್, ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

ಪದವೀಧರರ ಸಮಸ್ಯೆ ನಿವಾರಣೆಗೆ ಬಿಜೆಪಿ ಅಭ್ಯರ್ಥಿ ಗೆಲ್ಲಿಸಿ



ಮಲ್ಕುಂಡಿ, ಜೂ.4 (ಚನ್ನಪ್ಪ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಗೆಲ್ಲಿಸಬೇಕು ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ಸಮೀಪದ ಹಲ್ಲರೆ ಹಾಗೂ ಹುರ, ಹಾಡ್ಯ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ತೆರಳಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದು ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಗೆಲ್ಲಿಸಬೇಕಿದೆ. ಪ್ರಧಾನಿ ಮೋದಿಯವರು ಕೇಂದ್ರದಲ್ಲಿ ಉತ್ತಮ ಆಡಳಿತ ನೀಡಿದ್ದಾರೆ. ಪದವೀಧರ ಸಮಸ್ಯೆಗಳ ನಿವಾರಣೆಗಾಗಿ ಬಿಜೆಪಿ ಬೆಂಬಲಿಸಿ ಎಂದು ಮನವಿ ಮಾಡಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಎಸ್.ಎಂ.ಕೆಂಪಣ್ಣ, ಗ್ರಾಪಂ ಅಧ್ಯಕ್ಷರಾದ ಚಂದ್ರು, ಮಹದೇವಸ್ವಾಮಿ, ಮುಖಂಡ ಶಂಕರ್, ಎಂ.ಪುಟ್ಟಸ್ವಾಮಿ ಸೇರಿದಂತೆ ಇತರರಿದ್ದರು.

ಜೆಡಿಎಸ್ ಅಭ್ಯರ್ಥಿ ಗೆಲುವಿಗೆ ಶ್ರಮಿಸಲು ಸಲಹೆ

ಪಿರಿಯಾಪಟ್ಟಣ, ಜೂ.4(ವೀರೇಶ್)– ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ತಾಲೂಕಿನಿಂದ ಹೆಚ್ಚು ಮತಗಳು ಚಲಾವಣೆಯಾಗುವ ನಿಟ್ಟಿನಲ್ಲಿ ಪಕ್ಷದ ಮುಖಂಡರು ಕಾರ್ಯಕರ್ತರು ಕರ್ತವ್ಯ ನಿರ್ವಹಿಸಬೇಕು ಎಂದು ಶಾಸಕ ಕೆ.ಮಹದೇವ್ ಹೇಳಿದರು. ಪಟ್ಟಣದ ಮಂಜುನಾಥ ಸಮುದಾಯ ಭವನದಲ್ಲಿ ನಡೆದ ದಕ್ಷಿಣ ಪದವೀಧರ ಚುನಾವಣೆ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಕಾರ್ಯಕರ್ತರು ಹೆಚ್.ಕೆ ರಾಮು ಅವರ ಗೆಲುವಿಗೆ ಶ್ರಮಿಸಬೇಕು ಎಂದರು. ಸಭೆಯಲ್ಲಿ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಚುನಾವಣಾ ಉಸ್ತುವಾರಿ ಎಂ.ಟಿ.ಕುಮಾರ್, ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಬೃಂದಾ, ನಂದಿನಿ, ಜ್ಯೋತಿ, ಸುಜಾತಾ, ಆಶಾ, ಪ್ರೀತಿಅರಸ್, ಮುಖಂಡರಾದ ಹೇಮಂತ್‌ಕುಮಾರ್, ಕೆ.ಮಹೇಶ್, ಪಿ.ಸಿ.ಕೃಷ್ಣ, ಪ್ರಕಾಶ್ ಸಿಂಗ್, ಟಿ.ಈರಯ್ಯ, ಎ.ಟಿ.ರಂಗಸ್ವಾಮಿ, ಮೋಹನ್‌ರಾಜ್, ನವೀನ್ ಆಲನಹಳ್ಳಿ, ಚಂದ್ರಶೇಖರಯ್ಯ, ಟಿ.ರಾಜು, ಯತಿರಾಜೇಗೌಡ, ಬಿ.ವಿ.ಗಿರೀಶ್, ರವಿಕುಮಾರ್ ಇದ್ದರು.



ವರದಕ್ಷಿಣೆ ಕಿರುಕುಳ ಗೃಹಿಣಿ ಆತ್ಮಹತ್ಯೆ

ಬೆಟ್ಟದಪುರ, ಜೂ.4(ಶಿವದೇವ್)– ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಗೃಹಣಿಯೊಬ್ಬಳು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಕಿತ್ತೂರು ದೊಡ್ಡೇಗೌಡನಕೊಪ್ಪಲು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಬಸವರಾಜು ಅಲಿಯಾಸ್ ಪ್ರದೀಪ್ ಅವರ ಪತ್ನಿ ನಿವಾಸಿ ಶ್ವೇತಾ(23) ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ. ಈಕೆ ಕೆಲ್ಲೂರು ಗ್ರಾಮದವರಾಗಿದ್ದು ಕಳೆದ 2 ವರ್ಷಗಳ ಹಿಂದೆ ಕಿತ್ತೂರು ದೊಡ್ಡೇಗೌಡನಕೊಪ್ಪಲು ಗ್ರಾಮದ ನಿವಾಸಿ ಸರೋಜಮ್ಮ ಮತ್ತು ಚಿಕ್ಕೇಗೌಡರ ಮಗನಾದ ಪ್ರದೀಪ್‌ನೊಂದಿಗೆ ವಿವಾಹವಾಗಿದ್ದರು.

ಮದುವೆಯಾದಾಗಿನಿಂದ ಅತ್ತೆ ಸರೋಜಮ್ಮ ಮತ್ತು ಪತಿ ಪ್ರದೀಪ್ ವರದಕ್ಷಿಣೆ ತರುವಂತೆ ಶ್ವೇತಾಗೆ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ಶ್ವೇತಾ ಒಮ್ಮೆ ಕಾಲುವೆಗೆ ಹಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರು, ಆ ವೇಳೆ ಗ್ರಾಮದ ಮುಖಂಡರು ರಾಜಿ ಪಂಚಾಯಿತಿ ಮಾಡಿ, ಬುದ್ಧಿವಾದ ಹೇಳಿ ಕಳುಹಿಸಿದ್ದರು.

ಆದರೆ, ಗರ್ಭಿಣಿಯಾದ ಶ್ವೇತಾಳನ್ನು ವರದಕ್ಷಿಣೆ ತರಲಿಲ್ಲವೆಂದು ಅವರ ತಾಯಿಯ ಮನೆಗೂ ಕಳುಹಿಸದೇ ವರದಕ್ಷಿಣೆ ತರುವಂತೆ ಅತ್ತೆ, ಪತಿ ಹಾಗೂ ನಾದಿನಿ ಲತಾ ಹಿಂಸೆ ನೀಡುತ್ತಿದ್ದರು. ಇದರಿಂದ ಮನನೊಂದು ಶ್ವೇತ ಜೂ.1 ರಂದು ವಿಷ ಸೇವಿಸಿದ್ದಾರೆ. ಕೂಡಲೇ ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾದರೂ, ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಮುಂಜಾನೆ ಸಾವನ್ನಪ್ಪಿದ್ದಾರೆ ಎಂದು ಶ್ವೇತಾಳ ತಂದೆ ಲೋಕೇಶ್ ದೂರಿನಲ್ಲಿ ತಿಳಿಸಿದ್ದಾರೆ. ಮೃತಳಿಗೆ ಒಂದೂವರೆ ವರ್ಷದ ಗಂಡು ಮಗುವಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವರಾಜು, ಸರೋಜಮ್ಮ, ಪ್ರದೀಪ್ ಹಾಗೂ ಲತಾ ವಿರುದ್ಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಂತಿ, ನೆಮ್ಮದಿಗೆ ಬಸವಣ್ಣನವರ ತತ್ವಾದರ್ಶ ಮೈಗೂಡಿಸಿಕೊಳ್ಳಿ

ತುಮಕೂರು ಶ್ರೀಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಸಲಹೆ

ನಂಜನಗೂಡು, ಜೂ.4(ಸುದರ್ಶನ್)– ಆಧುನಿಕ ಬದುಕಿನಲ್ಲಿ ಶಾಂತಿ, ನೆಮ್ಮದಿ ಕಡಿಮೆಯಾಗಿದ್ದು, ಅವುಗಳನ್ನು ಕಂಡುಕೊಳ್ಳಲು ಬಸವಣ್ಣನವರ ವಚನದ ಸಾರ, ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದು ತುಮಕೂರು ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಸಲಹೆ ನೀಡಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಏರ್ಪಡಿಸಿದ್ದ ವಿಶ್ವಗುರು ಬಸವೇಶ್ವರ ಜಯಂತಿ ಮಹೋತ್ಸವದಲ್ಲಿ ಅವರು ಮಾತನಾಡಿದರು.

ಬಸವಣ್ಣ ಒಂದೇ ಜಾತಿ, ಧರ್ಮ, ಭಾಷೆಗೆ ಸೀಮಿತವಾದವರಲ್ಲ. ಇಡೀ ಮನುಕುಲಕ್ಕೆ ಸೇರಿದವರು. ಅವರ ಬದುಕು ನಮ್ಮೆಲ್ಲರ ಜೀವನದ ಕನ್ನಡಿಯಿದ್ದಂತೆ. ನಮ್ಮನ್ನು ನಾವು ಸರಿಪಡಿಸಿಕೊಂಡು ಮುನ್ನಡೆಯಬೇಕು. ಬಸವಣ್ಣರವರು ಅದ್ಭುತ ಪ್ರಾಣಸ್ಥಳವಿದ್ದಂತೆ. ಅವರ ಸಪ್ತ ಸೂತ್ರಗಳು, ವಚನಗಳು ಎಲ್ಲರ ಬಾಳಿಗೆ ಬೆಳಕಾಗಿದೆ. ಬಸವಣ್ಣ ಜಗದ ಉತ್ಸಾಹ ಅಂತೆಯೇ ನಂಜನಗೂಡಿನಲ್ಲಿ ಶ್ರದ್ಧಾಭಕ್ತಿಯಿಂದ ಅವರ ಜಯಂತಿ ಆಚರಣೆ ಮಾಡುತ್ತಿರುವುದು ಸಂತಸದ ವಿಚಾರ. ಅವರನ್ನು ಜಯಂತಿಗೆ ಮಾತ್ರ ಸೀಮಿತಗೊಳಿಸದೆ ಅವರ ತತ್ವಆದರ್ಶಗಳನ್ನು ಮೈಗೂಡಿಸಿಕೊಳ್ಳಿ ಎಂದು ಕರೆ ನೀಡಿದರು.




ಕನಕಪುರದ ಮುಮ್ಮಡಿ ನಿರ್ವಾಣ ಸ್ವಾಮೀಜಿ ಮಾತನಾಡಿ, ಉತ್ತಮ ಸಮಾಜ ಕಟ್ಟಬೇಕಾದರೆ ಎಲ್ಲರೂ ಒಗ್ಗೂಡಿ ನಡೆಯಬೇಕೆಂಬ ಮನಸ್ಥಿತಿ ಬರಬೇಕು. ಬಸವಣ್ಣರವರ ವ್ಯಕ್ತಿತ್ವದಿಂದಾಗಿ ಅಕ್ಕಪಕ್ಕದ ರಾಜ್ಯದ ಶಿವಭಕ್ತರೆಲ್ಲರೂ ಸಹ ಒಗ್ಗೂಡಿದರು. 12ನೇ ಶತಮಾನದ ಬಸವಣ್ಣರವರು ಐತಿಹಾಸಿಕ ವ್ಯಕ್ತಿಯಾಗಿ ಕಂಡು ಬಂದಿದ್ದು 18ನೇ ಶತಮಾನದಲ್ಲಿ. ಬಸವಾದಿ ಶರಣರ ತತ್ವ, ಆದರ್ಶ, ಬೋಧನೆಗಳ ಮೂಲಕ ಸಾಮಾಜಿಕ ಜಾಗೃತಿ ಉಂಟು ಮಾಡಿ ಎಲ್ಲರನ್ನೂ ಒಗ್ಗೂಡಿಸಲು ಬಸವಣ್ಣನವರ ಜಯಂತಿ ಆಚರಣೆಗೆ ತರಲಾಯಿತು. ಪರಿಪೂರ್ಣ ಉತ್ತಮ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರು ಬಸವಣ್ಣರ ವಚನಗಳು, ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಮಲ್ಲನಮೂಲೆಯ ಕಂಬಳೀಶ್ವರ ಮಠದ ಶ್ರೀಚನ್ನಬಸವ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮುನ್ನ ಬಸವೇಶ್ವರರ ಪುತ್ಥಳಿ ಮೆರವಣಿಗೆಗೆ ನಗರದ ಶಿವಪಾದಸ್ವಾಮಿ ಗದ್ದುಗೆ ಬಳಿ ಮಲ್ಲನಮೂಲೆ ಶ್ರೀಚನ್ನಬಸವ ಸ್ವಾಮೀಜಿ ಚಾಲನೆ ನೀಡಿದರು. ನಂದಿಧ್ವಜ, ವೀರಗಾಸೆ, ಭಜನಾತಂಡ, ಅಲಂಕೃತ ಸ್ತಬ್ಧಚಿತ್ರ, ಜೋಡಿ ಎತ್ತಿನಗಾಡಿ, ನಾದಸ್ವರ, ಪೂರ್ಣಕುಂಭದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ಅದ್ಧೂರಿ ಮೆರವಣಿಗೆ ನಡೆಸಲಾಯಿತು.

ಸಮಾರಂಭದಲ್ಲಿ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಚಿನ್ನಸ್ವಾಮಿ, ಬದನವಾಳು ಮಂಜುನಾಥ್, ಮಧು, ಮಂಜುಳಾ ಮಧು, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮುಖಂಡರಾದ ಮಲ್ಲೇಶ್, ಅಣ್ಣಬಸವಣ್ಣ, ಮಹದೇವಮೂರ್ತಿ, ಕುರಿಹುಂಡಿ ಮಹೇಶ್, ಪ್ರಕಾಶ್, ಸೇರಿದಂತೆ ವಿವಿಧ ಮಠದ ಶ್ರೀಗಳು ಇದ್ದರು.

ಪ್ರಥಮ ವರ್ಷದ ಪುಣ್ಯಸ್ಮರಣೆ



ಕೆ. ಗೋವಿಂದರಾಜು
ಮಾಲೀಕರು: ಅಯೋಧ್ಯ ಖಾರತಿಂಡಿ
ಸದಾ ನಮ್ಮ ನೆನಪಿನಲ್ಲಿರುವ
ಪತ್ನಿ ಮತ್ತು ತಮ್ಮಂದಿರು ಹಾಗೂ PRK ಕುಟುಂಬವರ್ಗದವರು

ಮೊದಲನೇ ವರ್ಷದ ಸವಿನೆನಪು



ಶ್ರೀ ಮರಿಮಾದಯ್ಯ
ನಿಧನ : 05-06-2021
ದುಃಖತಪ್ತರು: ಹೆಂಡತಿ ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಜಕ್ಕೂರು ಗ್ರಾಮಸ್ಥರು

14ನೇ ವರ್ಷದ ಚಿರಸ್ಮರಣೆ



ಶ್ರೀ ದೊಡ್ಡ ಬಸವಯ್ಯನವರು
ಮರಣ : 05-06-2009
ಕಷ್ಟಗಳನ್ನು ನೀವು ನುಂಗಿ, ಸುಖವನ್ನು ನಮಗೆ ನೀಡಿ ಇರುವುದರಲ್ಲೇ ನಮ್ಮನ್ನೆಲ್ಲ ಸಾಕಿ ಬೆಳೆಸಿ ದೊಡ್ಡವರನ್ನಾಗಿ ಮಾಡಿ ಮರೆಯಾದ ನಿಮಗೆ ನಮ್ಮೆಲ್ಲರ ಕಣ್ಣೀರ ಕಾಣಿಕೆಗಳು
ದುಃಖತಪ್ತರು: ಪತ್ನಿ ಸಾಕಮ್ಮ ದೊಡ್ಡಬಸವಯ್ಯ, ಮಗಳು ದಾಕ್ಷಾಯಿಣಿ ಅಳಿಯ ನಾಗೇಶ್, ಮಗ ಎನ್. ಬಿ. ರಾಜಯ್ಯ (ಅಜಯ್) ಸೊಸೆ ರಕ್ಷಿತಾ, ಮೊಮ್ಮಕ್ಕಳು ಎನ್. ಜಿ. ಯೋಗೇಶ್ ಪ್ರೀತಮ್, ಎನ್. ಜಿ.ಖುಷಿ ಪ್ರಿಯದರ್ಶಿನಿ
ಇಂದ: ಬಿ. ಭಾಗ್ಯ ಬಸವಯ್ಯ, MA., ಕೈಗಾರಿಕೋದ್ಯಮಿಗಳು 4ನೇ ಕ್ರಾಸ್, ಅಶೋಕಪುರಂ, ನಂಜನಗೂಡು ಟೌನ್

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು - 570028.
ದೂರವಾಣಿ ಸಂಖ್ಯೆ:0821-2474475, ಫ್ಯಾಕ್ಸ್ ನಂ.0821-2474476,
ಇ-ಮೇಲ್ : purmymul@gmail.com


ಟೆಂಡರ್ ಪ್ರಕಟಣೆ (ಇ-ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಆಡಿ www.eproc.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No.100-288/mymul /Pur/e-proc/2022	ಹೈನುರಾಸುಗಳ(ಮಿಶ್ರ ತಳಿ ಹಸು/ದೇಸಿ ತಳಿ/ ಎಮ್ಮೆ ಹಾಗೂ ಇತರೆ (ಗರ್ಭ ಧರಿಸಿರುವ)ರಾಸುಗಳು) ಗುಂಪು ವಿಮಾ ಯೋಜನೆಯಡಿ(ಪಿ.ಟಿ.ಡಿ. ಹೊರತುಪಡಿಸಿ) 3 ವರ್ಷದ ಅವಧಿಗೆ ವಿಮೆ ಮಾಡಿಸುವ ಬಗ್ಗೆ.	26.06.2022 ಸಂಜೆ5.00 ಗಂಟೆಯವರೆಗೆ
2	KMF/2022-23/IND10052	ಒಕ್ಕೂಟಕ್ಕೆ ಅಧಿಕಾರಿ/ಸಿಬ್ಬಂದಿಗಳಿಗೆ ಅಗತ್ಯವಿರುವ ಸಮವಸ್ತ್ರ ಖರೀದಿಸುವ ಬಗ್ಗೆ.	06.06.2022 ಸಂಜೆ5.00 ಗಂಟೆಯವರೆಗೆ
3	IFT No.100-289/mymul /Pur /e-proc /2022	ಒಕ್ಕೂಟಕ್ಕೆ ಬಿ.ಎಂ.ಸಿಗಳಿಗೆ ಪೆಸ್ಟ್ ಕಂಟ್ರೋಲ್ ಸೇವೆ ಮಾಡಿಸಲು ಹಾಗೂ ಒಕ್ಕೂಟದಲ್ಲಿರುವ ಫೀ ಬಾಯ್ಲರ್‌ಗಳನ್ನು ಹಳೇಯ ಡೇರಿಯಿಂದ ಮೇಗಾ ಡೇರಿಗೆ ವರ್ಗಾಯಿಸಿ ರೀಪೇರಿ ಮಾಡಿಸುವ ಬಗ್ಗೆ.	13.06.2022 ಸಂಜೆ5.00 ಗಂಟೆಯವರೆಗೆ
4	KMF/2022-23/IND10056	ಒಕ್ಕೂಟಕ್ಕೆ ಅಗತ್ಯವಿರುವ ಪ್ಯಾಲೇಟ್‌ಗಳನ್ನು, ಹಾಗೂ ಸಿ.ಐ.ಪಿ ಟ್ಯಾಂಕ್‌ಗಳು ಹಾಗೂ ಬಿಡಿಭಾಗಗಳನ್ನು ಖರೀದಿಸಿ ಅಳವಡಿಸುವ ಬಗ್ಗೆ.	18.06.2022 ಸಂಜೆ5.00 ಗಂಟೆಯವರೆಗೆ
5	KMF/2022-23/IND10064	ಸಕ್ಕರೆ ಹಾಗೂ ಉಪಹಾರ ಗೃಹಕ್ಕೆ ಅಗತ್ಯವಿರುವ ದಿನಸಿ ಸಾಮಾಗ್ರಿಗಳ ಖರೀದಿಸುವ ಬಗ್ಗೆ.	18.06.2022 ಸಂಜೆ5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430803 / 9845284700) ಮೂಲಕ ಸಂಪರ್ಕಿಸಬಹುದಾಗಿದೆ.
ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

24ನೇ ವರ್ಷದ ಸವಿನೆನಪು



ಎಸ್.ಮಹದೇವ
ಜ: 15-7-1977 - ಮ: 5-6-1998
ನೀವು ನಮ್ಮನ್ನಗಲಿ 24 ವರ್ಷ ಕಳೆದರೂ ಪ್ರತಿ ದಿನವೂ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ತಂದೆ, ತಾಯಿ ಸೋದರ, ಸೋದರಿ, ಅತ್ತಿಗೆ, ಕುಟುಂಬ ವರ್ಗದವರು, ಕುವೆಂಪುನಗರ, ಮೈಸೂರು

ಮೊದಲನೇ ವರ್ಷದ ಸವಿನೆನಪು



ಎಲ್. ಸಿದ್ದಚಾರ್
(KSIC) ಮುನೇಶ್ವರನಗರ
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ
ನಿಮ್ಮ ನೆನಪಿನಲ್ಲಿರುವ: ಪತ್ನಿ ಭಾಗ್ಯಮ್ಮ, ಮಗ ಶಿವಕುಮಾರ್.ಎಸ್, ಸೊಸೆ, ಹೆಣ್ಣು ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು-570005


ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ-3:881:2022-23 ದಿನಾಂಕ: 01-06-2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) ರನ್ವಯ

ಮೈಸೂರು ತಾಲ್ಲೋಕು, ಇಲವಾಲ ಹೋಬಳಿ, ನಾಗವಾಲ ಗ್ರಾಮದ ಸರ್ವೆ ನಂ. 336 ರ 06 ಎಕರೆ 37 ಗುಂಟೆ ಮತ್ತು 335/3 ರ 03 ಎಕರೆ 15 ಗುಂಟೆ ಒಟ್ಟು 10 ಎಕರೆ 12ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಾಣಿಜ್ಯ (ಶೈಕ್ಷಣಿಕ, ಆರೋಗ್ಯ, ವಸತಿ & ಶಾಲಾ ಕಾಲೇಜು) ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಡಾ॥ ಚಂದ್ರಶೇಖರ್ ಜಿ.ಆರ್. ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಅಗತ್ಯ ಸೌಲಭ್ಯ ದೊರೆಯುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು-570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/- ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀಮಾನ್ ನಿಂಗರಾಜುರವರು
ನಿಧನ : 05-06-2021
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ ನಿಮ್ಮ ನೆನಪಿನಲ್ಲೇ ಇರುವ
ದುಃಖತಪ್ತರು: ಮೃತರ ಪತ್ನಿ ನಾಗಮ್ಮ, ಪುತ್ರ ನಂದೀಶ್, ಹೆಣ್ಣು ಮಕ್ಕಳು, ಸೊಸೆ, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಕಾಳೇಗೌಡನಕೊಪ್ಪಲು, ಚಿನಕುರುಳಿ ಹೋಬಳಿ, ಪಾಂಡವಪುರ ತಾಲ್ಲೂಕು